ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

25 ನವೆಂಬರ್ 2015 ಪುಟ 20 ರೂ. 15/-


ಸ್ವಾತಂತ್ರ್ಯದ ಹರಿಕಾರ ಟಿಪ್ಪುವನ್ನೇ ಮಣಿಸಿದ್ದ ಕೊಡವರು





ಬಿಹಾರ ಫಲಿತಾಂಶದ ಸಂದೇಶವೇನು?

ಬಿಹಾರ ಚುನಾವಣೆ: ಸಂಭ್ರಮಕ್ಕೆ ಕಾರಣಗಳಿವೆ, ಆತಂಕಕ್ಕೂ ಸಹ...



ಡಾ.ವಾಸು ಎಚ್.ವಿ.

ಮೋದಿ ಗೆದ್ದ ಲೋಕಸಭಾ ಚುನಾವಣೆಯ ನಂತರ ನಡೆದ ದೆಹಲಿ ವಿಧಾನಸಭಾ ಚುನಾವಣೆಯದ್ದೇ ಒಂದು ತೂಕವಾದರೆ, ಮೊನ್ನಿನ ಬಿಹಾರ ವಿಧಾನಸಭಾ ಚುನಾವಣೆಯದ್ದು ಇನ್ನೊಂದು ತೂಕ. ಎರಡರಲ್ಲೂ ಬಿಜೆಪಿ ಪಕ್ಷವು ಹೀನಾಯವಾಗಿ ಸೋತಿತು. ಒಂದಾದಮೇಲೆ ಒಂದರಂತೆ ಗೆಲುವು ಸಾಧಿಸುತ್ತಿದ್ದ ನರೇಂದ್ರ ಮೋದಿ ಟೀಂನ ವಿಜಯಯಾತ್ರೆಗೆ ಭಾರೀ ಬ್ರೇಕ್ ಹಾಕಿದ ಚುನಾವಣೆಗಳಿವು. ದೇಶದಲ್ಲಿ ಪ್ರಜಾಪ್ರಭುತ್ವ ಬೇಕು, ನೆಮ್ಮದಿ ನೆಲೆಸಬೇಕು, ಜನಸಾಮಾನ್ಯರು ಘನತೆಯಿಂದ ಬದುಕಬೇಕು, ಎಲ್ಲಾ ಬಗೆಯ ದಮನಿತ ಸಮುದಾಯಗಳು ಸ್ವಾತಂತ್ರ್ಯದ ಹವೆಯಲ್ಲಿ ಉಸಿರಾಡಬೇಕು ಎಂದು ಬಯಸುವವರೆಲ್ಲರಿಗೂ ಮೋದಿಯ ಅಬ್ಬರ ಸದಾ ಆತಂಕದಲ್ಲಿರುವಂತೆ ಮಾಡಿತ್ತು. ಹೀಗಾಗಿ ಬಿಹಾರ ಚುನಾವಣೆಯ ಫಲಿತಾಂಶ ಕೇವಲ ಸಮಾಧಾನವನ್ನಷ್ಟೇ ಅಲ್ಲದೇ, ಸಂಭ್ರಮವನ್ನೇ ತಂದಿತ್ತಿತು. ಆದರೆ, ಇದರೊಡನೆ ಕೆಲವು ಆತಂಕಗಳನ್ನೂ ಈ ಚುನಾವಣಾ ಪ್ರಕ್ರಿಯೆಯು ತಂದಿವೆ.


ಅಷ್ಟು ಸ್ಪಷ್ಟವಾದ ಸೆಕ್ಯುಲರ್-ಕಮ್ಯುನಲ್ ಧ್ರುವೀಕರಣದಲ್ಲಿ ಭಾಗಿಯಾಗದೇ, ಅನುಭವದ ವಿವೇಕದಿಂದ ಹೆಚ್ಚಾಗಿ ಪ್ರತಿಕ್ರಿಯಿಸುವ ಹಿರಿಯ ರೈತ ಕಾರ್ಯಕರ್ತರೊಬ್ಬರು ಬಿಹಾರದ ಫಲಿತಾಂಶವನ್ನು ವಿಶ್ಲೇಷಿಸಿದ ರೀತಿ ಆಶ್ಚರ್ಯವನ್ನುಂಟುಮಾಡಿತು. ಸಾಮಾನ್ಯವಾಗಿ 'ಮೋದಿ ಏನಾದರೂ ಒಳ್ಳೆಯದನ್ನು ಮಾಡ್ತಾನಾ ನೋಡೋಣ' ಎನ್ನುವ ಅವರಿಗೆ ಭಾನುವಾರ ಬೆಳಗ್ಗೆ ವಿಪರೀತ ಆತಂಕವಾಗಿತ್ತಂತೆ. ಅದರಲ್ಲೂ ಟಿವಿ ಚಾನೆಲ್‌ಗಳು ಬಿಜೆಪಿಯ 'ಸ್ಪಷ್ಟ ಮುನ್ನಡೆ'ಯನ್ನು ವಿಶ್ಲೇಷಿಸುತ್ತಾ ಕೂತಂತೆ, 'ಯದೆ ವಡ್ಕಳಕ್ಕೆ ಶುರು ಮಾಡ್ತು'. 'ಏನಪ್ಪಾ, ಹಿಂಗ್ ಆಗ್ತಿದೆ, ಇನ್ನು ದೇಶದ್ ಗತಿ ಏನು ಅನ್ನಿಸ್‌ಬಿಡ್ತು', 'ಆಮೇಲೆ ಮಧ್ಯಾಹ್ನದ ಮೇಲೆ ಸಮಾಧಾನ ಆಯ್ತು. ಸದ್ಯಕ್ಕೆ ಬಿಹಾರದ ಜನ ಮೋದಿಗೆ ಬುದ್ಧಿ ಕಲಿಸಿದ್ರು ಅಂತ್', 'ಆದ್ರೆ, ರಾತ್ರಿ ಇನ್ನೊಂದ್ ಅನ್ನುಸ್ತು ಸಾರ್. ಇವಾಗ ಈ ಕಾಂಗ್ರೆಸ್‌ನೋರ್‍ನ ಹಿಡಿಯಕ್ಕೆ ಆಗ್ದೇ ಹೋಗ್ಬಿಡುತ್ತೇನೋ. ಇವರೂ ಜನಸಾಮಾನ್ಯರ ಪರವಾಗಿ ಏನೂ ಮಾಡ್ದೇ ಸುಮ್ಮನೆ ಇರೋವಂಗೆ ಆಗ್ಬಿಡುತ್ತೆ ಅಂತ್'. ಸಮ್ಮಿಶ್ರ ಸರ್ಕಾರಗಳ ಸಂದರ್ಭದಲ್ಲೂ ಸಹ ಕಾರ್ಪೋರೇಟ್ ಪರವಾದ ನೀತಿಗಳನ್ನೇ ಜಾರಿ ಮಾಡಿದ ಇತಿಹಾಸವಿದ್ದರೂ, ಸ್ಪಷ್ಟವಾದ ಬಹುಮತ (ಘಾತುಕ ಬಹುಮತ!)ವನ್ನು ಜನವಿರೋಧಿ ನೀತಿಗಳನ್ನು ಜಾರಿ ಮಾಡಲು ಸಿಕ್ಕ ಲೈಸೆನ್ಸ್ ಎಂದು ಭಾವಿಸುವ ವಾತಾವರಣದಲ್ಲಿ ನಾವಿದ್ದೇವೆ.

ಆದರೆ, ಅಷ್ಟು ಮಾತ್ರವಲ್ಲದೇ, ಬಿಹಾರ ಚುನಾವಣಾ ಪ್ರಕ್ರಿಯೆಯು ನಮ್ಮಲ್ಲಿ ಆತಂಕ ಮೂಡಿಸಲು ಇನ್ನೂ ಹಲವು ಕಾರಣಗಳಿವೆ. ಈ ಚುನಾವಣೆಯಲ್ಲಿ ಮೋದಿಯ ಸೂತ್ರಗಳಲ್ಲಿ ಹಲವನ್ನು ನಿತೀಶ್-ಲಾಲೂ ಸಹ ಬಳಸಿದರು. ಈ ರೀತಿ ಬಳಸಿಯಾದರೂ ಅವರು ಯಶಸ್ವಿಯಾಗಲಿ, ಮೋದಿ ಸೋತಿದ್ದು ಒಳ್ಳೆಯದಾಯಿತು ಎಂಬ ಪರಿಸ್ಥಿತಿಯಲ್ಲೇ ಈ ದೇಶವಿದೆ. ಆ ಮಾತು ಬೇರೆ. ಅದೇನೇ ಇದ್ದರೂ, ಇದರ ತಕ್ಷಣದ ಹಾಗೂ ದೀರ್ಘಕಾಲದ ಪರಿಣಾಮಗಳ ಬಗ್ಗೆ ಎಚ್ಚರವನ್ನಿಟ್ಟುಕೊಳ್ಳುವ ಅಗತ್ಯವಂತೂ ಇದ್ದೇ ಇದೆ.

ಉದಾಹರಣೆಗೆ ಬಿಹಾರ್ ಕೆ ಅಸ್ಮಿತಾದ ಸೂತ್ರ. ಗುಜರಾತ್ ಕೆ ಅಸ್ಮಿತಾವನ್ನು ಮೋದಿ ಹತ್ತು ಹಲವು ಸಾರಿ ಬಳಸಿದ್ದರು. ಗುಜರಾತ್ ಗಲಭೆಯನ್ನು ಹೊರಗಿನವರು ಮುಂದಿಡುತ್ತಿರುವ ರೀತಿಯಿಂದ ಗುಜರಾತ್‌ನ ಅಸ್ಮಿತೆಗೆ ತೊಂದರೆಯಾಗಿದೆ ಎಂದು ಮೋದಿ ಹೇಳಿದ್ದನ್ನು ನಾವ್ಯಾರೂ ಮರೆತಿಲ್ಲ. ಅದೇ ರೀತಿ, ಮೋದಿಯ ಕುರಿತು ಸೋನಿಯಾ ಗಾಂಧಿ ಹೇಳಿದ್ದ 'ಮೌತ್ ಕಾ ಸೌದಾಗರ್' ಮಾತನ್ನೂ ಸಹ ಗುಜರಾತಿಗರ ಮೇಲಾದ ದಾಳಿಯೆಂಬಂತೆ ಬಿಂಬಿಸಲಾಯಿತು. ಗುಜರಾತ್ ಅಸ್ಮಿತೆಯ ರಾಜಕಾರಣವನ್ನೇ ಇಂದು ಭಾರತದ ಅಸ್ಮಿತೆಯ ರಾಜಕಾರಣವನ್ನಾಗಿಯೂ ಮಾಡುವುದು ನಡೆಯುತ್ತಿದೆ. ಭೈರಪ್ಪರಂಥವರು ರಾಷ್ಟ್ರೀಯ ಪ್ರೊಫೆಸರ್ ಆಗುವುದು, ಭಗವದ್ಗೀತೆ ರಾಷ್ಟ್ರೀಯ ಗ್ರಂಥವೆಂದು ಬಿಂಬಿಸಲು ಹೊರಡುವುದು, ಹಸುವು ಸಮಸ್ತ ಭಾರತೀಯರ ಮಾತೆ ಎಂಬಂತೆ ಬಿಂಬಿಸಲ್ಪಡುವುದು, ಭಾರತೀಯ ಸಂಸ್ಕೃತಿ ಇತ್ಯಾದಿ ಇತ್ಯಾದಿಗಳೆಲ್ಲವೂ ಅದರ ಭಾಗವೇ ಆಗಿದೆ. ಮೋದಿ ನಿತೀಶ್ ಕುಮಾರ್‌ರ ಡಿಎನ್‌ಎ ಬಗ್ಗೆ ಮಾತನಾಡಿದಾಗ, ಅದನ್ನು ಎನ್‌ಡಿಎ ವಿರುದ್ಧ ತಿರುಗಿಸಿದ್ದೂ ಬಿಹಾರೀ ಅಸ್ಮಿತೆಯ ಅಸ್ತ್ರದಿಂದಲೇ.

ಅದನ್ನೇ ಮುಂದುವರೆಸಿ, ನಿತೀಶ್ ವರ್ಸಸ್ ಮೋದಿ ಎಂಬ ರೀತಿಯ ಪ್ರಚಾರ ವೈಖರಿಯನ್ನೂ ತಮ್ಮ ಅನುಕೂಲಕ್ಕೆ ತಕ್ಕಂತೆ ಮಹಾಮೈತ್ರಿಕೂಟ ಬಳಸಿಕೊಂಡಿತು. ಈ ಬಗೆಯ ಪ್ರಚಾರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿತ್ತು. ಇಡೀ ಚುನಾವಣೆಯನ್ನು ರಾಹುಲ್ ಗಾಂಧಿಯೋ ಅಥವಾ ಮೋದಿಯೋ ಎಂಬ ವ್ಯಕ್ತಿಗಳ ನಡುವಿನ ಆಯ್ಕೆಯನ್ನಾಗಿ ಪರಿವರ್ತಿಸಿದಾಗ ಮೋದಿಯ ಗೆಲುವು ಸುಲಭವಾಯಿತು. ಹಾಗಾದಾಗ ನಿತೀಶ್ ಕುಮಾರ್‌ರ ಎದುರಿಗೆ ಸರಿಗಟ್ಟಬಲ್ಲ ಸ್ಥಳೀಯ ಬಿಜೆಪಿ ನಾಯಕನಿಲ್ಲದಿರುವುದರಿಂದ ಮೋದಿಯನ್ನೇ ಎದುರಾಳಿಯಾಗಿಸುವುದು ಬಿಜೆಪಿಗೆ ಅನಿವಾರ್ಯವಾಯಿತು.





ಆಗ ಬಿಹಾರಿಯೋ, ಬಾಹರಿಯೋ (ಬಿಹಾರದವನೋ, ಹೊರಗಿನವನೋ) ಎಂಬ ಪ್ರತ್ಯಸ್ತ್ರದ ಮುಖಾಂತರ ಬಾಹರಿಯನ್ನು ಸೋಲಿಸಲಾಯಿತು.

ಇನ್ನು ಜಾತಿರಾಜಕಾರಣದ ಮತ್ತು ಜಾತಿ ಧ್ರುವೀಕರಣದ ವಿಚಾರ. ಮೇಲ್ಜಾತಿಗಳ ವಿರುದ್ಧ, ದಮನಿತ ಜಾತಿಗಳ ಧ್ರುವೀಕರಣವು ಸರಿಯಾದದ್ದು ಮತ್ತು ಅದೊಂದೇ ದಾರಿ ಎಂಬ ಪ್ರತಿಪಾದನೆಯೂ ಇದೆ. ಅದನ್ನೇ ನಾವು ಮಾಡಿದ್ದೇವೆ ಎಂಬುದನ್ನು ಮುಚ್ಚುಮರೆಯಿಲ್ಲದೆ ಮಹಾಮೈತ್ರಿಕೂಟ ಹೇಳಿದೆ. ಜಾತಿವಿನಾಶದ ಅಜೆಂಡಾಕ್ಕೆ ತಿಲಾಂಜಲಿ ನೀಡುವ 'ಜಾತಿಶೋಷಣೆ ವಿರೋಧಿ' ಹೋರಾಟದ ವಿಧಾನಗಳಲ್ಲಿ ಇದೂ ಒಂದಾಗಿದೆ. ಇದಕ್ಕೆ ಭಾರತದ ರಾಜಕಾರಣದಲ್ಲೇ ಹಲವು ನಿದರ್ಶನಗಳು ದೊರೆಯುತ್ತವೆ. ಮೊನ್ನಿನ ಲೋಕಸಭಾ ಚುನಾವಣೆಯಲ್ಲಿ ಉತ್ತರಪ್ರದೇಶದ ಯಾದವರು, ಜಾಟರು ಮತ್ತು ದಲಿತರು ಕ್ರಮವಾಗಿ ಸಮಾಜವಾದಿ ಪಕ್ಷ, ಲೋಕದಳ ಮತ್ತು ಬಿಎಸ್‌ಪಿಯನ್ನು ಬಿಟ್ಟು ಬಿಜೆಪಿಗೆ ಮತ ಹಾಕಿದ್ದು ಯಾಕೆ? ಜಾತಿ ಧ್ರುವೀಕರಣವು ಹಿಂದೂ - ಮುಸ್ಲಿಂ ಧ್ರುವೀಕರಣಕ್ಕೂ ಕಾರಣವಾಗಬಲ್ಲದು ಎಂಬುದನ್ನು ಅರಿತಿದ್ದ ಕೋಮುವಾದಿಗಳು ಮುಜಫರ್‌ನಗರ ಗಲಭೆಯನ್ನು ಆಯೋಜಿಸಿ ಇದನ್ನು ಸಾಧಿಸಿಕೊಂಡಿದ್ದರು.

'ಅಭಿವೃದ್ಧಿಯೇ ಪ್ರಧಾನವಾದ ಅಜೆಂಡಾ ಆಗಿತ್ತು; ಜಾತಿ ಕೆಲಸ ಮಾಡಿಲ್ಲ' ಎಂಬ ಮಾತು ಬಹುತೇಕ ಸಂದರ್ಭಗಳಲ್ಲಿ ಪೂರ್ತಿ ಸುಳ್ಳೂ ಅಲ್ಲ, ಪೂರ್ತಿ ನಿಜವೂ ಅಲ್ಲ. ಆದರೆ ಒಂದಂತೂ ಸತ್ಯ. ದಮನಿತ ಜಾತಿಗಳ ಧ್ರುವೀಕರಣಕ್ಕೆ ಒಂದು ಸಕಾರಾತ್ಮಕ ಆಯಾಮವಿದೆ. ಆದರೆ, ಅದು ಅಲ್ಲಿಗೇ ನಿಂತರೆ ಒಂದು ಗಂಭೀರವಾದ ಅಪಾಯವಿದೆ. ಅದು ಮೇಲ್ಜಾತಿಗಳ ಸದೃಢೀಕರಣಕ್ಕೂ ದಾರಿ ಮಾಡಿಕೊಡುತ್ತದೆ. ಬಿಹಾರ ರಾಜ್ಯದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಯಾದವರು, ಕುರ್ಮಿಗಳು ಇತ್ಯಾದಿ ಸಮುದಾಯಗಳ ಪ್ರಬಲ ನಾಯಕರು ನಿರ್ದಿಷ್ಟ ಕಾರಣಗಳಿಂದಾಗಿ ಈಗ ಸದ್ಯ ಬಿಜೆಪಿ ವಿರೋಧಿ ಪಾಳಯದಲ್ಲಿದ್ದಾರೆ. ಅವರಿಗೆ ಸಮಾಜವಾದದ ಪರಿಭಾಷೆಯೂ ಗೊತ್ತು, ಕೋಮುವಾದದ ಅಪಾಯಗಳ ಬಗ್ಗೆಯೂ ಮಾತನಾಡಬಲ್ಲರು. ಆದರೆ ಇದು ಎಂದೆಂದಿಗೂ ಬದಲಾಗದ ಸಮೀಕರಣ ಅಲ್ಲ. ಏಕೆಂದರೆ, ಈ ಶಕ್ತಿಗಳು ಸೈದ್ಧಾಂತಿಕ ನೆಲೆಯ, ವೈಚಾರಿಕವಾಗಿ ಗಟ್ಟಿಯುಳ್ಳ ಕಾರ್ಯಕರ್ತರನ್ನಾಧರಿಸಿದ ಪಕ್ಷಗಳೂ ಅಲ್ಲ, ಚಳವಳಿಗಳಂತೂ ಮೊದಲೇ ಅಲ್ಲ.

ಸ್ಪಷ್ಟವಾದ ವೈಚಾರಿಕ ನೆಲೆಗಟ್ಟು (ಇದರಲ್ಲಿ ಜಾತಿ ಶೋಷಣೆಯೂ ಒಂದು ಪ್ರಮುಖ ಅಂಶ) ಇಲ್ಲದ ಐಡೆಂಟಿಟಿ ರಾಜಕಾರಣವು, ಶೋಷಕರೊಡನೆಯೂ ಕೈಜೋಡಿಸಲು ದಾರಿ ಮಾಡಿಕೊಡುತ್ತದೆ. ಇದೇ ನಿತೀಶ್ ಕುಮಾರ್, ಜಾರ್ಜ್ ಫರ್ನಾಂಡಿಸ್ ಮತ್ತಿತರರು ಯಾವ ಮುಜುಗರವೂ ಇಲ್ಲದೇ ಎನ್‌ಡಿಎದೊಳಗೆ ಇರಲು ಸಾಧ್ಯವಾಗಿದ್ದು ಹೇಗೆ ಎಂಬುದಕ್ಕೆ ಉತ್ತರ ನಮಗೆ ಇಲ್ಲಿಯೂ ಸಿಗಬಹುದು. ಅದು ಕೇವಲ ಜಾತಿ ಐಡೆಂಟಿಟಿ ರಾಜಕಾರಣ ಮಾತ್ರವಲ್ಲದೇ, ಕಾಂಗ್ರೆಸ್ ವಿರೋಧ ಎಂಬ ಐಡೆಂಟಿಟಿಯೂ ಆಗಿತ್ತು.

ಮಹಾಮೈತ್ರಿಕೂಟದ ಗೆಲುವಿಗೆ ಕಾರಣವೆಂದು ನಮ್ಮ ಮಾಧ್ಯಮಗಳು ಬಿಂಬಿಸುತ್ತಾ ಬಂದಿರುವ ಇನ್ನೊಂದು ಅಸ್ತ್ರ ಕಿಶೋರ್ ಎಂಬಾತನದ್ದು. ಈತ ಲೋಕಸಭಾ ಚುನಾವಣೆಯಲ್ಲಿ 'ಮೋದಿಯ ಚಾಣಕ್ಯ'ನಾಗಿದ್ದನೆಂದೂ, ಇದೀಗ ನಿತೀಶ್ ಕುಮಾರ್ ಎಂಬ ಚಂದ್ರಗುಪ್ತನಿಗೆ ನೆರವಾದದ್ದರಿಂದಲೇ ಈ ಗೆಲುವು ಸಾಧ್ಯವಾಯಿತು ಎಂದು ಹೇಳಲಾಗುತ್ತಿದೆ. ಕಿಶೋರ್‌ನ 'ಕೊಡುಗೆ'ಗೆ ತಕ್ಕ ಮನ್ನಣೆ ದೊರೆಯದೇ, ಮೋದಿಯ ಗೆಲುವಿನ ರೂವಾರಿ ಅಮಿತ್‌ಷಾ ಎಂದಾಗಿದ್ದರಿಂದ, ಆತ ಮೋದಿಯ ವಿರೋಧಿ ಪಾಳಯಕ್ಕೆ ಸೇರಿಕೊಂಡ ಎಂಬುದು ಚಲಾವಣೆಯಲ್ಲಿದೆ. ವ್ಯಕ್ತಿಗತ ಹಿತಾಸಕ್ತಿ, ಈಗೋ ಮತ್ತು ಹಣವು ನಿಷ್ಠೆಯ ಬದಲಾವಣೆಯನ್ನು ಇಷ್ಟು ಸುಲಭ-ಸಾಧ್ಯಗೊಳಿಸು... ಇದರ ದೂರಗಾಮಿ ಪರಿಣಾಮ ಏನಾಗಿರಬಹು... ಯೋಚಿಸಬೇಕಲ್ಲವೇ?

ಸಾರ್ವಜನಿಕ ವಾಗ್ವಾದದ ಮಟ್ಟ ಕುಸಿಯುತ್ತ... ಎಂದು ಹೇಳುವಾಗ ಅದನ್ನು ದುರುದ್ದೇಶಪೂ... ನಡೆಸುವ ಪ್ರತಿಗಾಮಿ ಶಕ್ತಿಗಳನ್ನೂ, ಅನಿವಾ... ಸಂದರ್ಭದ ಒತ್ತಡದಲ್ಲಿ ಬಳಸುವ ಇತರರನ್ನ... ಸ್ಥಾಯಿಯಲ್ಲಿಟ್ಟು, ಇಬ್ಬರದ್ದೂ ತಪ್ಪೇ ಎಂದು ಹ... ಸರಿಯಲ್ಲ. ವಾಸ್ತವದಲ್ಲಿ ಇಂತಹ ನ್ಯೂಟ್ರ... ಪ್ರತಿಗಾಮಿಗಳಿಗೇ ಹೆಚ್ಚು ಅನುಕೂಲ ಮಾಡಿಕೆ... ರಂಗ ಬಿಟ್ಟು ಓಡಿಹೋಗದ ಸ್ಪರ್ಧಿಯು ಎದುರಿ... ಬೆತ್ತಲಾಗಿ ನಿಂತಿರುವಾಗ ಶರಣಾಗಲಾಗುವುದಿಲ್ಲ, ... ಚೌಕಟ್ಟನ್ನೂ ಎಲ್ಲಾ ಸಂದರ್ಭಗಳಲ್ಲೂ... ನಿರ್ಧರಿಸಲಾಗುವುದಿಲ್ಲ. ಹಾಗಾಗಿ ಇಂತಹ ವಾ... ದೇಶದ ಅತೀದೊಡ್ಡ ಸುಳ್ಳುಗಾರರ ಮುಂ... ಎದುರಿಸುವ ವ್ಯಕ್ತಿಗಳನ್ನು ಟೀಕೆ ಮಾ... ಸರಿಯಾಗುವುದಿಲ್ಲ. ಬದಲಿಗೆ ಅಂತಹ ಸಂದ... ಸೃಷ್ಟಿಯಾಯಿತು, ಅದನ್ನು ಹೇಗೆ ಬದಲಿಸಬೇ... ಕುರಿತು ಮಾಡುವ ಚರ್ಚೆಯು ಹೆಚ್ಚು ಫಲಕಾರಿ... ಸದ್ಯಕ್ಕೆ ನಿತೀಶ್ ಮತ್ತು ಲಾಲೂರನ್ನು ಅಭಿನ... ಆದರೆ, ಇಲ್ಲಿಂದ ಮುಂದಕ್ಕೆ ಹೋಗುವ ... ನಮ್ಮ ಚಿಂತನೆ ಹಾಗೂ ಕ್ರಿಯೆಯನ್ನು ಹರಿತ... ಅಗತ್ಯ ಈ ಸಂದರ್ಭದಲ್ಲಿ ಹೆಚ್ಚಿರಬಹುದೆನಿಸು...

ಸ್ವಾತಂತ್ರ್ಯದ ಹರಿಕಾರ ಟಿಪ್ಪು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕರ್ನಾಟಕದ ವೀರಾಧಿವೀರ, ಧೀರಾಧಿಧೀರ ಟಿಪ್ಪು ...ನನ್ನು ಸಂಘ ಪರಿವಾರದವರು ಟೀಕಿಸಿದಷ್ಟೂ ಆತ ...ಗೆ ಹತ್ತಿರವಾಗುತ್ತಾನೆ, ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಾನೆ. ...ಕ್ಷಣಿತ ಮುಖ್ಯವಾಗಿ ಆತ ಸತ್ತು ಎರಡು ಶತಮಾನಗಳೇ ...ದ್ದರೂ ದಿನೇದಿನೇ ಜೀವಂತವಾಗಿ ಜನರ ಮನಸ್ಸಿನಲ್ಲಿ ...ಂದುವರಿಯುತ್ತಾನೆ. ಯಾಕೆಂದರೆ ಆತನನ್ನು ...ಾಧಿಸಲು ಸಂಘಿಗಳು ಪ್ರಯೋಗಿಸುತ್ತಿರುವ ತರ್ಕಗಳೇ ... ಹಾಸ್ಯಾಸ್ಪದವಾಗಿವೆ!

...ಉದಾಹರಣೆಗೆ ಮೈಸೂರಿನ ಶಾಸಕ ಗೋ ...ಮಧುಸೂದನ ಮಂಡಿಸಿರುವ ತರ್ಕವನ್ನೇ ತೆಗೆದುಕೊಳ್ಳಿ. ...ಪ್ಪು ಭಾರತಕ್ಕೆ ಅಫಘಾನಿಸ್ತಾನದ ರಾಜ ಅಹಮದ್ ... ಅಬ್ದಾಲಿಯನ್ನು ಆಹ್ವಾನಿಸಿದ್ದ ಎಂಬುದನ್ನು ...ಯಬಾರದು. ಇದರಿಂದಲೇ ಆತ ದೇಶದ್ರೋಹಿ ಆಗಿದ್ದ ...ಬುದು ಸಾಬೀತಾಗುತ್ತದೆ" ಎಂದು ಅಬ್ಬರಿಸಿದ್ದಾನೆ ... ಗೋ ಮಧುಸೂದನ ಒಬ್ಬ ಗೋಮುಖವ್ಯಾಘ್ರ. ...ವು ಇತಿಹಾಸ ತಜ್ಞರು ಸ್ಪಷ್ಟಪಡಿಸಿರುವಂತೆ ...ಘಾನಿಸ್ತಾನದ ರಾಜ ಅಹಮದ್ ಷಾ ಅಬ್ದಾಲಿ ಭಾರತದ ...ಲೆ ಮೊದಲು ದಾಳಿ ಇಟ್ಟದ್ದು 1748ರಲ್ಲಿ. ಆಗಿನ್ನೂ ... ಹುಟ್ಟೇ ಇರಲಿಲ್ಲ! ಅಷ್ಟೇ ಅಲ್ಲ, ಅಹಮದ್ ಷಾ ...ಬ್ದಾಲಿ 1761ರಲ್ಲಿ ಮರಾಠರನ್ನು ಪಾಣಿಪಟ್ ಯುದ್ಧದಲ್ಲಿ ...ೋಲಿಸಿದಾಗ ಟಿಪ್ಪು ಹತ್ತು ವರ್ಷದ ಬಾಲಕ!! ಇದೆಲ್ಲದರ ...ೇ, ಗೋ ಮಧುಸೂದನ ಆರೋಪಿಸಿರುವಂತೆ ...ಹಮದ್ ಷಾ ಅಬ್ದಾಲಿ ಭಾರತದ ಮೇಲೆ ಟಿಪ್ಪುವಿನ ...ಹ್ವಾನವಿಲ್ಲದೆಯೇ ದಾಳಿ ಮಾಡಿದ್ದ.

...ಟಿಪ್ಪು ಭಾರತಕ್ಕೆ ಆಹ್ವಾನಿಸಿದ್ದು ಅಹಮದ್ ಷಾ ...ಬ್ದಾಲಿಯ ಮೊಮ್ಮಗ ಜಮನ್ ಷಾ ದುರ್ರಾನಿಯನ್ನು. ...ೇ ಅಲ್ಲ, ಟಿಪ್ಪು ಫ್ರಾನ್ಸಿನ ನೆಪೋಲಿಯನ್ ...ೋನಾಪಾರ್ಟೆಯನ್ನೂ, ಟರ್ಕಿಯ ಒಟ್ಟಮಾನ್ ...ಮ್ರಾಜ್ಯದ ದೊರೆಯನ್ನೂ ಭಾರತಕ್ಕೆ ಆಹ್ವಾನಿಸಿದ್ದ ...ಬುದೂ ಐತಿಹಾಸಿಕ ವಾಸ್ತವ. ಅದನ್ನು ಯಾರೂ ...ಳಿಸಲಾಗುವುದಿಲ್ಲ. ಆದರೆ ಅವರೆಲ್ಲರನ್ನು ಟಿಪ್ಪು ಯಾತಕ್ಕೆ ...ಹ್ವಾನಿಸಿದ್ದ ಎಂಬುದು ಮುಖ್ಯ. ಆತ ಅವರೆಲ್ಲರೊಂದಿಗೆ ...ತೆಗೂಡಿ 'ಮಹಾಮೈತ್ರಿಕೂಟ'ವನ್ನು ನಿರ್ಮಿಸಲು ...ರಟಿದ್ದು ಭಾರತದಿಂದ ಬ್ರಿಟಿಷರನ್ನು ಒದ್ದೋಡಿಸುವ ...ದ್ದೇಶದಿಂದಾಗಿ ಎಂಬುದು ವಾಸ್ತವ.

... ಇಲ್ಲಿ ಸಂಘಿಗಳ ತರ್ಕದಲ್ಲಿ ಎರಡು ದೋಷಗಳು ...ಣುತ್ತಾಣುತ್ತವೆ.

... ಒಂದು: ಬ್ರಿಟಿಷರ ವಿರುದ್ಧ ಯುದ್ಧ ಮಾಡಲು ...ಘಾನಿಸ್ತಾನ, ಫ್ರಾನ್ಸ್ ಮತ್ತು ಟರ್ಕಿಯ ಸೈನ್ಯಗಳನ್ನು ...ರತಕ್ಕೆ ಟಿಪ್ಪು ಆಹ್ವಾನಿಸಿದ್ದು 'ದೇಶದ್ರೋಹ' ಕೆಲಸವಾದರೆ ...ಷಿ ಮತ್ತು ಗೋ-ಮ ಪ್ರಕಾರ ಬ್ರಿಟಿಷರು ...ಯಸಮ್ಮತವಾಗಿ ಭಾರತದ ದೊರೆಗಳಾಗಿದ್ದರು! ಆ ...ಣಕ್ಕೇ ಆತ ಮಾಡಿದ್ದು ದೇಶದ್ರೋಹದ ಕೆಲಸ!! ...ಕ್ಕಿಂತ ಹುಚ್ಚುತನ ಮತ್ತೊಂದಿರಲು ಸಾಧ್ಯವೇ?

... ಎರಡನೆಯದು: ಯುದ್ಧದಲ್ಲಿ ವೈರಿಯ ವೈರಿ ತನ್ನ ...ತ್ರ ಎಂಬ ತರ್ಕವನ್ನು ಹಲವರು ಈ ಹಿಂದೆ ...ಪಡಿಸಿಕೊಂಡಿದ್ದಿದೆ. ಆ ನಿಟ್ಟಿನಲ್ಲೇ ಟಿಪ್ಪು ಸುಲ್ತಾನ ...ದ ಬ್ರಿಟಿಷರ ವಿರುದ್ಧ ಹೋರಾಡಲು ಬೇರೆ ದೇಶಗಳ ...ದೊಂದಿಗೆ ಕೈ ಜೋಡಿಸಲು ಯತ್ನಿಸಿದ್ದು. ಟಿಪ್ಪುವಿನ ... ಯತ್ನವೂ ದೇಶದ್ರೋಹಕ್ಕೆ ಸಮಾನವಾದರೆ, ಸುಭಾಷ್ ...ದ್ರ ಬೋಸ್ ಅವರೂ ಬ್ರಿಟಿಷರನ್ನು ಭಾರತದಿಂದ ...ದ್ದೋಡಿಸಲು ಜರ್ಮನಿ, ಇಟಲಿ ಮತ್ತು ಜಪಾನ್ ಜೊತೆ ...ೋಡಿಸಿದ್ದೂ ದೇಶಕ್ಕೆ ಬಗೆದ ದ್ರೋಹವಾಗುತ್ತದೆ ತಾನೆ? ...ಪ್ಪುಗೆ ಮಾತ್ರ ಯಾಕೆ ಅವಮಾನ ಮತ್ತು ಬೋಸ್ ...ರಿಗೆ ಮಾತ್ರ ಯಾಕೆ ಸ್ಥಾನಮಾನ?

...ಇನ್ನು ಗೋ ಮಧುಸೂದನ ಅವರ ಚಡ್ಡಿ ದೋಸ್ತ್ ...ರವಿ "ಇವತ್ತು ಟಿಪ್ಪುವಿನ ಜನ್ಮೋತ್ಸವವನ್ನು ...ಚರಿಸಿದಂತೆ ನೂರು ವರ್ಷಗಳ ನಂತರ ಒಸಾಮಾ ಬಿನ್ ...ಡೆನ್ ಮತ್ತು ದಾವೂದ್ ಇಬ್ರಾಹಿಂ ಅವರ ...ನ್ಮೋತ್ಸವವನ್ನೂ ಆಚರಿಸಬೇಕು ಎನ್ನುತ್ತೀರಾ" ಎಂದು ...ಶ್ನಿಸಿದ್ದಾನೆ. ಈ ಸಿ.ಟಿ. ರವಿಗೆ ಸ್ವಾತಂತ್ರ ಹೋರಾಟದಲ್ಲಿ ...ಡಿದವರಿಗೂ, ಭಯೋತ್ಪಾದಕರಿಗೂ ವ್ಯತ್ಯಾಸವೇ ಗೊತ್ತಿಲ್ಲ. ...ಕ್ಕೆ ಕಾರಣಗಳೂ ಹಲವಾರು ಇವೆ. ಮೊದಲನೆಯದಾಗಿ, ... ರವಿ ಮತ್ತಾತನ ಬಳಗ ಮೆಚ್ಚಿಕೊಂಡಾಡುವ ಮತ್ತು ...ಾಲಿಸುವ ಆರೆಸ್ಸೆಸ್‌ನ ಯಾವ ನಾಯಕನೂ ಸ್ವಾತಂತ್ರ್ಯ ...ಗ್ರಾಮದಲ್ಲಿ ಮಡಿಯುವುದಿರಲಿ, ತಮ್ಮನ್ನು ...ಡಗಿಸಿಕೊಳ್ಳುವುದಿರಲಿ, ಕನಿಷ್ಠ ಕೈಯೆತ್ತಿ ಧಿಕ್ಕಾರ ...ಗಿದಷ್ಟು ಧೈರ್ಯವಂತನಾಗಲಿ, ದಿಟ್ಟತನವಂತನಾಗಲಿ ...ಶಿಸಿದವರಲ್ಲ. ಅಷ್ಟೇ ಅಲ್ಲ, ಇವರ ಮುಖ್ಯ ನೇತಾರ ವಿ.ಡಿ.ಸಾವರ್ಕರ್ ಬ್ರಿಟಿಷರಿಗೆ ಶರಣಾಗಿ, ಅವರೇ ತನ್ನ ದೊರೆಗಳೆಂದು ಒಪ್ಪಿಕೊಂಡು, ಬ್ರಿಟಿಷರ ವಿರುದ್ಧ ಹೋರಾಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟು ಜೈಲಿನಿಂದ ಬಿಡುಗಡೆಯನ್ನು ಗಿಟ್ಟಿಸಿಕೊಂಡ 'ಪುಣ್ಯಾತ್ಮ.'

ಎರಡನೆಯದಾಗಿ, ರವಿಯ ಅಚ್ಚುಮೆಚ್ಚಿನ ವಿಶ್ವಹಿಂದೂ ಮಹಾಸಭಾ ಗಾಂಧಿಯವರ 'ಭಾರತ ಬಿಟ್ಟು ತೊಲಗಿ' ಸಂಗ್ರಾಮವನ್ನು ವಿರೋಧಿಸಿತ್ತಲ್ಲದೆ "ಯಾವ ಹಿಂದೂ ಕೂಡ ತಮ್ಮ ಕೆಲಸಗಳನ್ನು ಬಿಟ್ಟು ಬ್ರಿಟಿಷರ ವಿರುದ್ಧದ ಸಂಗ್ರಾಮದಲ್ಲಿ ಭಾಗವಹಿಸಕೂಡದು" ಎಂದು ಠರಾವು ಹೊರಡಿಸಿದ್ದ 'ಧೀರ'ರ ಸಂಘಟನೆ!! ಅದೆಲ್ಲ ಬಿಡಿ, ಇತಿಹಾಸ. ಈಗಿನ ಕಾಲದ ವಾಸ್ತವವೇನೆಂದರೆ ಈ ರವಿಯನ್ನು ಪೋಷಿಸಿ ಬೆಳೆಸಿರುವ ಆರೆಸ್ಸೆಸ್ ಮತ್ತು ಅದರ ವಿವಿಧ ಸಂಘಟನೆಗಳು ಕಳೆದ ಹಲವು ವರ್ಷಗಳಲ್ಲಿ ದೇಶದ ವಿವಿಧ ಕಡೆ ಕೇಸರಿ ಭಯೋತ್ಪಾದನೆಯಲ್ಲಿ ತೊಡಗಿ ನೂರಾರು ಅಮಾಯಕ ಜನರ ಸಾವಿಗೆ ಕಾರಣವಾಗಿವೆ. ಅಂತಹ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದ ಸಾಧ್ವಿ ಪ್ರಜ್ಞಾ ಸಿಂಗ್ ಎಂಬ ಕೊಲೆಗಡುಕಿ ರವಿಗೆ ದೇಶಪ್ರೇಮಿಯಂತೆ ಕಾಣುವುದೂ, ಬ್ರಿಟಿಷರ ವಿರುದ್ಧ ಹೋರಾಡುತ್ತ ಮಡಿದ ಟಿಪ್ಪು ದೇಶದ್ರೋಹಿಯಂತೆ ಕಾಣುವುದೂ ಆತನ ವಕ್ರ ದೃಷ್ಟಿಕೋನವನ್ನು ತೋರಿಸುತ್ತದೆ.


ಹಿಂದೂತ್ವವಾದಿಗಳ ತರ್ಕರಹಿತ ವಾದದಲ್ಲಿ ಮತ್ತೊಂದು ಯಾವುದೆಂದರೆ ಟಿಪ್ಪು 800 ರಿಂದ 8000 ದೇವಸ್ಥಾನಗಳನ್ನು ಧ್ವಂಸ ಮಾಡಿದ್ದರಿಂದ ಆತನನ್ನು ಮೆಚ್ಚಲಾಗದು ಎಂಬುದು. (ಹಿಂದೂತ್ವವಾದಿಗಳ ಲೆಕ್ಕದಲ್ಲಿ ಎಂದಿಗೂ ಸೊನ್ನೆಗೆ ಬೆಲೆ ಇಲ್ಲದಿರುವುದರಿಂದ ಅದನ್ನು ತಮಗೆ ಇಷ್ಟ ಬಂದಹಾಗೆ ಉಪಯೋಗಿಸುತ್ತಾರೆ.) ಟಿಪ್ಪು ಹಲವಾರು ದೇವಸ್ಥಾನಗಳನ್ನು ಧ್ವಂಸಗೊಳಿಸಿದ್ದು ನಿಜವಾದರೂ ನಿಖರವಾಗಿ ಆತ ಎಷ್ಟು ದೇವಸ್ಥಾನಗಳನ್ನು ನಾಶಮಾಡಿದ ಎಂಬುದನ್ನು ಲೆಕ್ಕ ಇಟ್ಟವರಿಲ್ಲ. ಇರಲಿ, ದೇವಸ್ಥಾನಗಳನ್ನು ನಾಶ ಮಾಡಿದವರನ್ನು ಮೆಚ್ಚಲಾಗುವುದಿಲ್ಲ ಎನ್ನುವ ಹಿಂದೂತ್ವವಾದಿಗಳ ನಿಲುವು ಸರಿಯಾದದ್ದೇ. ಆದರೆ ಅವರು ಮರಾಠರನ್ನು ಅದು ಹೇಗೆ ಮೆಚ್ಚುತ್ತಾರೆ?

ಈ ಪ್ರಶ್ನೆ ಯಾಕೆ ಮುಖ್ಯ ಎಂದರೆ ಇದೇ ಮರಾಠರು ಕರ್ನಾಟಕದಲ್ಲಿರುವ ಒಂದು ದೇವಸ್ಥಾನವನ್ನು ನಾಶ ಮಾಡಿದ್ದರು. ಅದೂ ಯಾವ ದೇವಸ್ಥಾನವನ್ನು ಎನ್ನುತ್ತೀರಿ? ಯಾವುದೋ ಕಾಳಮ್ಮನ, ದುರ್ಗಮ್ಮನ ಗುಡಿಯನ್ನಲ್ಲ. ದೇಶದಾದ್ಯಂತ ಬೌದ್ಧ ಧರ್ಮವನ್ನು ದಮನ ಮಾಡಿ ಪುರೋಹಿತಶಾಹಿಗಳ ಹಿತಾಸಕ್ತಿ ಕಾಪಾಡುವ ಹಿಂದೂ ಧರ್ಮಕ್ಕೆ ಮರುಜೀವ ಕೊಟ್ಟ ಶಂಕರಾಚಾರ್ಯರೇ ಶೃಂಗೇರಿಯಲ್ಲಿ ಸ್ಥಾಪಿಸಿದ್ದ ಪೀಠದಲ್ಲಿರುವ ಶಾರದಾ ದೇವಿ ಪೂಜಾಮಂದಿರವನ್ನು! 1791ರಲ್ಲಿ ರಘುನಾಥರಾವ್ ಪಟ್ಟವರ್ಧನ್ ನೇತೃತ್ವದಲ್ಲಿ ಶೃಂಗೇರಿಯ ಮೇಲೆ ದಾಳಿ ಮಾಡಿದ ಮರಾಠರು ಹಲವಾರು ಬ್ರಾಹ್ಮಣರನ್ನು ಕೊಂದು, ಅನೇಕರನ್ನು ಊನರನ್ನಾಗಿಸಿ, ಮಠದಲ್ಲಿದ್ದ ಹಣ ಮತ್ತು ಆಭರಣಗಳನ್ನು ಲೂಟಿ ಮಾಡಿದ್ದರಲ್ಲದೆ ಪವಿತ್ರ ಶಾರದಾ ದೇವಿಯ ಮೂರ್ತಿಯನ್ನೂ ಕಿತ್ತು ಬಿಸಾಡುವಷ್ಟು ಉದ್ಧಟತನವನ್ನು ಮೆರೆದಿದ್ದರು.

ಅಷ್ಟೇ ಅಲ್ಲ, ದಿಲೀಪ್ ಮೆನನ್ ಎಂಬ ಇತಿಹಾಸ ತಜ್ಞ ಹೇಳುವ ಪ್ರಕಾರ "ಟಿಪ್ಪು ಇದ್ದ 18ನೇ ಶತಮಾನದಲ್ಲಿ ವಿವಿಧ ಸೈನ್ಯಗಳು ದೇವಸ್ಥಾನಗಳ ಮೇಲೆ ದಾಳಿ ಮಾಡುವುದು ಸಹಜವಾಗಿತ್ತು, ಯಾಕೆಂದರೆ ಆಗ ದೇವಸ್ಥಾನಗಳ ಗರ್ಭಗುಡಿಯಲ್ಲಿ ಚಿನ್ನಾಭರಣಗಳನ್ನು ಬಚ್ಚಿಡುತ್ತಿದ್ದರು. ಹಾಗೆ ನೋಡಿದರೆ, ಆ ಶತಮಾನದಲ್ಲಿ ಮರಾಠರು ಪೂರ್ವ ಮತ್ತು ದಕ್ಷಿಣ ಭಾರತದಲ್ಲಿದ್ದ ದೇವಸ್ಥಾನಗಳನ್ನು ನಿರಂತರವಾಗಿ ಕೊಳ್ಳೆಹೊಡೆಯುತ್ತಿದ್ದರು. ಅವರು ಗರ್ಭಗುಡಿಯಲ್ಲೇ ಸೈನ್ಯಗಳ ತುಕಡಿಗಳನಿಟ್ಟು, ದೇವಸ್ಥಾನದಲ್ಲಿ ಸಿಗುವ ಲೋಹಗಳನ್ನೆಲ್ಲ ಕರಗಿಸಿ ಯುದ್ಧಕ್ಕೆ ಬೇಕಾದ ಅಸ್ತ್ರಗಳನ್ನು ತಯಾರಿಸುತ್ತಿದ್ದರು. ಅವರು ಯಾಕೆ ಹಾಗೆ ಮಾಡುತ್ತಿದ್ದರೆಂದರೆ ಶಾಂತಿ ಸಮಯದಲ್ಲಿ ಪಾಲಿಸುವ ಕಟ್ಟುಪಾಡುಗಳನ್ನು ಯುದ್ಧ ಸಮಯದಲ್ಲಿ ಪಾಲಿಸುತ್ತಿರಲಿಲ್ಲ. ಅಷ್ಟೇ ಅಲ್ಲ, ಆಗಿನ ಕಾಲದಲ್ಲಿ ದೇವಸ್ಥಾನಗಳ ಮೇಲೆ ಧರ್ಮ ದೇವರು ದಿಂದರು ಎಂದೆಲ್ಲ ನೋಡದೆ ದಾಳಿಗಳು ನಡೆಯುತ್ತಿದ್ದವು. ಈಗ ಸಾಮ್ರಾಟ ಅಶೋಕನನ್ನು ಎಲ್ಲರೂ ಆರಾಧಿಸುತ್ತಾರೆ. ಆದರೆ ಅಶೋಕನೇ ಒಪ್ಪಿಕೊಂಡಿರುವಂತೆ ಆತ ಲಕ್ಷಾಂತರ ಹಿಂದೂಗಳನ್ನು ಕೊಂದುಹಾಕಿದ್ದ. ಈ ಕಾರಣಕ್ಕೆ ಬಿಜೆಪಿಗಳು ಅಶೋಕನನ್ನು ಹೀಯಾಳಿಸುವುದಿಲ್ಲವಲ್ಲ. ಇತಿಹಾಸವನ್ನು ಆಗಿನ ಕಾಲದ ವಿದ್ಯಮಾನಗಳ ಜೊತೆಗೆ ನೋಡಬೇಕೆಹೊರತು ಈಗಿನ ಜನರನ್ನು ಒಡೆಯುವ ಸಿದ್ಧಾಂತದ ಮೂಲಕ ಅಲ್ಲ."

ಟಿಪ್ಪು ಮಡಿಕೇರಿಯಲ್ಲಿ ಧ್ವಂಸ ಮಾಡಿದ ದೇವಸ್ಥಾನವನ್ನೇ ನೆಪವಾಗಿಟ್ಟುಕೊಂಡು ಆತನನ್ನು ವಿರೋಧಿಸುವ ಹಿಂದೂತ್ವವಾದಿಗಳು ಸಾಕ್ಷಾತ್ ಶಂಕರಾಚಾರ್ಯ ಸ್ಥಾಪಿಸಿದ್ದ ದೇವಸ್ಥಾನದ ಮೇಲೆ ದಾಳಿ ಮಾಡಿದ ಮರಾಠರನ್ನೇ ಮೊದಲು ವಿರೋಧಿಸಬೇಕಲ್ಲವೇ? ಯಾಕೆ ಮರಾಠರಿಗೆ ಒಂದು ನ್ಯಾಯ, ಟಿಪ್ಪುಗೆ ಇನ್ನೊಂದು ನ್ಯಾಯ?

ಟಿಪ್ಪು ಹಿಂದೂ ವಿರೋಧಿ ಎಂದೂ, ಆತ ಮುಸಲ್ಮಾನ ಮತಾಂಧ ಆಗಿದ್ದ ಎಂದೂ ಪೇಜಾವರ ಶ್ರೀಗಳಿಂದ ಹಿಡಿದು ಸಂಸದ ಪ್ರತಾಪ್ ಸಿಂಹ ತನಕ ಎಲ್ಲಾ ಹಿಂದೂತ್ವವಾದಿಗಳು ಚೀರಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಯಾವ ಮರಾಠರು ಶೃಂಗೇರಿ ದೇವಸ್ಥಾನವನ್ನು ಧ್ವಂಸ ಮಾಡಿ ಅಲ್ಲಿಂದ ಮಠಾಧೀಶರನ್ನು ಕಾರ್ಕಳಕ್ಕೆ ಓಡಿಸಿದ್ದರೋ, ಅದೇ ದೇವಸ್ಥಾನದ ಪುನರ್ ಸ್ಥಾಪನೆಗೆಂದು ಮಠಾಧೀಶರಿಗೆ ಅಪಾರ ಹಣವನ್ನು ಕೊಟ್ಟಿದ್ದ ಟಿಪ್ಪು, "ಪ್ರಕೃತ ಶಾರದಾ ಅಮ್ಮನವರ ಪ್ರತಿಷ್ಠೆ ಬಗ್ಗೆ ನಗದೂನು 200 ರಹತಿ,




ದವಸಾನೂ 200 ರಹತಿ, ಉಭಯಂ ನಾನೂರು ರಹತಿ ಸರಕಾರದಿಂದ ಕೊಡುವ" ಎಂದು ಪತ್ರ ಬರೆದಿದ್ದ. ಟಿಪ್ಪು ಶೃಂಗೇರಿ ಮಠಾಧೀಶರಿಗೆ ಬರೆದ ಎಲ್ಲಾ ಪತ್ರಗಳು ಕನ್ನಡದಲ್ಲಿದ್ದು ಅದರಲ್ಲಿ ಆತ ಅವರನ್ನು 'ಜಗದ್ಗುರು' ಎಂದು ಕರೆದಿದ್ದಾನಲ್ಲದೆ, ಎಲ್ಲ ಪತ್ರಗಳು ಶುರುವಾಗುವುದೇ "ಶ್ರೀ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳವರಿಗೆ ಟೀಪು ಸುಲ್ತಾನ ಬಾದಶಹಾರವರ ಸಲಾಂ" ಎಂದು. ಒಂದು ಪತ್ರದಲ್ಲಿ ಟಿಪ್ಪು "ನೀವು ದೊಡ್ಡವರು, ತಪಸ್ವಿಗಳು ಇದ್ದೀರಿ. ಬಂದಿರುವಂಥಾ ಮೂರು ಮಂದಿ ಶತ್ರುಗಳು ನಾಶ ಹೊಂದುವಂತೆಯೂ ಸರಕಾರ ಕ್ಷೇಮ ಆಗುವ ರೀತಿಗೆ ಸಹ ತ್ರಿಕಾಲದಲ್ಲೂ ಈಶ್ವರ ಪ್ರಾರ್ಥನೆ ಮಾಡುತ್ತಾ ಬರಬೇಕು" ಎಂದು ಕೋರುತ್ತಾನೆ. (ಟಿಪ್ಪು ಪ್ರಕಾರ ಮೂರು ಶತ್ರುಗಳು ಮರಾಠರು, ಹೈದರಾಬಾದಿನ ನಿಜಾಮ ಮತ್ತು ಬ್ರಿಟಿಷರು.) ಟಿಪ್ಪು ನಿಜವಾಗಲೂ ಮತಾಂಧ ಮುಸಲ್ಮಾನನಾಗಿದ್ದರೆ ಶೃಂಗೇರಿಯ ಮಠಾಧೀಶರನ್ನು 'ಜಗದ್ಗುರು' ಎಂದು ಸಂಬೋಧಿಸುತ್ತಿದ್ದನೆ? ಶಾರದಾ ದೇವಿಯ ಮೂರ್ತಿಯ ಪ್ರತಿಷ್ಠಾಪನೆಗೆ ಹಣ ಸಹಾಯ ಮಾಡುತ್ತಿದ್ದನೆ? ಶತಚಂಡಿ ಜಪ, ಸಹಸ್ರಚಂಡಿ ಜಪದಂತಹ ಶಾಸ್ತ್ರಗಳಿಗೆ ಧನಸಹಾಯ ಮಾಡುತ್ತಿದ್ದನೆ?


ಕೊನೆಯದಾಗಿ ಟಿಪ್ಪು ಕೊಡಗು ಮತ್ತು ಕರಾವಳಿ ಪ್ರದೇಶಗಳಲ್ಲಿ ಜನರನ್ನು ಇಸ್ಲಾಂ ಧರ್ಮಕ್ಕೆ ಬಲವಂತವಾಗಿ ಮತಾಂತರಿಸಿದ ಎಂಬ ಚೆಡ್ಡಿಗಳ ಆರೋಪಕ್ಕೆ ಬರೋಣ. ಈ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಗಿರೀಶ್ ತಾಳಿಕಟ್ಟೆ ಮತ್ತು ಮನು ಶೆಣೈ ಅವರ ಲೇಖನಗಳಲ್ಲಿ ಕೊಡಗಿನಲ್ಲಾದ ವಿದ್ಯಮಾನಗಳ ಬಗ್ಗೆ ಬರೆದಿರುವುದರಿಂದ ಇಲ್ಲಿ ನಾನು ಕರಾವಳಿಯಲ್ಲಾದದ್ದರ ಬಗ್ಗೆ ಒಂದೆರಡು ವಿಷಯಗಳನ್ನು ನಿಮ್ಮ ಮುಂದಿಡುತ್ತೇನೆ. ಮಂಗಳೂರಿನಲ್ಲಿ ಟಿಪ್ಪು ಹಲವು ಕ್ರಿಶ್ಚಿಯನ್ನರನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರಿಸಿದ್ದು ನಿಜ. ಅದಕ್ಕೆ ಕಾರಣ ಧರ್ಮಾಂಧತೆ ಆಗಿರದೆ ರಾಜತಾಂತ್ರಿಕತೆಯಾಗಿತ್ತು.

ನಮ್ಮ ರಾಜ್ಯದಲ್ಲಿ ಈಗಿನಂತೆ ಆಗಲೂ ಕ್ರೈಸ್ತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದದ್ದು ಕರಾವಳಿ ಪ್ರದೇಶದಲ್ಲಿ. ಅವರಲ್ಲಿ ಹೆಚ್ಚಿನ ಮಂದಿ ಗೋವೆಯಿಂದ ಬಂದವರಾಗಿದ್ದು ಅವರು ಗೋವೆಯ ಆರ್ಚ್ ಬಿಷಪ್‌ನ ಹಳೆಯ ಒಡಂಬಡಿಕೆಯ ಪಂಥಕ್ಕೆ ಸೇರಿದವರಾಗಿದ್ದರು. ಎರಡನೆ ಆಂಗ್ಲ-ಮೈಸೂರು ಯುದ್ಧದ ಸಂದರ್ಭದಲ್ಲಿ ಅವರಲ್ಲಿ ಹಲವು ಕ್ರೈಸ್ತರು ಬ್ರಿಟಿಷರು ಕ್ರೈಸ್ತರು ಎಂಬ ಕಾರಣಕ್ಕೆ ಗೂಢಚಾರಿಗಳಾಗಿ ಮತ್ತು ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಆಗಿನ ಕಾಲದಲ್ಲೇ ಹೈದರ್ ಮತ್ತು ಟಿಪ್ಪು ವಿರುದ್ಧ ಯುದ್ಧ ಸಾರಲು 3,33,000 ರೂಪಾಯಿಗಳನ್ನೂ ಬ್ರಿಟಿಷರಿಗೆ ನೀಡಿದ್ದರು. ಕ್ರೈಸ್ತರ ನೆರವಿನಿಂದಾಗಿಯೇ ಬ್ರಿಟಿಷರಿಗೆ 1768ರಲ್ಲಿ ಮಂಗಳೂರು ಮತ್ತು ಬಿದನೂರು ಪ್ರಾಂತಗಳನ್ನು ಗೆಲ್ಲುವುದು ಸಾಧ್ಯವಾಯಿತು. ಅದೇ ವರ್ಷ ಟಿಪ್ಪು ಆ ಎರಡೂ ಪ್ರಾಂತಗಳನ್ನು ವಾಪಸ್ ಗೆದ್ದ. ಆದರೆ 1783ರಲ್ಲಿ ಜನರಲ್ ರಿಚರ್ಡ್ ಮ್ಯಾಥ್ಯೂಸ್ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಮತ್ತೊಮ್ಮೆ ಮಂಗಳೂರನ್ನು ವಶಪಡಿಸಿಕೊಂಡಿತು. ಆಗಲೂ ಸ್ಥಳೀಯ ಕ್ರಿಶ್ಚಿಯನ್ನರು ಬ್ರಿಟಿಷರಿಗೆ ನೆರವು ನೀಡಿದ್ದರು. ಕ್ರೈಸ್ತರು ತನ್ನನ್ನು ಮತ್ತೆ ಮತ್ತೆ ವಂಚಿಸುತ್ತಿದ್ದಾರೆ ಎಂದು ಕೋಪಗೊಂಡ ಟಿಪ್ಪು (ಅವನೇ ಒಪ್ಪಿಕೊಂಡಿರುವಂತೆ) 40,000 ಕ್ರೈಸ್ತರನ್ನು ಗೋವಾಗೆ ಗಡಿಪಾರು ಮಾಡಿದ ಮತ್ತು ಸಾವಿರಾರು ಸಂಖ್ಯೆಯಲ್ಲಿ ಬಂಧಿಸಿ ಶ್ರೀರಂಗಪಟ್ಟಣಕ್ಕೆ ರವಾನಿಸಿದ. ಶ್ರೀರಂಗಪಟ್ಟಣಕ್ಕೆ ಬರುವ ದಾರಿಯಲ್ಲಿ ಲೆಕ್ಕವಿಲ್ಲದಷ್ಟು ಕ್ರೈಸ್ತರು ಸಾವಿಗೀಡಾದರು ಮತ್ತು ಶಿಕ್ಷೆಯಿಂದ ತಪ್ಪಿಸಿಕೊಂಡು ತಮ್ಮ ಪ್ರಾಣ ಉಳಿಸಿಕೊಳ್ಳಲು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡರು ಎಂಬುದೂ ನಿಜವೇ. ಅದು ಟಿಪ್ಪು ತನ್ನ 'ದೇಶದ ದ್ರೋಹಿ'ಗಳಿಗೆ ನೀಡಿದ ಶಿಕ್ಷೆ ಆಗಿತ್ತೆ ಹೊರತು ಧರ್ಮಾಂಧತೆ ಆಗಿರಲಿಲ್ಲ. ಇದನ್ನು ಹೇಳುವುದಕ್ಕೆ ಆಧಾರ ಯಾವುದೆಂದರೆ, ತನ್ನ ವಿರುದ್ಧ ಯಾವ ತಕರಾರನ್ನೂ ಮಾಡಿರದಿದ್ದ ಸಿರಿಯನ್ ಕ್ರೈಸ್ತರನ್ನು ಟಿಪ್ಪು ಚೆನ್ನಾಗಿಯೇ ನಡೆಸಿಕೊಂಡಿದ್ದ. ಮಾತ್ರವಲ್ಲ, ಆರ್ಮೇನಿಯಾದಿಂದ ಬಂದಿದ್ದ ಕ್ರೈಸ್ತ ವರ್ತಕರಿಗೆ ಮೈಸೂರಿನಲ್ಲಿ ನೆಲಸಲು ಸೌಲಭ್ಯಗಳನ್ನು ನೀಡುವ ಮೂಲಕ ಅವರನ್ನು ಪ್ರೋತ್ಸಾಹಿಸಿದ್ದ.

ಎಲ್ಲ ರೀತಿಯಲ್ಲೂ ಟಿಪ್ಪು ಸುಲ್ತಾನ ನಿಜವಾಗಲೂ ಕರ್ನಾಟಕ ಹೆಮ್ಮೆ ಪಡಬೇಕಾದಂತಹ ವೀರನಾಗಿದ್ದ, ರಾಜನಾಗಿದ್ದ, ಚಿಂತಕನಾಗಿದ್ದ, ವ್ಯಕ್ತಿಯಾಗಿದ್ದ. ಆತನನ್ನು ಕೇವಲ ಮುಸಲ್ಮಾನ ಎಂಬ ದೃಷ್ಟಿಕೋನದಿಂದ ನೋಡದೆ ಬ್ರಿಟಿಷರ ವಿರುದ್ಧ ಹೋರಾಡಿದ ಕನ್ನಡದ ವೀರ ಎಂದು ನೋಡಿದರೆ ಆತನ ನಿಜ ಮೌಲ್ಯ ಅರ್ಥವಾಗುತ್ತದೆ. ನೆಪೋಲಿಯನ್ ಬ್ರಿಟಿಷರಿಗೆ ಶರಣಾದ ಸಂದರ್ಭದಲ್ಲಿ ಸರ್ ವಾಲ್ಟರ್ ಸ್ಕಾಟ್ ಎಂಬ ಬ್ರಿಟನ್ನಿನ ಖ್ಯಾತ ಕವಿ ಮತ್ತು ಲೇಖಕ ಯಾಕೆ "ನೆಪೋಲಿಯನ್ ಕೂಡ ಟಿಪ್ಪುವಿನಂತೆ ಪ್ರತಿರೋಧವನ್ನು ತೋರುತ್ತಾನೆಂದೂ, ತನ್ನ ರಾಜಧಾನಿ ವೈರಿಗಳ ಕೈವಶವಾದಾಗಲೂ ತನ್ನ ಖಡ್ಗವನ್ನು ಕೈಯಲ್ಲಿ ಹಿಡಿದೇ ಧೀರನಂತೆ ಸಾವನ್ನಪ್ಪುತ್ತಾನೆಂದೂ ಭಾವಿಸಿದ್ದೆ" ಎಂದಿದ್ದರು ಎಂಬುದೂ ಅರ್ಥವಾಗುತ್ತದೆ.

ಮೈಸೂರಿನ ಹುಲಿಗೆ ನಮ್ಮ ತಂಡದಿಂದ ಒಂದು ದೊಡ್ಡ ಸಲಾಂ! ■





ಬಿಹಾರ ಚುನಾವಣೆ - ಫಲಿತಾಂಶದ ಸಂದೇಶವೇನು

ಭಾರೀ ಕುತೂಹಲ ಮೂಡಿಸಿದ್ದ ಬಿಹಾರ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಮಂಕುಬೂದಿ ಎರಚಿ ಓಟು ಕಸಿಯುವ ಮೋದಿ ರಾಜಕೀಯ ಮತ್ತೊಮ್ಮೆ ಮಕಾಡೆ ಬಿದ್ದಿದೆ. ಮೋದಿ ಕೂಟಕ್ಕೆ ಅದೂ ಅಂತಿಂಥ ಸೋಲಲ್ಲ; ತೀರಾ ಅವಮಾನಕಾರಿ ಸೋಲು. ತನ್ನ ಎದುರಾಳಿಗಳು ಗೆದ್ದ ಸೀಟುಗಳಲ್ಲಿ ಮೂರನೇ ಒಂದು ಭಾಗದಷ್ಟು ಸೀಟು ಗೆದ್ದುಕೊಳ್ಳುವಷ್ಟರಲ್ಲಿ ಈ 56 ಇಂಚಿನ ಎದೆಯ ನಾಯಕ ಹಾಗೂ ಆತನ ಕೂಟ ಸುಸ್ತೋಸುಸ್ತು. ಅದಕ್ಕೆ ಪ್ರತಿಯಾಗಿ ನಿತೀಶ್ - ಲಾಲು ಜೋಡಿ ಕಾಂಗ್ರೆಸ್‌ನ್ನೂ ಜೊತೆಗೂಡಿಸಿಕೊಂಡು ಅನಾಮತ್ತಾಗಿ ವಿಧಾನಸಭೆಯ ಒಟ್ಟು ಸೀಟುಗಳ ಸುಮಾರು ಮುಕ್ಕಾಲು ಭಾಗದಷ್ಟು ಸೀಟುಗಳನ್ನು ಪಡೆದುಕೊಂಡಿದ್ದಾರೆ. ಒಟ್ಟು 243 ಸ್ಥಾನಗಳ ವಿಧಾನಸಭೆಯಲ್ಲಿ ಮೋದಿ ಕೂಟ ಗಳಿಸಿದ್ದು ಕೇವಲ 56 ಸೀಟುಗಳಾದರೆ, ನಿತೀಶ್ ನೇತೃತ್ವದ ಮಹಾ ಮೈತ್ರಿ ಗಳಿಸಿದ್ದು ಬರೋಬ್ಬರಿ 178 ಸ್ಥಾನಗಳು!

ಈ ಚುನಾವಣೆ ಎರಡು ಬೃಹತ್ ಮೈತ್ರಿಕೂಟಗಳ ನಡುವಿನ ಸಮಬಲದ ಪೈಪೋಟಿ ಎಂದೇ ಬಿಂಬಿಸಲಾಗಿತ್ತು. ಆದ್ದರಿಂದ ಈ ದೇಶದ ಬಹುಸಂಖ್ಯಾತ ಪ್ರಜೆಗಳಾದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಪ್ರಜೆಗಳ ಮನಸ್ಸಿನಲ್ಲಿ ಈ ಬಗ್ಗೆ ಕುತೂಹಲ ಮತ್ತು ಆತಂಕ ಮನೆಮಾಡಿತ್ತು. ಈ ಸಕಾರಾತ್ಮಕ ಫಲಿತಾಂಶದಿಂದ ದೇಶದ ಬಹುಸಂಖ್ಯಾತರು ಮತ್ತೊಮ್ಮೆ ನಿರಾಳತೆಯ ನಿಟ್ಟುಸಿರು ಬಿಟ್ಟಿದ್ದಾರೆ. ಅಲ್ಲದೆ ಸ್ವಾತಂತ್ರ್ಯ, ಪ್ರಜಾತಂತ್ರ, ಸಾಮಾಜಿಕ ನ್ಯಾಯ, ಜಾತ್ಯತೀತತೆ ಮುಂತಾದ ಮೌಲ್ಯಗಳಲ್ಲಿ ನಂಬಿಕೆ ಇರಿಸಿಕೊಂಡಿರುವ ಪ್ರಗತಿಪರ ಶಕ್ತಿಗಳಲ್ಲಿ ಈ ಚುನಾವಣೆ ಮತ್ತಷ್ಟು ಹುರುಪು ಮೂಡಿಸಿದೆ. ಈ ದೇಶದ ಮತದಾರರ ಒಲವು ನಿಲುವುಗಳ ಬಗ್ಗೆ, ದೇಶದ ಭವಿಷ್ಯದ ಬಗ್ಗೆ ಒಂದಷ್ಟು ಆಶಾಭಾವ ಕೂಡ ಮೂಡಿಸಿದೆ.

ಹಾಗೆ ನೋಡಿದರೆ ಮೋದಿ ಕೂಟದ ಇಂಥಾ ಹೀನಾಯ ಸೋಲು ತೀರಾ ಅನಿರೀಕ್ಷಿತ. ಇದು ಕೇವಲ ಮೋದಿ ಕೂಟದ ಸೋಲು ಮಾತ್ರವಲ್ಲ; ಜೊತೆಗೆ ಕಾರ್ಪೋರೇಟ್ ಮಾಧ್ಯಮಗಳ ಸೋಲೂ ಹೌದು. ಯಾಕೆಂದರೆ ಕಾರ್ಪೋರೇಟ್ ಮಾಧ್ಯಮಗಳು ಎನ್‌ಡಿಎ ನಿಚ್ಚಳ ಬಹುಮತ ಪಡೆಯುತ್ತದೆಂದು ಷರಾ ಬರೆದುಬಿಟ್ಟಿದ್ದವು. ಬಹುತೇಕ ಎಕ್ಸಿಟ್ ಪೋಲ್ ಸರ್ವೆಗಳೂ ಇದನ್ನೇ ಗಿಳಿ ಪಾಠ ಒಪ್ಪಿಸಿದ್ದವು. ಚುನಾವಣೆಯ ಫಲಿತಾಂಶ ಪ್ರಕಟವಾಗುವ ದಿನ ಬೆಳಗ್ಗೆಯೇ ಮೋದಿ ಭಜನೆ ಶುರುವಿಟ್ಟುಕೊಂಡ ಈ ಮಂದಿ ಎನ್‌ಡಿಎ ನಾಗಾಲೋಟ, ಮೋದಿ ನಾಯಕತ್ವಕ್ಕೆ ಭರ್ಜರಿ ಜಯ, ನಿತೀಶ್‌ಗೆ ಮುಖಭಂಗ ಎಂದು ಪುಂಖಾನುಪುಂಖವಾಗಿ ವರದಿಗಳನ್ನು ಬಿತ್ತರಿಸಿದವು. ಮಧ್ಯಾಹ್ನದ ವೇಳೆಗೆ ತಮ್ಮ ಬಯಕೆಗೆ ತದ್ವಿರುದ್ಧವಾದ ಫಲಿತಾಂಶ ಖಾತ್ರಿಯಾದ ಮೇಲೆ ತಮ್ಮ ರಾಗವನ್ನು ಇದ್ದಕ್ಕಿದ್ದಂತೆ ಬದಲಿಸಿ ಮುಖ ಉಳಿಸಿಕೊಳ್ಳಲು ಹೆಣಗಾಡಿದವು. ಆ ಅರ್ಥದಲ್ಲಿ ಈ ಫಲಿತಾಂಶದಿಂದ ಮೋದಿ ಕೂಟಕ್ಕೆ ಮಾತ್ರವಲ್ಲ; ಕಾರ್ಪೋರೇಟ್ ಮಾಧ್ಯಮಗಳಿಗೂ ತೀವ್ರ ಮುಖಭಂಗವಾಗಿದೆ ಎನ್ನಬಹುದು.

ಇಲ್ಲಿಗೆ ಕೇವಲ 7 ತಿಂಗಳ ಹಿಂದೆ ದೆಹಲಿ ಚುನಾವಣೆಯಲ್ಲಿ ಆಮ್ ಆದ್ಮಿಗಳ ಪೊರಕೆ ಹೊಡೆತ ತಿಂದು ಕೇವಲ ಮೂರು ಸೀಟುಗಳಿಗೆ ಕುಸಿದಾಗಲಾದರೂ ಮೋದಿ ಮತ್ತು ಬಿಜೆಪಿ ಪಾಠ ಕಲಿಯಬೇಕಿ… ಹೀನಚಾಳಿಯನ್ನು ಬದಲಾಯಿಸಿಕೊಂಡು ಸಂವಿಧಾನಕ್ಕೆ ಕನಿಷ್ಠ ಬದ್ಧತೆಯ… ತೋರಬೇಕಿತ್ತು. ಆದರೆ ಅದಾಗಲಿಲ್ಲ. ಕೋಮು ವಿದ್ವೇಷ, ದಿ… ಮೇಲೆ ಅಟ್ಟಹಾಸಗಳ ಮುಂತಾದ ದುಷ್ಕೃತ್ಯಗಳ ಮೂಲಕ ಸಮ… ಒಡೆದು ಆಳುವ ನೀತಿಯನ್ನು ಮತ್ತಷ್ಟು ಬಿರುಸಿನೊಂದಿಗೆ ಪ್ರಯೋ… ಫಲಿತಾಂಶ ಈಗ ಹೊರಬಿದ್ದಿದೆ. ವಾಸ್ತವದಲ್ಲಿ ಸಮಾಜದ ಕಲ್ಯಾಣಕ್ಕಾಗಿ… ಮಾಡದೆ ಕೇವಲ ಕಾರ್ಪೋರೇಟ್ ಮಾಧ್ಯಮಗಳ ಮೂಲಕ ಪೊಳ್ಳು … ಆಶ್ವಾಸನೆಗಳನ್ನು ಪ್ರಚುರಪಡಿಸಿದರೆ ಗದ್ದುಗೆ ಕಾಯಂ ಎಂದುಕೊಂಡಿದ… - ಶಾ ಜೋಡಿಗೆ ಮತ್ತೊಮ್ಮೆ ಭಾರೀ ಮುಖಭಂಗವಾಗಿದೆ.

ವಿಶೇಷ ತಿರುವುಗಳು

ಭಾರೀ ಯಶಸ್ಸು ಸಾಧಿಸಿರುವ ಜೆಡಿಯು - ಆರ್‌ಜೆಡಿ - … ಪಕ್ಷಗಳ ಮಹಾಮೈತ್ರಿಕೂಟದ ಸಂಯೋಜನೆ ತೀರಾ ಹೊಸದಾಗಿದ್ದ… ಈ ಪಕ್ಷಗಳ ನಡುವೆ ಉತ್ತಮ ಹೊಂದಾಣಿಕೆ ಸಾಧಿಸಿರುವುದು … ಸೀಟು ಹಂಚಿಕೆಯ ವಿಚಾರದಿಂದ ಹಿಡಿದು ಅಂತಿಮ ಪ್ರಚಾರ… ಅಷ್ಟಾಗಿ ಯಾವುದೇ ಅಪಸ್ವರ ಬಾರದಂತೆ ಇದರ ನಾಯಕರು ಒ… ಚುನಾವಣೆ ಎದುರಿಸಿದರು. 243 ಸೀಟುಗಳ ಪೈಕಿ ಕಾಂಗ್ರೆಸ್ … ಸೀಟುಗಳನ್ನು ಬಿಟ್ಟುಕೊಟ್ಟು ನಿತೀಶ್ - ಲಾಲೂಗಳು ತಲಾ 100 ಸಿ… ಸ್ಪರ್ಧಿಸಿದ್ದರು. ಇದರಲ್ಲಿ ಲಾಲೂ ಪಕ್ಷ 80 ಸೀಟುಗಳಲ್ಲಿ ಗೆದ್ದು … ಬೆರಗುಗೊಳಿಸಿದ್ದರೆ, ನಿತೀಶ್‌ರ ಜೆಡಿಯು 71 ಸೀಟುಗಳನ್ನು ಗಳಿಸಿ… ಇನ್ನು ಕಾಂಗ್ರೆಸ್ ಪಕ್ಷ 27 ಸ್ಥಾನಗಳನ್ನು ಗಳಿಸಿ ಬಿಹಾರ ರಾಜಕೀಯ… ಕಂಡುಕೊಳ್ಳುವ ಹಾದಿಯಲ್ಲಿದೆ.


ಲೋಕಸಭಾ ಚುನಾವಣೆಗೆ ಮುಂಚೆ ಜೆಡಿಯು ಪಕ್ಷ … ಮೈತ್ರಿಕೂಟದ ಭಾಗವೇ ಆಗಿತ್ತು. ಮೋದಿ ಪ್ರಧಾನಿ ಅಭ್ಯರ್ಥಿ… ಘೋಷಿತವಾಗುತ್ತಿದ್ದ ತರುಣದಲ್ಲೇ ನಿತೀಶ್ ಕುಮಾರ್ ಬಿಜೆಪಿ… ನಡೆಯನ್ನು ಬಹಿರಂಗವಾಗಿ ಟೀಕಿಸಿದರು. ಈ ತಿಕ್ಕಾಟದಲ್ಲಿ … ಮೈತ್ರಿಯಿಂದ ಜೆಡಿಯು ಪಕ್ಷ ಹೊರಬಂದಿತ್ತು. ಇದು ರಾಜಕೀ… ಬಹಳ ತಪ್ಪುನಡೆಯೆಂದೇ ಬಹಳಷ್ಟು ಪಂಡಿತರು ವಿಶ್ಲೇಷಿಸಿದ್ದರು. … ಲೋಕಸಭಾ ಚುನಾವಣೆಯಲ್ಲಿ ಬಿಹಾರದಲ್ಲಿ ಬಿಜೆಪಿ 22 ಸೀ… ಗೆದ್ದು ಜೆಡಿಯು ಕೇವಲ 2 ಸೀಟುಗಳಿಗೆ ಕುಸಿದಾಗ ಸಾಮಾಜಿಕ ಜಾಲ… ಮೋದಿ ಭಕ್ತರು ಹಾಗೂ ಕಾರ್ಪೋರೇಟ್ ಮಾಧ್ಯಮಗಳು ನಿ… ಇನ್ನಿಲ್ಲದಂತೆ ಹಂಗಿಸಿದ್ದರು. ಬಿಜೆಪಿ ಬಿಟ್ಟರೆ ನಿತೀಶ್ ಹಾಗೂ ಆತನ… ಅಸ್ತಿತ್ವವೇ ಇಲ್ಲವೆನ್ನುವಂತಹ ವಾದಗಳನ್ನು ಹರಿಬಿಟ್ಟಿದ್ದರು.

ಆಗ ಮೇಲುನೋಟಕ್ಕೆ ಇವೆಲ್ಲ ಸತ್ಯವೇ ಇರಬಹುದು … ಭಾಸವಾಗುತ್ತಿತ್ತು. ಆದರೆ ಇದೆಲ್ಲ ನಡೆದು ಕೇವಲ ಒಂದೂವರೆ … ಬಿಹಾರದ ರಾಜಕೀಯ ಚಿತ್ರಣವೇ ಬದಲಾಗಿ ಹೋಗಿದೆ. ಭರುಬ… ದೇಶದ ಜನರು ಮಂಕುಬೂದಿ ರಾಜಕೀಯದ ಬಗ್ಗೆ … ಜಾಗರೂಕರಾಗುತ್ತಿದ್ದಾರೆ. ಯಾವುದೋ ಒಂದು ಪಕ್ಷ ಅಥವ … ಹಿಂದೆ ಕಣ್ಣು ಮುಚ್ಚಿ ಹೆಜ್ಜೆಹಾಕಲು ನಿರಾಕರಿಸುತ್ತಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಅಂಥಾ ವಿವಾದಗಳಿಗೆ ಅಥವ ಹ… ಸಿಕ್ಕಿಬೀಳದೆ ಕ್ಲೀನ್ ಇಮೇಜ್ ಉಳಿಸಿಕೊಂಡಿದ್ದಾರೆ. ಬಿಜೆಪಿ ಪಕ್ಷ… ಮೈತ್ರಿಯಿದ್ದರೂ ಕೂಡ ಕೋಮು ಗಲಭೆಗಳಿಗೆ ಉತ್ತೇಜನ ನೀಡ… ವಹಿಸಿದ್ದಾರೆ. ಜೊತೆಗೆ ಬಿಹಾರದ ರಾಜಕೀಯದಲ್ಲಿ ಪ್ರಮುಖ ಪಾತ್ರ… ಸಂಖ್ಯಾತ್ಮಕವಾಗಿ ಪ್ರಬಲವಾಗಿರುವ ಯಾದವರ ವಿಶ್ವಾಸ … ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೂ ಪರಿಣಾಮ ಬೀರಿದೆ. ಜೊ… ಹಿಂದುಳಿದ ಮತ್ತು ಅತಿ ಹಿಂದುಳಿದ ಜಾತಿಗಳು ಹಾಗೂ ಮ… ಕಲ್ಯಾಣಕ್ಕಾಗಿ ರೂಪಿಸಿದ ಕೆಲವು ಜನಪ್ರಿಯ ಯೋಜನೆಗಳೂ ಸ… ಕುಮಾರ್ ನಾಯಕತ್ವವನ್ನು ಜನರು ಬೆಂಬಲಿಸುವಂತೆ ಮಾಡಿದೆ.

ಆದರೆ ಆಶ್ಚರ್ಯದ ಸಂಗತಿಯೆಂದರೆ ಲಾಲೂ ಪ್ರಸಾದ್ … ಆರ್‌ಜೆಡಿ ಪಕ್ಷ ಪಡೆದ ಸೀಟುಗಳು. 80 ಸೀಟುಗಳನ್ನು ಪಡೆದಿರುವ… ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಮೇವು ಹಗರಣದ… ಅಂತಿಮವಾಗಿ ಸಿಬಿಐ ಕೋರ್ಟ್‌ನಿಂದ 2013ರ ಸೆಪ್ಟೆಂಬರ್‌ನ… ಒಳಗಾಗಿ ಜೈಲು ಸೇರಿದ್ದ ಲಾಲೂ ಜಾಮೀನಿನ ಮೇಲೆ ಹೊರಬ…

ಮೋದಿ ಮಾದರಿಗೆ ಬಿಜೆಪಿಯಲ್ಲೇ ವಿರೋಧ



ಮೋದಿ - ಶಾ ಕೂಟ ಮೊತ್ತ ಮೊದಲನೆಯದಾಗಿ ಮೋದಿ ಮಾದರಿಯನ್ನು ಜಾರಿಗೆ ತಂದದ್ದು ತಮ್ಮ ಪಕ್ಷದಲ್ಲೇ. ಈ ಕೂಟ ಬಿಜೆಪಿ ಪಕ್ಷದ ಮೇಲೆ ದಿನೇದಿನೇ ಹಿಡಿತ ಸಾಧಿಸುತ್ತಿದ್ದು ಪಕ್ಷದ ಎಲ್ಲ ವ್ಯವಹಾರಗಳನ್ನೂ ಏಕಪಕ್ಷೀಯವಾಗಿ ನಿರ್ಧರಿಸುತ್ತಿದ್ದಾರೆ. ಇದು ಬಿಜೆಪಿಯೊಳಗಿನ ಮೋದಿ ವಿರೋಧಿಗಳಿಗೆ ನುಂಗಲಾರದ ತುತ್ತಾಗಿದೆ. ಬಿಜೆಪಿಯೊಳಗೆ ಒಳಗೊಳಗೇ ಮೋದಿ ವಿರೋಧ ಹೊಗೆಯಾಡುತ್ತಿದೆ. ಬಿಹಾರದ ಚುನಾವಣೆಯ ಸೋಲು ಮೋದಿ ವಿರೋಧಿಗಳ ಕೈಯಲ್ಲಿ ಒಂದು ಪ್ರಮುಖ ಅಸ್ತ್ರವಾಗಿ ಸಿಕ್ಕಿದ್ದು ಮೋದಿಯ ದುರಾದೃಷ್ಟವೆನ್ನಲೇಬೇಕು.

ಹಿರಿಯ ನಾಯಕರಾದ ಎಲ್‌ಕೆ ಅಡ್ವಾಣಿ, ಯಶವಂತ ಸಿನ್ಹಾ, ಮುರಳಿಮನೋಹರ ಜೋಷಿ ಮತ್ತು ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಶಾಂತಕುಮಾರ್ ಇದೀಗ ಒಟ್ಟಿಗೆ ಮೋದಿಯ ಮೇಲೆ ಹರಿಹಾಯ್ದಿದ್ದಾರೆ. ಈ ನಾಲ್ವರು ನಾಯಕರು ಒಂದು ಜಂಟಿ ಪತ್ರಿಕಾಹೇಳಿಕೆ ಕೊಟ್ಟು ಬಹಿರಂಗವಾಗಿ ಮೋದಿ ವಿರುದ್ಧ ಬಾಯಿ ಬಿಚ್ಚಿದ್ದಾರೆ.

ಬಿಹಾರದ ಸೋಲಿನ ನಂತರ ಸಭೆ ಸೇರಿದ 'ಪಾರ್ಲಿಮೆಂಟರಿ ಮಂಡಳಿ' ಸಭೆ ಈ ಸೋಲಿಗೆ ಸಾಮೂಹಿಕ ಜವಾಬ್ದಾರಿ ಹೊರುವುದಾಗಿ ಘೋಷಿಸಿದರು. ಯಾಕೆಂದರೆ ಮೋದಿ ಏನಿದ್ದರೂ ಚಪ್ಪಾಳೆಯನ್ನು ಬಯಸುವ ವ್ಯಕ್ತಿಯೇ ಹೊರತು, ಸೋಲಿನ ಹೊಣೆ ಹೊರುವ ಜಾಯಮಾನದವರಲ್ಲ. ಈ ತೀರ್ಮಾನವನ್ನು ಖಂಡಿಸಿರುವ ಬಿಜೆಪಿ ಹಿರಿಯರು ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿ ಈ ಚುನಾವಣೆಯ ಸೋಲಿನ ಜವಾಬ್ದಾರಿ ಹೊರಬೇಕು ಎಂಬ ವಾದವನ್ನು ಪ್ರತಿಪಾದಿಸಿದ್ದಾರೆ.

"ಪ್ರತಿಯೊಬ್ಬರೂ ಜವಾಬ್ದಾರಿ ಎಂದು ಹೇಳುತ್ತಿರುವುದರ ಅರ್ಥವೇನೆಂದರೆ ಯಾರೊಬ್ಬರೂ ಜವಾಬ್ದಾರಿ ಹೊರದೆ ತಪ್ಪಿಸಿಕೊಳ್ಳುವುದೇ ಆಗಿದೆ. ಪಕ್ಷ ಗೆದ್ದಾಗ ಅದರ ಎಲ್ಲಾ ಕ್ರೆಡಿಟ್ಟನ್ನು ಬಾಚಿಕೊಂಡವರು ಪಕ್ಷ ಹೀನಾಯವಾಗಿ ಸೋತಾಗ ಜವಾಬ್ದಾರಿ ಹೊರದೆ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. 'ಸಾಮೂಹಿಕ ಜವಾಬ್ದಾರಿ'ಯ ಹೆಸರಿನಲ್ಲಿ ತಪ್ಪಿಸಿಕೊಳ್ಳಲು ನೆಪ ಹುಡುಕುತ್ತಿದ್ದಾರೆ.....

ಪಕ್ಷದ ಸೋಲಿಗೆ ಕಾರಣಗಳನ್ನು ಹಾಗೂ ಕೇವಲ ಬೆರಳೆಣಿಕೆಯಷ್ಟು ಮಂದಿ ಪಕ್ಷದ ಮೇಲೆ ಹಿಡಿತ ಸಾಧಿಸಿದ್ದರ ಬಗ್ಗೆಯೂ ಸಮಗ್ರ ಪರಾಮರ್ಶೆ ನಡೆಯಬೇಕು....


ಮೋದಿ - ಶಾ ತಂಡ ಸರ್ವಸಮ್ಮತ ನಿರ್ಣಯ ಕೈಗೊಳ್ಳುವ ವ್ಯವಸ್ಥೆಯನ್ನೇ ಹಾಳು ಮಾಡಿದ್ದಾರೆ. ದೆಹಲಿಯ ಹೀನಾಯ ಸೋಲಿನ ನಂತರ ಯಾವುದೇ ಪಾಠಗಳನ್ನು ಕಲಿತಿಲ್ಲ. "ಬಿಹಾರ ಚುನಾವಣಾ ಪ್ರಚಾರದ ಜವಾಬ್ದಾರಿ ಹೊತ್ತು ಅದನ್ನು ನಿರ್ವಹಣೆ ಮಾಡಿದ ವ್ಯಕ್ತಿಗಳೇ ಮತ್ತೆ ಅದರ ಪರಾಮರ್ಶೆ ಮಾಡುವುದು ಸೂಕ್ತ ಅಲ್ಲ" ಎಂದು ಬಹಿರಂಗಹೇಳಿಕೆ ನೀಡಿದ್ದಾರೆಂದರೆ ಬಿಜೆಪಿಯೊಳಗೆ ಆಂತರಿಕವಾಗಿ ಹೊಗೆಯಾಡುತ್ತಿರುವ ಭಿನ್ನಮತವನ್ನು ಯಾರಾದರೂ ಊಹಿಸಬಹುದು.

ಮೋದಿ ಪ್ರಧಾನಿಯಾಗಿ, ಅಮಿತ್‌ಶಾ ಬಿಜೆಪಿ ಅಧ್ಯಕ್ಷನಾದ ನಂತರ ಪಕ್ಷದೊಳಗೆ ತಲೆದೋರಿರುವ ಮೊಟ್ಟಮೊದಲ ಸಾಮೂಹಿಕ ವಿರೋಧ ಇದು ಎಂಬುದು ಗಮನಾರ್ಹ. ಈ ಹೇಳಿಕೆಯನ್ನು ಸಿದ್ಧಪಡಿಸಿದ್ದು ಆರೆಸ್ಸೆಸ್‌ನ ಬಂಡಾಯ ವ್ಯಕ್ತಿಯಂತೆ ಅಡ್ಡಾಡುತ್ತಿರುವ ಗೋವಿಂದಾಚಾರ್ಯ ಮತ್ತು ಮೋದಿಯನ್ನು ಬಹಿರಂಗವಾಗಿ ಟೀಕೆ ಮಾಡುತ್ತಿರುವ ಮಾಜಿ ಮಂತ್ರಿ ಅರುಣ್ ಶೌರಿಯವರ ಸಮ್ಮುಖದಲ್ಲಿ ಎಂಬುದು ವಿಶೇಷ.

ಹಿರಿಯರ ಹೇಳಿಕೆಯನ್ನು ವಿರೋಧಿಸಿರುವ ಅರುಣ್ ಜೈಟ್ಲಿ ಮತ್ತು ರಾಜನಾಥ ಸಿಂಗ್ ಪಾರ್ಲಿಮೆಂಟರಿ ಮಂಡಲಿಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಅವರ ಸಮರ್ಥನೆಗೆ ಬಲವಾದ ಕಾರಣವೂ ಇದೆ ಎನ್ನಿ. ಏನೆಂದರೆ ಈ ಆಸಾಮಿಗಳು ಪ್ರಧಾನಿಗಳಾಗುವ ಸಾಧ್ಯತೆಯಂತೂ ಇರಲಿಲ್ಲ. ಇನ್ನು ಪ್ರಧಾನಿ ಸ್ಥಾನದ ನಂತರದ ಮಹತ್ವದ ಖಾತೆಗಳು ಹೇಗೋ ಅವರಿಗೆ ದಕ್ಕಿವೆ. ಹಾಗಾಗಿ ಅವರು ಉಣ್ಣೋ ಅನ್ನದ ಮೇಲೆ ಉಗುಳಿಕೊಳ್ಳುವಂಥ ಮೂರ್ಖರೇನಲ್ಲ ಬಿಡಿ. ಹೀಗಾಗಿ ಅಧಿಕಾರದ ಗದ್ದುಗೆಯಲ್ಲಿರುವ ಮೂವರು ಮಾಜಿ ಅಧ್ಯಕ್ಷರಾದ ನಿತಿನ್ ಗಡ್ಕರಿ, ರಾಜನಾಥ ಸಿಂಗ್ ಮತ್ತು ವೆಂಕಯ್ಯ ನಾಯ್ಡು ಅವರ ಜಂಟಿ ಸಮರ್ಥನಾ ಹೇಳಿಕೆ ಕೊಟ್ಟು ಮೋದಿ - ಶಾಗಳ ಮುಖ ಉಳಿಸುವ ಪ್ರಯತ್ನದಲ್ಲಿದ್ದಾರೆ.

ಬರುವ ದಿನಗಳಲ್ಲಿ ಈ ಆಂತರಿಕ ವಿದ್ಯಮಾನ ಯಾವ ರೂಪ ತಳೆಯುತ್ತದೋ ಕಾದು ನೋಡಬೇಕು.

...ನತಾ ಪರಿವಾರ ವಿಲೀನ ಪ್ರಹಸನ



...ಬಿಹಾರ ಚುನಾವಣೆಯ ದಿನಗಳು ಹತ್ತಿರವಾಗುತ್ತಿದ್ದಂತೆ ಈ ವರ್ಷ ಏಪ್ರಿಲ್‌ನಲ್ಲಿ ...ತಾ ಪರಿವಾರದ ನಾಯಕರೆಲ್ಲಾ ಒಟ್ಟಿಗೆ ಕಲೆತು 'ಮಹತ್ವ'ದ ಸಭೆಯೊಂದನ್ನು ...ದರು. ಸಮಾಜವಾದಿ ಪಾರ್ಟಿ, ಜೆಡಿಯು, ರಾಷ್ಟ್ರೀಯ ಜನತಾದಳ, ...ಎಸ್, ಇಂಡಿಯನ್ ನ್ಯಾಷನಲ್ ಲೋಕದಳ, ಸಮಾಜವಾದಿ ಜನತಾ ಪಕ್ಷ ...ಯ) - ಈ ಆರು ಪಕ್ಷಗಳನ್ನು ವಿಲೀನಗೊಳಿಸಿ ಹೊಸಪಕ್ಷವೊಂದನ್ನು ...ಸುವುದಾಗಿ ಆ ಸಭೆಯಲ್ಲಿ ಘೋಷಿಸಿದರು. ಹೆಸರಿಡದ ಈ ಪಕ್ಷಕ್ಕೆ ...ಾಯಂ ಅವರೇ ನಾಯಕರೆಂದೂ, ನಿತೀಶ್ ಕುಮಾರ್‌ರನ್ನು ಬಿಹಾರದ ... ಅಭ್ಯರ್ಥಿಯನ್ನಾಗಿಟ್ಟುಕೊಂಡು ಒಟ್ಟಾಗಿ ಚುನಾವಣೆ ಎದುರಿಸುವುದಾಗಿ ...ಷಿಸಿದ್ದರು. ಈ ಹೊಸ ಪಕ್ಷದ ಚಿಹ್ನೆ ಮತ್ತು ಹೆಸರು ಯಾವುದಿರಬೇಕು ... ಬಗ್ಗೆ ಸಾಕಷ್ಟು ಚರ್ಚೆ ನಡೆದು ಒಮ್ಮತಕ್ಕೆ ಬರಲಾಗದೆ, ಆರು ಮಂದಿ ...ಣರ ಸಮಿತಿಗೆ ಈ ಜವಾಬ್ದಾರಿ ವಹಿಸಲಾಯ್ತು. ಈ ಜನತಾ ಪರಿವಾರಕ್ಕೆ ...ರಗಿನಿಂದ ಕಾಂಗ್ರೆಸ್ ಮತ್ತು ಎನ್‌ಸಿಪಿ ಪಕ್ಷಗಳು ಬೆಂಬಲವನ್ನೂ ...ಷಿಸಿದವು.

...ಅಂದಿನ ಸಭೆಯಲ್ಲಿ ಮುಲಾಯಂ, ದೇವೇಗೌಡ, ಲಾಲೂ, ಶರದ್‌ಯಾದವ್, ...ಶ್‌ಕುಮಾರ್, ಓಂಪ್ರಕಾಶ್ ಚೌತಾಲ ಮುಂತಾದ ನಾಯಕರೆಲ್ಲಾ ಒಟ್ಟಿಗೆ ... ಹಿಡಿದುಕೊಂಡು ನಿಂತುಕೊಂಡು ಜನತಾ ಪರಿವಾರ ಒಟ್ಟಾಗಬೇಕೆಂದು ... ಕಾಣುತ್ತಿರುವ ಅವರ ಅಭಿಮಾನಿಗಳ ಫೋಟೋ ಆಲ್ಬಮ್‌ಗೆ ಸಾಕಷ್ಟು ...ಮಗೆ ನೀಡಿದ್ದೂ ಆಯಿತು.

...ನಂತರದ ದಿನಗಳಲ್ಲಿ ನಡೆದದ್ದೆಲ್ಲಾ ನಿರೀಕ್ಷಿತ. ಹಲವು ನಾಯಕರಿಗೆ ಇಲ್ಲಿ ...ಗೆ ಹೆಚ್ಚೇನೂ ಗಿಟ್ಟೋಲ್ಲ ಅಂತ ಅನ್ನಿಸಿದ್ದೇ ತಡ ವಿಲೀನದ ಮಾತು ...ನಂತೆ ಗಾಳಿಗೋಪುರವಾಗಿಯೇ ಉಳಿಯಿತು. ಜನತಾ ಪರಿವಾರ ವಿಲೀನ ...ಮುದು ರಾಜಕೀಯ ವಿಶ್ಲೇಷಕರಿಗೆ ಹಾಗೂ ಜನತಾ ಪರಿವಾರದ ವಿರೋಧಿಗಳಿಗೆ ...ಮ ಮನರಂಜನೆಯ ವಿಷಯವಾಗಿ ಮಾತ್ರ ಉಳಿದುಕೊಂಡಿದ್ದು ವಿಪರ್ಯಾಸವೇ



ಎನ್‌ಡಿಎ ಗಳಿಸಿತ್ತು. ಈಗ ಎನ್‌ಡಿಎ ಶಕ್ತಿ ಕೇವಲ 56ಕ್ಕೆ ಕುಸಿದಿದೆ. ನಿತೀಶ್‌ರನ್ನು ಕಳೆದುಕೊಂಡು, ಚೋಟಾ ಮೋಟಾ ಪಕ್ಷಗಳ ಜೊತೆ ಸೇರಿ ಮೋದಿ ಅಬ್ಬರದಲ್ಲೇ ಗೆಲ್ಲಬಹುದೆಂಬ ಮೋದಿ - ಶಾ ಕೂಟಕ್ಕೆ ಇದು ತಕ್ಕ ಪಾಠವೇ ಸರಿ.

...ದನಗಳು ಓಟು ಹಾಕುತ್ತವೆಯೆ?

ಈ ಮೇಲಿನ ಕಾರಣಗಳ ಜೊತೆಗೆ ಕಳೆದ ಒಂದೂವರೆ ವರ್ಷದ ಮೋದಿಯ ಆಡಳಿತ ಈ ಮಹಾಮೈತ್ರಿಗೆ ಪೂರಕವಾಗಿ ಕೆಲಸ ಮಾಡಿದೆ. ಅಭಿವೃದ್ಧಿಯ ಘೋಷಣೆಯೊಂದಿಗೆ ಗದ್ದುಗೆ ಹಿಡಿದ ಮೋದಿಕೂಟ ಅಧಿಕಾರ ಕೈಗೆ ಸಿಕ್ಕ ನಂತರ ನಿರಂತರವಾಗಿ ಸಾಮರಸ್ಯ ಕದಡುವ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಬಿಹಾರದ ಮೇಲ್‌ಮಧ್ಯಮ ವರ್ಗ ಮತ್ತು ವ್ಯಾಪಾರಿ ವರ್ಗಗಳನ್ನು ದೂರ ಸರಿಯುವಂತೆ ಮಾಡಿದೆ. ಮಾತ್ರವಲ್ಲ, ಲೋಕಸಭಾ ಚುನಾವಣೆಯಲ್ಲಿ ಮೋದಿ ಪರ ಮತ ಚಲಾಯಿಸಿದ್ದ ಹೊಸ ಪೀಳಿಗೆಯ ಮತದಾರರು ಮತ್ತು ಯುವಜನತೆ ಮೋದಿ ಆಡಳಿತದಿಂದ ಭ್ರಮನಿರಸನಗೊಂಡಿರುವುದು ಈ ಫಲಿತಾಂಶದಲ್ಲಿ ನಿಚ್ಚಳವಾಗಿ ಕಂಡುಬಂದಿದೆ. ಇಡೀ ದೇಶಾದ್ಯಂತ ಸುದ್ದಿ ಮಾಡಿದ ದಾದ್ರಿ ಘಟನೆ ಹಾಗೂ ಮೀಸಲಾತಿಯನ್ನು ರದ್ದು ಮಾಡುವ ಮೋದಿಕೂಟದ


ಬಡ ಬಿಹಾರದ ಕೋಟ್ಯಾಧಿಪತಿಗಳು!

ಇಡೀ ಭಾರತದಲ್ಲಿ ಬಿಹಾರ ಎಂದರೆ ಬರಗಾಲ, ಬಡತನಗಳ ಸಂಕೇತವಾಗಿ ಹೋಗಿದೆ. ಆದರೆ ಇಂಥಾ ಬಿಹಾರದ ಜನಪ್ರತಿನಿಧಿಗಳಿಗೆ ಇದು ಅನ್ವಯಿಸುವುದಿಲ್ಲ. ಈ ಬಾರಿ ಆಯ್ಕೆಯಾಗಿರುವವರಲ್ಲಿ ಶೇಕಡ 67ರಷ್ಟು ಶಾಸಕರು ಕೋಟ್ಯಾಧಿಪತಿಗಳು. 2010ರ ಶಾಸನಸಭೆಯಲ್ಲಿ ಈ ಪ್ರಮಾಣ 20% ಮಾತ್ರ ಇತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು. ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣಪತ್ರಗಳ ವಿಶ್ಲೇಷಣೆಯಲ್ಲಿ ಹೊರಬಿದ್ದಂತೆ ಆರ್‌ಜೆಡಿಯ 80 ಶಾಸಕರಲ್ಲಿ 51, ಜೆಡಿಯುನ 71ರಲ್ಲಿ 53, ಬಿಜೆಪಿಯ 53ರಲ್ಲಿ 32 ಹಾಗೂ ಕಾಂಗ್ರೆಸ್‌ನ 27ರಲ್ಲಿ 19 ಶಾಸಕರು ಕೋಟ್ಯಾಧಿಪತಿಗಳೆಂದು ಘೋಷಿಸಿಕೊಂಡಿದ್ದಾರೆ.

ಬಿಜೆಪಿ ಕೂಟಸೋತಿದ್ದು ಸಂತಸದ ಸುದ್ದಿಯಾದರೂ ಬಡ ಬಿಹಾರದ ಜನತೆಯನ್ನು ಪ್ರತಿನಿಧಿಸುತ್ತಿರುವವರು ಕೋಟ್ಯಾಧಿಪತಿಗಳೇ ಎಂಬುದು ಜನತಂತ್ರದ ದೃಷ್ಟಿಯಿಂದ ಆತಂಕದ ವಿಚಾರ.

ದ್ವೇಷದ ಭಾಷಣವನ್ನೇ ಆಧರಿಸಿದ ಮೋದಿ ನಿತೀಶ್‌ರ ಡಿಎನ್‌ಎ ದೋಷ ಪೂರಿತವಾಗಿದೆ ಎಂದರು. ಬಿಜೆಪಿ ಅಧ್ಯಕ್ಷ ಅಮಿತ್ ಶಾ, ಬಿಜೆಪಿ ಸೋತರೆ ಪಾಕಿಸ್ತಾನದಲ್ಲಿ ಪಟಾಕಿ ಹೊಡೆಯುತ್ತಾರೆಂದರು. ಇದು ಬಿಹಾರಿಗಳ ಸ್ವಾಭಿಮಾನವನ್ನು ಕೆರಳಿಸಿತು. ಇಡೀ ಪ್ರಚಾರದುದ್ದಕ್ಕೂ ಮೋದಿ ಮತ್ತು ಕೂಟದ ಪ್ರಚಾರವನ್ನು ಸಮರ್ಥವಾಗಿ ಎದುರಿಸಿ ಮತದಾರರ ವಿಶ್ವಾಸ ಗಳಿಸುವಲ್ಲಿ ಮಹಾಮೈತ್ರಿ ಯಶಸ್ವಿಯಾಗಿದೆ. ಅದೇ ಸಂದರ್ಭದಲ್ಲಿ ತಮ್ಮ ಹಳಸಲು ಯೋಜನೆಗಳನ್ನು ಮುಂದಿಟ್ಟುಕೊಂಡು ಹೊರಟ ಬಿಜೆಪಿ ಕೂಟ ಮಣ್ಣು ಮುಕ್ಕಿದೆ.

ಗೋಮಾಂಸದ ವಿಚಾರವನ್ನು ಮುಂದುಮಾಡಿ ಬಹುಸಂಖ್ಯಾತ ಹಿಂದೂಗಳ ಮತಗಳನ್ನು ಕಬಳಿಸಬಹುದೆಂಬ ಬಿಜೆಪಿ ಲೆಕ್ಕಾಚಾರ ತಲೆಕೆಳಗಾಗಿದೆ. ಮೋದಿ ಮತ್ತು ಅಮಿತ್‌ಶಾ ಜೋಡಿ ಹಸುವನ್ನು ಮುಂದಿಟ್ಟುಕೊಂಡು ಬಿಹಾರ ಚುನಾವಣೆಗೆ ಹೋಗಿ, ಸಗಣಿಯೊಂದಿಗೆ ವಾಪಸ್ ದೆಹಲಿಗೆ ಮರಳಿದೆ.



...ದನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕೇವಲ 4 ಸ್ಥಾನಗಳಿಗೆ ...ದು, ಬಿಹಾರ ರಾಜಕೀಯದಲ್ಲಿ ಲಾಲೂ ಇನ್ನು ಅಪ್ರಸ್ತುತ ಎಂಬಂತಹ ...ತುಗಳು ಕೇಳಿಬರತೊಡಗಿದ್ದವು. ಇಂಥ ಸನ್ನಿವೇಶದಲ್ಲಿ ಏರ್ಪಡಿಸಿಕೊಂಡ ...ತ್ರಿ ರಾಜಕಾರಣದ ಫಲವಾಗಿ ಆರ್‌ಜೆಡಿ ಅತ್ಯಂತ ದೊಡ್ಡ ಪಕ್ಷವಾಗಿ ...ರಹೊಮ್ಮಿದೆ. ಜೈಲು ಶಿಕ್ಷೆಯ ಪರಿಣಾಮವಾಗಿ ಲಾಲು ನೇರವಾಗಿ ...ನಾವಣೆಯಲ್ಲಿ ಭಾಗವಹಿಸುವಂತಿಲ್ಲ, ನಿಜ. ಆದರೇನಂತೆ? ಅವರ ಇಬ್ಬರು ...ಳು ಈ ಬಾರಿ ಶಾಸನಸಭೆಗೆ ಎಂಟ್ರಿ ಪಡೆದುಕೊಂಡಿದ್ದಾರೆ.

...ಸಂಖ್ಯಾತ್ಮಕವಾಗಿ ಪ್ರಬಲವಾಗಿರುವ ಯಾದವರ ಬೆಂಬಲ ಹೇಗೂ ಲಾಲೂ ...ರ್‌ಗಿದೆ. ಲಾಲೂ ಅವರ ಮತ್ತೊಂದು ವಿಶೇಷತೆಯೆಂದರೆ ಕೋಮುವಾದದ ...ದ್ಧದ ಅವರ ಕಠಿಣ ನಿಲುವು. ಈ ವಿಷಯದಲ್ಲಿ ಲಾಲೂ 'ಜಾತ್ಯತೀತ' ...ರನ್ನು ಆರಿಟಿಸಿಕೊಂಡಿರುವ ದೇವೇಗೌಡರ ಪಕ್ಷಕ್ಕಿಂತ ತೀರಾ ಭಿನ್ನ. ...ದಿಯಿಂದಲೂ ಬಿಜೆಪಿ ಪಕ್ಷದ ಕಡು ವಿರೋಧಿಯಾಗಿರುವ ಲಾಲೂ ... ಯಾತ್ರೆಯ ವೇಳೆಯಲ್ಲಿ ಅಡ್ವಾಣಿಗೆ ಸೆಡ್ಡುಹೊಡೆದು, ಬಂಧಿಸಿ ...ಯಾತ್ರೆಯನ್ನು ಬಿಹಾರದಲ್ಲಿ ತಡೆದು ನಿಲ್ಲಿಸಿದ ಐಕೈಕ ಮುಖ್ಯಮಂತ್ರಿ. ಈ ... ಕಾರಣಕ್ಕಾಗಿ ಅವರಿಗೆ ಅಲ್ಪಸಂಖ್ಯಾತರ ಸಂಪೂರ್ಣ ಬೆಂಬಲವಿದೆ. ಈ ...ಣಕ್ಕಾಗಿಯೇ ಲಾಲು ಪ್ರಸಾದ್‌ರನ್ನು ಮಾಧ್ಯಮಗಳಲ್ಲಿರುವ ಕೋಮುವಾದಿ ...ಗಳು ಸತತವಾಗಿ ಟಾರ್ಗೆಟ್ ಮಾಡುತ್ತಾ ಬಂದಿದ್ದಾರೆ. ಲಾಲೂ ಪ್ರಸಾದರ ...ಚಾರ, ಶಿಕ್ಷೆಗಳ ಹೊರತಾಗಿಯೂ ಬಿಹಾರದ ಜನತೆ ಅತಿ ಹೆಚ್ಚಿನ ...ನಗಳನ್ನು ಆರ್‌ಜೆಡಿಗೆ ನೀಡಿದ್ದು ನಿಜಕ್ಕೂ ಆಶ್ಚರ್ಯದ ಸಂಗತಿಯೇ ಸರಿ.

...ಕ್ಷಗಳ ಬಲಾಬಲ

	ಗೆದ್ದ ಸ್ಥಾನಗಳು	ಮತ ಗಳಿಕೆ ಶೇಕಡಾವಾರು	ಒಟ್ಟು ಮತಗಳಿಕೆ
...ಜೆಡಿ	80	18.4%	6995509
...(ಯು)	71	16.8%	6416414
...ಗ್ರೆಸ್	27	6.7%	2539638
...	178	41.9%	15951561
...ಪಿ	53	24.4%	9308015
...ಜೆಪಿ	2	4.8%	1840834
...ಎಲ್‌ಎಸ್‌ಪಿ	2	2.6%	976787
...ಎಎಂ	1	2.3%	864856
...	58	34.1%	12990492

...ಅಂಕಿಅಂಶಗಳನ್ನು ಗಮನಿಸಿದರೆ ಮಹಾ ಮೈತ್ರಿಕೂಟ ಈ ಚುನಾವಣೆಯಲ್ಲಿ ...ಡಿಎಗಿಂತ 7.8% ಹೆಚ್ಚು ಮತಗಳನ್ನು ಪಡೆದುಕೊಂಡಿದೆ. ಈ ...ಗಳಿಕೆಯ ಪ್ರಮಾಣ ಹಿಂದಿನ ಚುನಾವಣೆಯಲ್ಲಿ ಜೆಡಿಯು - ಬಿಜೆಪಿಯ ...ಡಿಎ ಮೈತ್ರಿಯಲ್ಲಿ ಗಳಿಸಿದ್ದಕ್ಕಿಂತ ಹೆಚ್ಚು. 39.07% ಮತ ಗಳಿಸಿದ್ದ ...ದ ಮೈತ್ರಿ, 84.8% ಸೀಟುಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತ್ತು. ...ಲ್ಲಿ ಜೆಡಿಯು 115 ಮತ್ತು ಬಿಜೆಪಿ 91, ಒಟ್ಟಾರೆ 206 ಸೀಟುಗಳನ್ನು

ಹುನ್ನಾರಗಳು ಬಿಹಾರದ ಮತದಾರರನ್ನು ಕೆರಳಿಸಿವೆ.

ಈ ಚುನಾವಣೆಯಲ್ಲಿ ಬಿಜೆಪಿಗೆ ನಿಶ್ಚಿತ ಅಜೆಂಡಾ ಇಲ್ಲದೆ, ಲಾಲೂ ಮತ್ತು ನಿತೀಶ್‌ರನ್ನು ವ್ಯಕ್ತಿಗತವಾಗಿ ದೂಷಿಸುವುದನ್ನೇ ಪ್ರಚಾರತಂತ್ರವಾಗಿಸಿಕೊಂಡಿತು. ಹೀಗೆ ದಿಕ್ಕು ತಪ್ಪಿದಂತಾಗಿದ್ದ ಎನ್‌ಡಿಎ ಕೂಟ ಕೊನೆಕೊನೆಯಲ್ಲಿ ಮೋದಿಯ ಮೂಲಕ 80 ಸಾವಿರ ಕೋಟಿಯ ಬಿಹಾರ ಪ್ಯಾಕೇಜನ್ನು ಘೋಷಿಸಿತು. ಆದರೆ ಇದು ಮತ್ತೊಂದು ತಿರುಗುಬಾಣವಾಗಿದ್ದು ವಿಪರ್ಯಾಸವೇ ಸರಿ. ಇದನ್ನೂ ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡ ಮಹಾಮೈತ್ರಿ ಕೂಟ, ಇದು ಮೋದಿಯ ಮತ್ತೊಂದು ನಾಟಕ ಎಂಬುದನ್ನು ಯಶಸ್ವಿಯಾಗಿ ಜನರಿಗೆ ಮನವರಿಕೆ ಮಾಡಿಕೊಟ್ಟಿತು.

ಬಿಜೆಪಿಯ ಪ್ರಮುಖ ನೇತಾರ ರವಿಶಂಕರ ಪ್ರಸಾದ್ ಈ ಫಲಿತಾಂಶವನ್ನು ವಿಶ್ಲೇಷಿಸಿದ್ದು ಹೀಗೆ: "ನಾವು ಗೆದ್ದಿದ್ದರೆ ಕೋಮುವಾದಿ ಕಾರ್ಡ್ ಕೆಲಸ ಮಾಡಿದೆ ಅಂತಿದ್ದರು; ಸೋತರೆ ಕೋಮುವಾದಿ ಕಾರ್ಡ್ ಸೋತುಹೋಯ್ತು ಅಂತ ಕೆಲವು ಪಂಡಿತರು ವಿಶ್ಲೇಷಣೆ ಮಾಡ್ತಾರೆ. ಅದೇ ನಮ್ಮ ದುರಂತ."

ಹೌದು ಸ್ವಾಮಿ, ನಿಮ್ಮ ದುರಂತ ಕತೆ ಇಷ್ಟಕ್ಕೆ ಮುಕ್ತಾಯವಾಗುವುದಿಲ್ಲ ನಿಮ್ಮ ಆದರ್ಶಪ್ರಾಯ ಗುರು ಹಿಟ್ಲರ್‌ನಿಗಾದ ಗತಿ ಇನ್ನೂ ಮುಂದೆ ಕಾದಿದೆ ಎಂದು ಅವರನ್ನು ಗಟ್ಟಿದನಿಯಲ್ಲಿ ಎಚ್ಚರಿಸಲೇಬೇಕಲ್ಲವೆ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹುಲಿಯ ಜಾಡು ಹಿಡಿದು...



'ನಮ್ಮವರೇ' ಆದ ಮರಾಠರು, ನಿಜಾಮರು ಹೊರಗಿನ ಬ್ರಿಟಿಷ್ ವಸಾಹತುಶಾಹಿಗಳೊಂದಿಗೆ ಕೈಜೋಡಿಸಿದರೆ ಹೈದರ್ ಮತ್ತು ಟಿಪ್ಪು ಕೊನೆಯ ಉಸಿರಿರುವತನಕವೂ ಬ್ರಿಟಿಷರಿಗೆ ಶರಣಾಗದೇ ಧೀರೋದ್ಧಾತವಾಗಿ ಹೋರಾಡಿ ರಣರಂಗದಲ್ಲೇ ವೀರಮರಣವನ್ನಪ್ಪಿದವರು. ಸೈನ್ಯಾಧಿಕಾರಿಗಳ ನೇತೃತ್ವದಲ್ಲಿ ಬಡಸೈನಿಕರನ್ನು ಯುದ್ಧಭೂಮಿಗೆ ಕಳುಹಿಸಿ ಅಂತಃಪುರದಲ್ಲಿ ಆರಾಮಾಗಿರುವ ರಾಜರು ಭಾರತದ ಚರಿತ್ರೆಯಲ್ಲಿ ಪುಟಕ್ಕೊಬ್ಬರಂತೆ ಸಿಗುತ್ತಾರೆ. ಆದರೆ ಒಬ್ಬ ಸಾಮಾನ್ಯ ಸೈನಿಕನಂತೆ ರಣರಂಗದಲ್ಲಿ ಕಾದಾಡಿ ಸಾಯುವ ಟಿಪ್ಪುನಂತಹ ರಾಜರು ಚರಿತ್ರೆಯಲ್ಲಿ ಕಾಣಸಿಗುವುದು ಬಹಳ ಅಪರೂಪ.

ಟಿಪ್ಪು ಕಾಲದಲ್ಲಿ ಸಮಾಜದ ಪುರೋಗಮನಕ್ಕೆ ಪ್ರಧಾನವಾಗಿ ಅಡ್ಡಿಯಾಗಿದ್ದ ವರ್ಗ ಎಂದರೆ ಪಾಳೆಯಗಾರರು. ದಕ್ಷಿಣ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಕರ್ನಾಟಕ ಭಾಗದಲ್ಲಿ ಈಗಿನ ಜಿಲ್ಲೆ ಅಥವಾ ತಾಲೂಕುಗಳ ಗಾತ್ರದಲ್ಲಿ ಈ ಪಾಳೆಗಾರ ಸಂಸ್ಥಾನಗಳಿದ್ದವು. ಈ ಪಾಳೆಗಾರರು ಬೃಹತ್ ಪ್ರಮಾಣದ ಭೂಮಿಗೆ ಒಡೆಯರಾಗಿದ್ದು ಅವುಗಳನ್ನು ಬಡ ರೈತರಿಗೆ ಗೇಣಿ ಕೊಟ್ಟಿದ್ದರು. ತಮ್ಮದೇ ಚಿಕ್ಕಪುಟ್ಟ ಸೈನ್ಯವನ್ನು ಹೊಂದಿದ್ದ ಇವರು ಸಮಾಜದ ಕೆಳವರ್ಗದ ಜನರನ್ನು ನಿರ್ದಯವಾಗಿ ಶೋಷಿಸುತ್ತಿದ್ದರು. ಜನಕಂಟಕವಾಗಿದ್ದ ಇಂತಹ ಪರಾವಲಂಬಿ ಪಾಳೆಗಾರರನ್ನು ನಿರ್ನಾಮ ಮಾಡುವ ಕೆಲಸವನ್ನು ಮೈಸೂರಿನ ದೊರೆ ಚಿಕ್ಕರಾಜ ಒಡೆಯರ್ ಆಗಲೇ ಪ್ರಾರಂಭಿಸಿದ್ದರಾದರೂ ಅದು ಪೂರ್ಣಗೊಂಡಿರಲಿಲ್ಲ. ಆ ಕೆಲಸವನ್ನು ಹೈದರ್ ಮತ್ತು ಟಿಪ್ಪು ಸುಲ್ತಾನ್ ಇಬ್ಬರೂ ಪರಿಣಾಮಕಾರಿಯಾಗಿ ಮಾಡಿ ಮುಗಿಸಿದರು. ಚಿಕ್ಕದೇವರಾಜ ಒಡೆಯರು ಮಂಡ್ಯ, ಮೈಸೂರು ಮತ್ತು ಬೆಂಗಳೂರು ಭಾಗಗಳಲ್ಲಿನ ಪಾಳೆಗಾರರನ್ನು ನಿರ್ನಾಮ ಮಾಡಿದರೆ ಹೈದರ್ ಮತ್ತು ಟಿಪ್ಪು ಹಾಸನ, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಧಾರವಾಡ, ತುಮಕೂರು ಮತ್ತು ಕೋಲಾರ ಭಾಗದಲ್ಲಿದ್ದ ಸುಮಾರು 200 ಪಾಳೆಗಾರರನ್ನು ಧ್ವಂಸ ಮಾಡಿ ಇಡೀ ಭಾಗವನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿದರು. ಪಾಳೆಗಾರರ ಒಡೆತನದಲ್ಲಿದ್ದ ಭೂಮಿಯನ್ನು ಉಳುವ ರೈತರಿಗೆ ಹಂಚಿದರು.

ಜಮೀನ್ದಾರಿ ಮತ್ತು ಜಾಗೀರ್ದಾರಿ ಪದ್ಧತಿಗಳನ್ನು ನಾಶಪಡಿಸುವುದಕ್ಕೆ ಟಿಪ್ಪು ಸುಲ್ತಾನ್ ಬಹಳ ಉತ್ಸುಕನಾಗಿದ್ದ. ಯಾರು ಭೂಮಿಯನ್ನು ಊಳುತ್ತಾರೋ, ಜಾತಿ, ಮತ, ಧರ್ಮ ಯಾವುದೇ ಆಗಿದ್ದರೂ, ಅವರು ಮಾತ್ರವೇ ಭೂಮಿಯ ಒಡೆತನ ಹೊಂದಿರಬೇಕು ಎಂದು ಟಿಪ್ಪು ಘೋಷಿಸಿದ್ದ ಎಂದು ಕಬೀರ್ ಕೌಸರ್ ದಾಖಲಿಸಿದ್ದಾರೆ. ಅಂತೆಯೇ ಪಾಳೆಗಾರರನ್ನು ನಿರ್ದಯವಾಗಿ ಹತ್ತಿಕ್ಕಿ ಅವರ ಒಡೆತನದ ಭೂಮಿಯನ್ನು ಉಳುವ ಗೇಣಿದಾರ ಜನಸಮೂಹಕ್ಕೆ ಹಂಚಿದ್ದು ಆಗಿನ ಕಾಲದಲ್ಲಿ ಕ್ರಾಂತಿಕಾರಕ ಬೆಳವಣಿಗೆಯೇ ಹೌದು. ನಿಜ ಹೇಳಬೇಕೆಂದರೆ ಚರಿತ್ರೆಯಲ್ಲಿ ದಲಿತರು ಮೊಟ್ಟಮೊದಲ ಬಾರಿಗೆ ಭೂಮಿಯ ಒಡೆತನದ ರುಚಿಯನ್ನು ಕಂಡಿದ್ದು ಹೈದರ್ ಮತ್ತು ಟಿಪ್ಪು ಕಾಲದಲ್ಲೇ ಎಂದರೆ ಅತಿಶಯೋಕ್ತಿಯಾಗಲಾರದು! ಈ ವಿಚಾರದಲ್ಲಿ ಟಿಪ್ಪು ತನ್ನ ತಂದೆ ಹೈದರ್‌ಗಿಂತಲೂ ಒಂದು ಹೆಜ್ಜೆ ಮುಂದಿದ್ದ. ಬೃಹತ್ ದೇವಸ್ಥಾನಗಳು, ಬ್ರಾಹ್ಮಣ ಮಠಗಳು ನೂರಾರು ಎಕರೆ ಭೂಮಿಯ ಮೇಲೆ ಹೊಂದಿದ್ದ 'ಮುಕ್ತ ಒಡೆತನದ ಹಕ್ಕಿಗೂ' ಟಿಪ್ಪು ಕತ್ತರಿ ಹಾಕಿದ್ದ. ಇನ್ನೂ ಕೆಲವು ಕಡೆ ಮಠಗಳ, ದೇವಾಲಯಗಳ ಬೃಹತ್ ಪ್ರಮಾಣದ ಜಮೀನನ್ನು ವಶಪಡಿಸಿಕೊಂಡು ಉಳುವ ಶೂದ್ರ ಸಮುದಾಯಕ್ಕೆ ಹಂಚಿದ್ದ! ಸರ್ಕಾರಿ ಹಣ, ಭೂಮಿಗಳನ್ನು ತಮ್ಮ ಸ್ವಂತ ಆಸ್ತಿಯಂತೆ ಮಠ, ದೇವಾಲಯಗಳಿಗೆ ಹಂಚುವ ಮನಸ್ಸುಗಳು ಟಿಪ್ಪುವನ್ನು ವಿರೋಧಿಸುವುದು ಸಹಜ ಅಲ್ಲವೆ? ಈ ಪಾಳೆಗಾರ ವಿರೋಧಿ ಮಿಲಿಟರಿ ಅಭಿಯಾನದ ಪ್ರಕ್ರಿಯೆಯಲ್ಲಿಯೇ ಕರ್ನಾಟಕದ ಏಕೀಕರಣವೂ ದೊಡ್ಡ ಮಟ್ಟದಲ್ಲಿ ಆಯಿತು. ಬೆಳಗಾಂ ಮತ್ತು ಬಿಜಾಪುರದ ಕೆಲವು ಭಾಗಗಳು ಹಾಗೂ ಬೀದರ್ ಮತ್ತು ಗುಲ್ಬರ್ಗಾಗಳ ಸಂಪೂರ್ಣ ಭಾಗಗಳನ್ನು ಹೊರತುಪಡಿಸಿ ಇಡೀ ಕರ್ನಾಟಕ ಟಿಪ್ಪು ಆಳ್ವಿಕೆಗೆ ಒಳಪಟ್ಟಿತ್ತು, ಆದರೆ ಈ ಐಕ್ಯ ಕರ್ನಾಟಕ ಕೇವಲ ನಲ್ವತ್ತು ವರ್ಷ ಮಾತ್ರ ಬಾಳಿ ಟಿಪ್ಪು ಮರಣದ ನಂತರ ಮತ್ತೆ ಹರಿದು ಹಂಚಿಹೋಯಿತು ಎಂಬುದು ಬೇರೆ ವಿಷಯ.

ಈ ಭೂಸುಧಾರಣೆಯ ಜೊತೆಗೆ ಒಟ್ಟಾರೆ ಗ್ರಾಮೀಣ ಪ್ರದೇಶದ ಆಡಳಿತ ಯಂತ್ರಾಂಗವನ್ನೇ ಟಿಪ್ಪು ಉಳುವ ಶೂದ್ರಪರವಾಗಿ ಪುನರ್ರೂಪಿಸಿದ್ದು ಟಿಪ್ಪು ಸುಲ್ತಾನನ ಮತ್ತೊಂದು ಕೊಡುಗೆ. ಜೊತೆಗೆ ಉಳುವ ಭೂಮಿಗೆ ನೀರಾವರಿ ಒದಗಿಸಲು ಸಾಕಷ್ಟು ಶ್ರಮಿಸಿದ್ದು ಇನ್ನೊಂದು ಸಾಧನೆ. ದಕ್ಷಿಣ ಕರ್ನಾಟಕದಲ್ಲಿ ಹಳ್ಳಿಹಳ್ಳಿಗಳಲ್ಲಿ ನಾವಿಂದು ಕಾಣುವ ಹತ್ತಾರು ಕೆರೆಕಟ್ಟೆಗಳು ನಿರ್ಮಾಣವಾಗಿದ್ದು ಟಿಪ್ಪು ಕಾಲದಲ್ಲೇ. ಅಂದಿನ ಮೈಸೂರು ರಾಜ್ಯದ ಒಟ್ಟು ಉಳುವ ಭೂಮಿಯಲ್ಲಿ ಶೇಕಡ 35ಕ್ಕೂ ಹೆಚ್ಚು ಭೂಮಿ ನೀರಾವರಿ ಸೌಲಭ್ಯಕ್ಕೊಳಪಟ್ಟಿತ್ತು ಎಂಬುದು ಸಾಮಾನ್ಯ ಸಾಧನೆಯಲ್ಲ. ಇಂದಿನ ಕರ್ನಾಟಕವೂ ಆ ಸಾಧನೆಯನ್ನು ಮಾಡಿಲ್ಲ ಎಂಬುದುನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು.

ಅಲ್ಲದೇ ಟಿಪ್ಪು ಸುಲ್ತಾನ್ ದುಡಿಯುವ ರೈತಾಪಿ ಜನಸಮುದಾಯಕ್ಕೆ ಬಡ್ಡಿರಹಿತ ಸಾಲ ಕೊಡುವ ವ್ಯವಸ್ಥೆ ಮಾಡಿದ್ದ! ಒಂದು ಸ್ವರೂಪದ ಸಾಲವನ್ನು ಎರಡು ವರ್ಷಗಳೊಳಗೆ ಹಾಗೂ ಇನ್ನೊಂದು ಸ್ವರೂಪದ ಸಾಲವನ್ನು ನಾಲ್ಕು ವರ್ಷಗಳ ಒಳಗೆ ತೀರಿಸುವ ಅವಕಾಶ ರೈತಾಪಿಗಿತ್ತು. ಪ್ರಾಯಶಃ ಟಿಪ್ಪುಗಿಂತ ಮುಂಚಿನ ಯಾವ ರಾಜನಾಗಲೀ ಅಥವಾ ಟಿಪ್ಪು ನಂತರದಲ್ಲಿ ಇಂದಿನ ಸರ್ಕಾರದ ತನಕವಾಗಲೀ ಈ ರೀತಿಯ ವ್ಯವಸ್ಥೆ ಮಾಡಿದ ಯಾವೊಂದು ಉದಾಹರಣೆಗಳೂ ನಮಗೆ ಸಿಗುವುದಿಲ್ಲ, ಅಂತೆಯೇ ಆಗಿನ ಕಾಲದಲ್ಲಿ ಇಡೀ ದೇಶಾದ್ಯಂತ ಅಷ್ಟೊಂದು



ಜನಪ್ರಿಯವಾಗಿರದ ಹತ್ತು ಹಲವು ಬಗೆಯ ಕಾಳುಗಳು, ಎಣ್ಣೆ ಕಾಳುಗಳು, ಔಷಧೀಯ ಸಸ್ಯಗಳು, ತರಕಾರಿಗಳು, ಹಣ್ಣುಗಳು ಮುಂತಾದ ಬೆಳೆಗಳನ್ನು ಬೆಳೆಯುವುದಕ್ಕೆ ಟಿಪ್ಪು ರೈತಾಪಿ ಸಮುದಾಯವನ್ನು ಪ್ರೇರೇಪಿಸಿದ. ಒಟ್ಟಾರೆಯಾಗಿ ಸಮಾಜವನ್ನು ಒಂದು ಹೆಜ್ಜೆ ಮುಂದಕ್ಕೊಯ್ಯುವ ಆತನ ದೂರದೃಷ್ಟಿ ನಿಜಕ್ಕೂ ಶ್ಲಾಘನೀಯ.

ಒಟ್ಟಾರೆ ಭಾರತೀಯ ಸಮಾಜ ಹಳೆಯ ಜಮೀನ್ದಾರಿ ವ್ಯವಸ್ಥೆಯಿಂದ ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯೆಡೆಗೆ ಪರಿವರ್ತನೆಯಾಗುತ್ತಿದ್ದ ಕಾಲಘಟ್ಟದಲ್ಲಿ ಹೈದರ್ ಮತ್ತು ಟಿಪ್ಪು ಸುಲ್ತಾನ್ ಮೈಸೂರನ್ನು ಆಳುತ್ತಿದ್ದರು. ನಿಸ್ಸಂದೇಹವಾಗಿ ಅವರಿಬ್ಬರೂ ಹಳೆಯ ಊಳಿಗಮಾನ್ಯ ವ್ಯವಸ್ಥೆಗೆ ವಿರುದ್ಧವಾಗಿ ಹೊಸ ಬಂಡವಾಳಶಾಹಿ ವ್ಯವಸ್ಥೆಯ ಹರಿಕಾರರಾಗಿ ನಿಂತಿದ್ದರು. ಅಂದರೆ ಆ ನಿರ್ದಿಷ್ಟ ಚಾರಿತ್ರಿಕ ಘಟ್ಟದಲ್ಲಿ ಅವರು ಕ್ರಾಂತಿಕಾರಿಗಳೇ ಆಗಿದ್ದರು. (ಈಗ ಬಂಡವಾಳಶಾಹಿ ವ್ಯವಸ್ಥೆಗಿಂತಲೂ ಇನ್ನೂ ಮುಂದೆ ಸಮಾಜವಾದಿ ವ್ಯವಸ್ಥೆಯೆಡೆಗೆ ಹೋಗುವುದು ಹೇಗೆ ಕ್ರಾಂತಿಕಾರಿ ಬೆಳವಣಿಗೆಯಾಗುತ್ತದೆಯೋ ಹಾಗೆ ಆ ಕಾಲಘಟ್ಟದಲ್ಲಿ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳವಾದದೆಡೆಗೆ ಹೋಗುವುದೂ ಆ ಚಾರಿತ್ರಿಕ ಘಟ್ಟದಲ್ಲಿ ಕ್ರಾಂತಿಕಾರಕ ಬೆಳವಣಿಗೆಯಾಗುತ್ತದೆ.) ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಿದ್ದ ಪಾಳೆಗಾರ-ಭೂಮಾಲೀಕ ವರ್ಗವನ್ನು ಟಿಪ್ಪು-ಹೈದರ್ ಇಬ್ಬರೂ ನಿರ್ನಾಮ ಮಾಡಿದ್ದು ಇದಕ್ಕೆ ಒಂದು ಉದಾಹರಣೆಯಾದರೆ ಹೊಸ ಬಂಡವಾಳಶಾಹಿ ವ್ಯವಸ್ಥೆಯ ಆಧಾರಸ್ತಂಭಗಳಾದ ವ್ಯಾಪಾರ ಮತ್ತು ಕೈಗಾರಿಕೆಗಳನ್ನು ಅಮೋಘವಾಗಿ ಪ್ರೋತ್ಸಾಹಿಸಿದ್ದು ಆ ಕ್ರಾಂತಿಕಾರಿ ಬೆಳವಣಿಗೆಗೆ ಇನ್ನೊಂದು ಉದಾಹರಣೆಯಾಗಿ ಕಾಣುತ್ತದೆ. ಬ್ರಿಟಿಷ್ ಚರಿತ್ರೆಕಾರರೇ ಬರೆದಿರುವಂತೆ ಅಂದಿನ ಮೈಸೂರು ರಾಜ್ಯದಲ್ಲಿ ಪ್ರತಿ ಮೂರು ಮೈಲಿಗಳಿಗೆ ಒಂದರಂತೆ ಸಾಪೇಕ್ಷ ದೊಡ್ಡ ಪಟ್ಟಣಗಳಲ್ಲಿ ಸಂತೆಗಳು ನಡೆಯುತ್ತಿದ್ದವು. ಅದರಲ್ಲೂ ಗುಬ್ಬಿ ಮತ್ತು ಹರಿಹರ ಪಟ್ಟಣಗಳಂತೂ ಇಡೀ ಮೈಸೂರು ರಾಜ್ಯದ ಬೃಹತ್ ವ್ಯಾಪಾರಿ ಕೇಂದ್ರಗಳಾಗಿ ಮಾರ್ಪಟ್ಟಿದ್ದವು. ನಗರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗಿತ್ತು, ಬಂಡವಾಳಶಾಹಿ ವ್ಯವಸ್ಥೆಯ ಭ್ರೂಣ ರೂಪವಾಗಿ ಕೃಷಿಯೇತರ ವ್ಯಾಪಾರಿ ವರ್ಗವೊಂದು ಸದೃಢವಾಗಿ ಮೈದಳೆಯುತ್ತಿದ್ದುದು ನಿಜಕ್ಕೂ ಅಂದಿನ ಸಂಕ್ರಮಣ ಘಟ್ಟದಲ್ಲಿ ಕ್ರಾಂತಿಕಾರಕ ಬೆಳವಣಿಗೆಯೇ ಹೌದು. ಆಧುನಿಕ ಪ್ರಭುತ್ವದ ನಿರ್ಮಾಣ, ತಂತ್ರಜ್ಞಾನದ ಬೆಳವಣಿಗೆ, ವ್ಯಾಪಾರ-ವಾಣಿಜ್ಯದಲ್ಲಿ ಅಪಾರ ಪ್ರಗತಿ, ಕೃಷಿಯ ವಾಣಿಜ್ಯೀಕರಣ, ಕೈಗಾರಿಕಾ ಉತ್ಪಾದನೆಯಲ್ಲಿ ಜಿಗಿತ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಬಂಡವಾಳಶಾಹಿ ಸಮಾಜದ ಬೀಜರೂಪಗಳು ಟಿಪ್ಪು ಸುಲ್ತಾನನ ಮೈಸೂರು ರಾಜ್ಯದಲ್ಲಿ ಕಾಣುತ್ತಿದ್ದವು. ನಿಜಹೇಳಬೇಕೆಂದರೆ ಅಂದಿನ ಯೂರೋಪಿಗಿಂತಲೂ ಟಿಪ್ಪು ನೇತೃತ್ವದ ಅಂದಿನ ಮೈಸೂರು ರಾಜ್ಯ ಬಹಳಷ್ಟು ಮುಂದಿತ್ತು, ಬ್ರಿಟಿಷರು ಟಿಪ್ಪುವನ್ನು ಕೊಂದು, ಹಳೆಯ ಮೈಸೂರು ರಾಜರಿಗೆ ರಾಜ್ಯವನ್ನೊಪ್ಪಿಸಿ, ಪಾಳೆಗಾರ, ಭೂಮಾಲಿಕರಂತಹ ಹಳೆಯ ಊಳಿಗಮಾನ್ಯ ಪ್ರಭುಗಳನ್ನು ಗ್ರಾಮೀಣ ಪ್ರದೇಶದಲ್ಲಿ ಪ್ರತಿಷ್ಠಾಪಿಸಿ ಆಗತಾನೆ ಭ್ರೂಣಾವಸ್ಥೆಯಲ್ಲಿದ್ದ ಬಂಡವಾಳಶಾಹಿ ಬೆಳವಣಿಗೆಯನ್ನು ಹೊಸಕಿ ಹಾಕಿ ಹಳೆಯ ಊಳಿಗಮಾನ್ಯ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸದೇ ಹೋಗಿದ್ದರೆ ಇಂದಿನ ಯೂರೋಪಿಗಿಂತಲೂ ಇಂದಿನ ಇಂಡಿಯಾ ಬಹಳ ಮುಂದಿರುತ್ತಿತ್ತು ಎಂಬುದರಲ್ಲಿ ಅನುಮಾನವಿಲ್ಲ, ಹಾಗಾಗಿ, 1799ರ ಮೇ 4ರಂದು ಶ್ರೀರಂಗಪಟ್ಟಣದಲ್ಲಿ ನಡೆದ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನಿಗೆ ಉಂಟಾದ ಸೋಲು ಇಡೀ ಇಂಡಿಯಾದ ಸೋಲೇ ಆಗಿದೆ!

ಟಿಪ್ಪು ಹಿಂದೂಗಳನ್ನು ಬಲವಂತವಾಗಿ ಇಸ್ಲಾಂಗೆ ಮತಾಂತರಿಸಿದ ಎಂಬುದು ಚಿದಾನಂದಮೂರ್ತಿ ಅವರ ಪ್ರಧಾನ ತಕರಾರು. ಟಿಪ್ಪು ಕಾಲದಲ್ಲಿ ಮತಾಂತರ ಆಗಲೇ ಇಲ್ಲ ಎಂದು ಹೇಳುವುದು ಇನ್ನೊಂದು ತುದಿಯ ಅತಿರೇಕದ ವಾದವಷ್ಟೇ ಆಗುತ್ತದೆಯೇ ಹೊರತು ಅಂದಿನ ಕಾಲಘಟ್ಟದ ವಸ್ತುನಿಷ್ಠ ಚಿತ್ರಣವಾಗುವುದಿಲ್ಲ, ಹೌದು, ಆ ಕಾಲದ ಎಲ್ಲಾ ರಾಜರೂ ತಮ್ಮ ತಮ್ಮ ಧರ್ಮದಲ್ಲಿ ಶ್ರದ್ಧೆ ಇದ್ದಂತೆ, ಚಿದಾನಂದಮೂರ್ತಿಗಳನ್ನೂ ಒಳಗೊಂಡಂತೆ ಇಂದಿನ ಎಲ್ಲಾ ಮಂದಿಗೂ ತಮ್ಮ ತಮ್ಮ ಧರ್ಮದಲ್ಲಿ ಶ್ರದ್ಧೆ ಇರುವಂತೆ ಟಿಪ್ಪುಗೂ ಕೂಡ ಇಸ್ಲಾಂನಲ್ಲಿ ಅಪಾರ ಶ್ರದ್ಧೆ ಇತ್ತು, ಆತ ಇಸ್ಲಾಂ ಧರ್ಮದ ಪ್ರತಿಪಾದಕನಾಗಿದ್ದದ್ದೂ ನಿಜ. ಇಸ್ಲಾಂ ಧರ್ಮಕ್ಕೆ ಅನ್ಯ ಧರ್ಮೀಯರು ಮತಾಂತರಗೊಳ್ಳುವಂತೆ ಉತ್ತೇಜಿಸಿದ್ದೂ ನಿಜ. ಅಂತೆಯೇ ದೊಡ್ಡ ಸಂಖ್ಯೆಯ ಹಿಂದೂಗಳು ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದೂ ನಿಜ. ಆದರೆ, ಅವು ಯಾವೂ ಬಲವಂತದ ಮತಾಂತರಗಳಾಗಿರಲಿಲ್ಲ, ಅವನ ಕಾಲದಲ್ಲಿ ದಲಿತರು, ಸಮಾಜದ ಇನ್ನಿತರ ದಮನಿತ ಶೂದ್ರ ತಳಸಮುದಾಯಗಳು ಹಿಂದೂ ಧರ್ಮದಲ್ಲಿನ ಉಸಿರು ಕಟ್ಟಿಸುವ ವಾತಾವರಣದಿಂದ ಹೊರಬರುವುದಕ್ಕೆ ಉತ್ಸುಕರಾಗಿದ್ದರು. ಅಸ್ಪೃಶ್ಯತೆಗಳಂತಹ ಅಮಾನವೀಯ ಆಚರಣೆಗಳ ಮೂಲಕ, ಶೋಷಣೆಯ ಮೂಲಕ ತಮ್ಮನ್ನು ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿ ಕಾಣುತ್ತಿದ್ದ ಹಿಂದೂ ಧರ್ಮದ ಪರಿಸರದಿಂದ ಹೊರಬರುವುದಕ್ಕೆ ತುದಿಗಾಲಲ್ಲಿ ನಿಂತಿದ್ದ ದಲಿತರ ಮತ್ತಿತರ ತಳಸಮುದಾಯಗಳಿಗೆ ಟಿಪ್ಪೂನ ನೀತಿಗಳು ಒಂದಿಷ್ಟು ಪ್ರಚೋದನೆ ನೀಡಿದವಷ್ಟೆ.

ಈ ಸ್ವಪ್ರೇರಿತ ಮತಾಂತರಗಳಲ್ಲದೇ ಅಲ್ಪಪ್ರಮಾಣದಲ್ಲಿ 'ಒತ್ತಾಯದ ಮತಾಂತರ'ಗಳೂ ನಡೆದವು. ಭವಿಷ್ಯವಿಲ್ಲದೇ ನಿಕೃಷ್ಟ ಜೀವನ ಸಾಗಿಸುತ್ತಿದ್ದ ಕೈದಿಗಳು, ನಿರ್ಗತಿಕರು, ವೇಶ್ಯೆಯರು, ಭಿಕ್ಷುಕರು ಮುಂತಾದವರಿಗೆ ಉತ್ತಮ ಭವಿಷ್ಯದ ಭರವಸೆ ತೋರಿಸಿಯೂ ಮತಾಂತರ ಮಾಡಿಕೊಳ್ಳಲಾಯಿತು. ಹೀಗೆ ಮತಾಂತರಗೊಂಡವರು ಟಿಪ್ಪು ನೇತೃತ್ವದ ಮೈಸೂರು ರಾಜ್ಯದಲ್ಲಿ ಅನೇಕ ಉದ್ಯೋಗಗಳನ್ನು ಪಡೆದುಕೊಂಡು ಭವಿಷ್ಯವನ್ನು ರೂಪಿಸಿಕೊಂಡರು. ವಾಸ್ತವದಲ್ಲಿ ಮೈಸೂರು ಸೈನ್ಯದ ಚೇಲಾ ಬೆಟಾಲಿಯನ್ ಇಂತಹ ಮತಾಂತರಗೊಂಡ ವರ್ಗಗಳ ಜನರಿಂದಲೇ ನಿರ್ಮಾಣವಾದ ಸೈನಿಕ ತುಕಡಿಯಾಗಿತ್ತು, ವಿಶೇಷ ಎಂದರೆ ಇದು ಮೈಸೂರು

ಸೈನ್ಯದ ಅತ್ಯುತ್ತಮವಾಗಿ ತರಬೇತುಗೊಂ
ಮತ್ತು ಧೈರ್ಯಶಾಲಿ ಸೈನಿಕ ತುಕಡಿ
ಪ್ರಶಂಸೆಗೆ ಒಳಗಾಗಿತ್ತು! ಉತ್ತಮ
ಭರವಸೆಯ 'ಆಮಿಷ
ನಡೆಸಲಾದ ಈ 'ಬಲ
ಮತಾಂತರ'ವನ್ನು ವಿರೋ
ವಾಗಲೂ, ಈ ನಿ
ಜನವರ್ಗಗಳಿಗೆ ಪರ್ಯಾಯ
ಯೇನಾದರೂ ಇತ್ತೆ ಎಂಬ
ದಿಂದಲೂ ನೋಡಬೇಕಾಗುತ್ತ

ಇನ್ನೊಂದು ವಿಷಯವನ್ನೂ
ಗಮನಿಸಿ. ಮುಸ್ಲಿಂ ರಾಜರಾದ ಹೈದರ್
ನಿಜಾಮರು ಆಳಿದ ಪ್ರದೇಶಕ್ಕೂ, ಅದಕ್ಕೂ
ಮುಸ್ಲಿಂ ದೊರೆಗಳು ಆಳಿದ ಉತ್ತರ ಪ್ರದೇಶಕ್ಕೂ
ಮತ್ತು ಹೈದರ್ ಆಳಿದ ದಕ್ಷಿಣ ಕರ್ನಾಟಕಕ್ಕೂ ಹೋ
ನೋಡಿ. ನಿಜಾಮರು ಆಳಿದ ಹೈದರಾಬಾದ್
ಮುಸ್ಲಿಂ ದೊರೆಗಳು ಆಳಿದ ಉತ್ತರ ಪ್ರದೇಶಗಳಲ್ಲಿ
ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿದ್ದರೆ ದಕ್ಷಿಣ ಕರ್ನಾ
ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿಲ್ಲ, ಟಿಪ್ಪು ಮತ್ತು
ಆಲಿಗಳ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ
ಸುತ್ತಮುತ್ತಲಿನ ಪ್ರದೇಶಗಳೂ ಈ ಕಟುಸತ್ಯಕ್ಕೆ
ಸಾಕ್ಷಿಯಾಗಿ ನಿಂತಿವೆ. ಅದಕ್ಕೆ ಪ್ರಧಾನ ಕಾರಣ
ಮತ್ತು ಟಿಪ್ಪು ಅನ್ಯ ಧರ್ಮಿಯರನ್ನು ಬೃಹತ್ ಪ್ರಮಾ
ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಮತಾ
ಮಾಡದಿರುವುದೇ ಆಗಿದೆ.

ಟಿಪ್ಪು ಪರಧರ್ಮ ಸಹಿಷ್ಣು ಆಗಿದ್ದ ಎನ್ನು
ನಮ್ಮೆದುರು ಬೇಕಾದಷ್ಟು ನಿದರ್ಶನಗಳಿವೆ. ನೆ
ನಾವು ಯಾವ ಮರಾಠರನ್ನು ಹಿಂದೂಗಳು
ಕರೆಯುತ್ತೇವೆಯೋ ಅದೇ ಮರಾಠರು ಹಿಂದೂಗಳ
ಸ್ಥಳವೆನಿಸಿದ ಶೃಂಗೇರಿಯ ಮೇಲೆ ದಾಳಿ
ಶಾರದಾಪೀಠವನ್ನು ಧ್ವಂಸಗೊಳಿದರು. ಆದರೆ,
ಆಗಿದ್ದ ಟಿಪ್ಪು ಶೃಂಗೇರಿ ರಕ್ಷಣೆಗೆ ವಿಫಲನಾ
ಕ್ಷಮೆಯಾಚಿಸಿ ಶಾರದಾಪೀಠದ ಮರುಸ್ಥಾಪನೆಗೆ,
ಜೀರ್ಣೋದ್ಧಾರಕ್ಕೆ ಅಪಾರ ನೆರವು ನೀಡಿದ ದಾಖ
ಇಂದಿಗೂ ಶೃಂಗೇರಿ ಮಠದಲ್ಲಿವೆ.

ಅಷ್ಟೇ ಏಕೆ, ನಂಜನಗೂಡಿನ ದೇವಾಲ
ಪಚ್ಚೆಲಿಂಗ ಸ್ಥಾಪನೆ, ದೇವನಹಳ್ಳಿಯ ಕೋ
ವೇಣುಗೋಪಾಲಸ್ವಾಮಿ, ತಮಿಳುನಾಡಿನ ನಾ
ಕೋಟೆಯಲ್ಲಿರುವ ರಂಗನಾಥಸ್ವಾಮಿ ಮತ್ತು ನರಸಿಂಹ
ಬಾದಾಮಿಯ ವಾತಾಪಿ, ಬೆಂಗಳೂರು ಕೋಟೆಯ
ಗಣೇಶನ ದೇವಸ್ಥಾನ, ಮೇಲುಕೋಟೆಯ ದೇ
ಮುಂತಾದವುಗಳಿಗೆ ಆತ ನೀಡಿದ ಅಪಾರ ಹಣ
ನೆರವನ್ನು ಯಾರಾದರೂ ಮರೆಯಲಾದೀತೆ?
ದೂರ ಹೋಗಬೇಡಿ. ಆತ ಮುಸ್ಲಿಂ ಮತಾಂಧನಾ
ಹಿಂದೂ ವಿರೋಧಿಯಾಗಿದ್ದರೆ ತನ್ನ ರಾಜಧಾನಿ
ಶ್ರೀರಂಗಪಟ್ಟಣದಲ್ಲೇ ನೂರಾರು ವರ್ಷಗಳಿಂದ ತ
ನಿಂತಿದ್ದ ಶ್ರೀರಂಗನಾಥಸ್ವಾಮಿ ದೇವಸ್ಥಾನವನ್ನು
ಕೆಡವಲಿಲ್ಲ? ಬದಲಿಗೆ ಅದಕ್ಕೆ ದಾನದತ್ತಿಗಳನ್ನು
ಮಾಡಿದ? ಒಂದೆಡೆ ಮಸೀದಿಯಿಂದ ನಮಾ
ಇನ್ನೊಂದೆಡೆ ಶ್ರೀರಂಗನಾಥಸ್ವಾಮಿ ದೇವಸ್ಥಾ
ಘಂಟಾನಾದ ಕೇಳುತ್ತಲೇ ಪ್ರಶಾಂತಚಿತ್ತ
ಶ್ರೀರಂಗಪಟ್ಟಣದಲ್ಲಿ ಟಿಪ್ಪು ನೆಲೆಸಿದ್ದಕ್ಕೆ ಬೇರೇನು
ಕಾರಣಗಳಿದ್ದವೆ? ಬೆಂಗಳೂರಿನ ಕೋಟೆ ವೆಂಕಟ
ದೇವಸ್ಥಾನದ ಬಳಿಯಲ್ಲಿಯೇ ತನಗೊಂದು ಅರಮನೆ
ಕಟ್ಟಿಕೊಂಡ? ತನ್ನ ಕಾಲದಲ್ಲಿ ಚಾಲ್ತಿಯಲ್ಲಿದ್ದ ತ್ರಿ
ಲಕ್ಷ್ಮಿದೇವಿಯ ಕೆತ್ತನೆಗಳಿರುವ ನಾಣ್ಯಗ
ಹಿಂತೆಗೆದುಕೊಳ್ಳಲಿಲ್ಲ? ಅಷ್ಟೇ ಏಕೆ, ಆತ
ಹಾಕಿಕೊಂಡಿದ್ದ ಉಂಗುರದ ಮೇಲೆ ದೇವನಾಗರಿ ಲಿ
'ರಾಮ' ಎಂದು ಕೆತ್ತಲಾಗಿತ್ತು! (ಟಿಪ್ಪು ಮರಣಾ
ಆತನ ಬಹಳಷ್ಟು ವಸ್ತುಗಳ ಜೊತೆ ಈ ಉಂಗುರ
ಬ್ರಿಟಿಷರು ಒಯ್ದಿದ್ದರು. ಇದನ್ನು 2014ನೇ ಸಾ
ಇಂಗ್ಲೆಂಡಿನಲ್ಲಿ ಹರಾಜು ಹಾಕಲಾಯಿತು.)

ಟಿಪ್ಪು ಹಿಂದೂ ದೇವಾಲಯಗಳಿಗೆ ದಾನದತ್ತಿ ಕೊ
ತನ್ನ ಅನಿಷ್ಟ ನಿವಾರಣೆಗೇ ಹೊರತು ಭಕ್ತಿಯಿಂದಲ್ಲ
ಚಿದಾನಂದಮೂರ್ತಿಯವರು ವಾದಿಸುತ್ತಾರೆ! ಶೃಂ
ಮಠಕ್ಕೆ ಟಿಪ್ಪು ಬರೆದ ಪತ್ರದಲ್ಲಿ ಆತನ
ವ್ಯಕ್ತವಾಗಿರುವುದನ್ನು ಒಪ್ಪಿಕೊಳ್ಳುತ್ತಲೇ ಅದು ತೋ
ಮಾತ್ರ ಎಂದು ಜರೆಯುತ್ತಾರೆ! ಸುಮ್ಮನೆ ಚ
ಮಾತಾಡುವುದಾದರೆ, ಕಟ್ಟಾ ಹಿಂದೂ ಧರ್ಮಿಯರಾ
ಚಿದಾನಂದಮೂರ್ತಿಯವರಿಗೆ ಇಸ್ಲಾಂ ಧರ್ಮದಲ್ಲಿ
ಇರಬೇಕು, ಅಲ್ಲಾನಲ್ಲಿ ಭಕ್ತಿ ಬರಬೇಕು
ನಿರೀಕ್ಷಿಸುವುದು ಎಷ್ಟು ಅಸಮಂಜಸವೋ ಹಾ
ಕಟ್ಟಾ ಮುಸ್ಲಿಂ ಧರ್ಮಿಯನಾಗಿದ್ದ ಟಿಪ್ಪುಗೆ ಹಿ
ಧರ್ಮದಲ್ಲಿ ಶ್ರದ್ಧೆ, ಶಾರದಾಪೀಠ, ಮೇಲುಕೋಟೆ
ಭಕ್ತಿ ಇರಬೇಕಿತ್ತು ಎಂದು ನಿರೀಕ್ಷಿಸುವುದೂ
ಅಸಮಂಜಸವಾಗುತ್ತದೆಯಲ್ಲವೆ? ಕಷ್ಟ ಕಾಲದ
ದೇವಸ್ಥಾನಗಳ ನೆರವಿಗೆ ನಿಂತ ಆತನ ಪರಧರ್ಮ

ನಯನ್ನು ಅರಿಯಲು ಇಷ್ಟವಿಲ್ಲದವರಿಗೆ ಇಂತಹ ...ಂಡುವಾದಗಳು ಹುಟ್ಟಿಕೊಳ್ಳುತ್ತವೆಯಷ್ಟೆ.

ಇನ್ನು ಹೈದರ್ ಮತ್ತು ಟಿಪ್ಪು ನಡೆಸಿದ ಬ್ರಿಟಿಷ್ ...ೋಧಿ ಯುದ್ಧಗಳು ಇಡೀ ಬ್ರಿಟಿಷ್ ಚಕ್ರಾಧಿಪತ್ಯವನ್ನೇ ...ುಗಾಡಿಸಿಬಿಟ್ಟಿದ್ದವು ಎಂಬ ಸತ್ಯವನ್ನು ಹೇಗೆ ಮರೆಯಲು ...ಲ್ಲ? 'ನಮ್ಮವರೇ' ಆದ ಮರಾಠರು, ನಿಜಾಮರು ...ರಗಿನ ಬ್ರಿಟಿಷ್ ವಸಾಹತುಶಾಹಿಗಳೊಂದಿಗೆ ...ಜೋಡಿಸಿದರೆ ಹೈದರ್ ಮತ್ತು ಟಿಪ್ಪು ಕೊನೆಯ ...ಿರುವತನಕವೂ ಬ್ರಿಟಿಷರಿಗೆ ಶರಣಾಗದೇ ...ರೋದ್ಧಾತವಾಗಿ ಹೋರಾಡಿ ರಣರಂಗದಲ್ಲೇ ...ಮರಣವನ್ನಪ್ಪಿದವರು. ಸೈನ್ಯಾಧಿಕಾರಿಗಳ ನೇತೃತ್ವದಲ್ಲಿ ...ೈನಿಕರನ್ನು ಯುದ್ಧಭೂಮಿಗೆ ಕಳುಹಿಸಿ ಅಂತಃಪುರದಲ್ಲಿ ...ಮಾಗಿರುವ ರಾಜರು ಭಾರತದ ಚರಿತ್ರೆಯಲ್ಲಿ ...ಕ್ಕೊಬ್ಬರಂತೆ ಸಿಗುತ್ತಾರೆ. ಆದರೆ ಒಬ್ಬ ಸಾಮಾನ್ಯ ...ನಂತೆ ರಣರಂಗದಲ್ಲಿ ಕಾದಾಡಿ ಸಾಯುವ ಟಿಪ್ಪುನಂತಹ ...ರು ಚರಿತ್ರೆಯಲ್ಲಿ ಕಾಣಸಿಗುವುದು ಬಹಳ ಅಪರೂಪ.

ಹೈದರ್ ಮತ್ತು ಟಿಪ್ಪು ಆಳಿದ್ದು 1761 ರಿಂದ ...99ರ ತನಕ. ಈ ಮೂವತ್ತೆಂಟು ವರ್ಷಗಳಲ್ಲಿ ಅವರು ...ದ್ಧ ಮಾಡದ ಒಂದೇ ಒಂದು ವರ್ಷವೂ ಇಲ್ಲ ...ಬುದು ನಂಬಲು ಕಷ್ಟವಾದರೂ ನಂಬಲೇಬೇಕಾದ ... ಅವರು ಸಿಂಹಾಸನದ ಮೇಲೆ ಕುಳಿತು ಕಳೆದ ...ಯಕ್ಕಿಂತಲೂ ರಣರಂಗದಲ್ಲಿ ಕುದುರೆಯ ಮೇಲೆ ...ತು ಕಳೆದ ಸಮಯವೇ ಹೆಚ್ಚು ಎಂದು ಚರಿತ್ರೆಕಾರರು ...ಟ್ಟುಮಾಡಿ ತೋರಿಸುತ್ತಾರೆ!

ಆದರಲ್ಲೂ ಬ್ರಿಟಿಷರ ವಿರುದ್ಧ ಅವರು ನಡೆಸಿದ ...ಷ್ಟು ವಸಾಹತುಶಾಹಿ ವಿರೋಧಿ ಯುದ್ಧಗಳು ಅತ್ಯಂತ ...ುಖವಾಗಿವೆ. ಈ ಯುದ್ಧಗಳಲ್ಲೇ ಅವರು ಬರೋಬ್ಬರಿ ...ತ್ತು ವರ್ಷಗಳನ್ನು ಕಳೆದರು! ಯುದ್ಧಗಳ ನಡುವಿನ ...ಧಿಯಲ್ಲಿ ಮುಂದಿನ ಯುದ್ಧಕ್ಕಾಗಿನ ಸಿದ್ಧತೆಗಳು! ...ಾಗಿ, ತಮ್ಮ ಮೂವತ್ತೆಂಟು ವರ್ಷಗಳ ಆಡಳಿತದುದ್ದಕ್ಕೂ ...ರ ಪ್ರಧಾನ ಧ್ಯೇಯ ಅಂತ ಇದ್ದದ್ದು ಬ್ರಿಟಿಷರನ್ನು ಈ ...ದಿಂದ ಒದ್ದೋಡಿಸಿ ಭರತಖಂಡವನ್ನು ...ತಗೊಳಿಸುವುದೇ ಆಗಿತ್ತು. ಶಸ್ತ್ರಾಸ್ತ್ರಗಳ ತಯಾರಿಕೆಯಿರಲಿ ...ಥವಾ ಅವುಗಳ ಬಳಕೆಯಿರಲಿ, ಸೈನಿಕರ ...ುಕಾತಿಯಿರಲಿ ಅಥವಾ ಅವರ ನಿಯೋಜನೆಯಿರಲಿ, ...ಗೆ ಸಂಗ್ರಹವಿರಲಿ ಅಥವಾ ಅದರ ಉಪಯೋಗವಿರಲಿ ...ವು ಏನೇ ಮಾಡಿದರೂ ಅದು ಬ್ರಿಟಿಷರನ್ನು ಸೋಲಿಸಿ ...ಸರದಾಚೆಗೆ ಎಸೆಯುವ ಪ್ರಧಾನ ಉದ್ದೇಶಕ್ಕೆ ...ವಾಗುವಂತೆ ಮಾಡುತ್ತಿದ್ದರು. ಬ್ರಿಟಿಷರನ್ನು ಶತಗತಾಯ ...ನೆಲದಿಂದ ಹೊರ ದಬ್ಬುವುದಕ್ಕಾಗಿಯೇ ಟಿಪ್ಪು ಸುಲ್ತಾನ್ ...ಬ್ಬದ್ಧ 1,43,000 ಸೈನಿಕರನ್ನು ಸಜ್ಜುಗೊಳಿಸಿದ್ದ! ಅಂದಿನ ...ಾಟಕದ ಜನಸಂಖ್ಯೆಯೇ ಹೆಚ್ಚೆಂದರೆ 35 ಲಕ್ಷವಿತ್ತು. ...ಷ್ಟದ ಪ್ರತೀ 40 ಪ್ರಜೆಗಳಿಗೊಬ್ಬರಂತೆ ರೆಗ್ಯೂಲರ್ ಮೈಸೂರು ಸೈನ್ಯದಲ್ಲಿ ಒಬ್ಬ ಸೈನಿಕನಿದ್ದ! 1979ರಲ್ಲಿ ಟಿಪ್ಪು ಸತ್ತಾಗ ಬ್ರಿಟಿಷರಿಗೆ ಇಂದಿನ ಮದ್ದೂರಿನಲ್ಲಿ ಸಿಕ್ಕ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ನೋಡಿ ಬ್ರಿಟಿಷರು ದಂಗಾಗಿ ಹೋಗಿದ್ದರು. ಆ ಕಾರಣಕ್ಕೇನೇ ಅದಕ್ಕೆ ಮದ್ದೂರು (ಮದ್ದುಗುಂಡುಗಳ ಊರು) ಅಂತ ಹೆಸರು ಬಂದಿದ್ದು!

ಇಡೀ ವಿಶ್ವದ ಚರಿತ್ರೆಯಲ್ಲೇ ಮೊಟ್ಟ ಮೊದಲ ಬಾರಿಗೆ ಕ್ಷಿಪಣಿಗಳನ್ನು ತಯಾರಿಸಿ ಬಳಸಿದವರು ಹೈದರ್ ಮತ್ತು ಟಿಪ್ಪು ಸುಲ್ತಾನ್. ವಿಶ್ವದ ಮೊಟ್ಟ ಮೊದಲ ಕ್ಷಿಪಣಿಗಳನ್ನು 1780ರಲ್ಲೇ ಬ್ರಿಟಿಷರ ವಿರುದ್ಧ ಹೈದರ್ ಬಳಸಿದ್ದ ಎಂಬುದನ್ನು ಹಾಗೂ ಅದನ್ನು ಅನುಕರಿಸಿ 1805ರಲ್ಲಿ ವಿಲಿಯಂ ಕಾಂಗ್ರೀವ್ ಎಂಬ ಬ್ರಿಟಿಷ್ ವಿಜ್ಞಾನಿ ಕ್ಷಿಪಣಿಗಳನ್ನು ರೂಪಿಸಿದ ಹಾಗೂ 1806ರ ಬೌಲೋಗ್ನ್ ಯುದ್ಧದಲ್ಲಿ ಅದನ್ನು ಬಳಸಲಾಯಿತು ಎಂದು ಕೆನೆತ್ ಮ್ಯಾಕ್ಸೆ ಅವರು ಗಿನ್ನಿಸ್ ಹಿಸ್ಟರಿ ಆಫ್ ಲ್ಯಾಂಡ್ ವಾರ್ಫೇರ್ ಪುಸ್ತಕದಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದಾನೆ. ಸುಮಾರು 1.4 ಕಿ.ಮೀ. ವರೆಗೆ ಚಿಮ್ಮಬಲ್ಲ ಈ ಕ್ಷಿಪಣಿ ತಂತ್ರಜ್ಞಾನದ ಬಗ್ಗೆ ಬ್ರಿಟಿಷರಿಗಿರಲಿ, ಇಡೀ ವಿಶ್ವಕ್ಕೇ ಗೊತ್ತಿರಲಿಲ್ಲ. ಹೈದರ್ ಅವುಗಳನ್ನು ಬಳಸಿದ ಬರೋಬ್ಬರಿ ಮೂವತ್ತೇಳು ವರ್ಷಗಳ ನಂತರವಷ್ಟೇ ಆ ತಂತ್ರಜ್ಞಾನವನ್ನು ಅರಿಯಲು ಬ್ರಿಟಿಷರಿಗೆ ಸಾಧ್ಯವಾಗಿದ್ದು. ಟಿಪ್ಪು ಮರಣದ ನಂತರವಷ್ಟೇ ಬ್ರಿಟಿಷರು ಶ್ರೀರಂಗಪಟ್ಟಣದಿಂದ ಆ ತಂತ್ರಜ್ಞಾನವನ್ನು ಕದ್ದು ನಕಲು ಮಾಡಿ ಹೊಸ ಕ್ಷಿಪಣಿಗಳನ್ನು ರೂಪಿಸಿದ್ದು.

ಟಿಪ್ಪು ಮತ್ತು ಹೈದರ್ ಸೃಷ್ಟಿಸಿದ್ದ ಮಾಹಿತಿದಾರರ ಜಾಲವಂತೂ ಅದ್ಭುತವಾಗಿತ್ತು. ಮೈಸೂರು ರಾಜ್ಯದಾದ್ಯಂತ ಎಲ್ಲಿ ಏನೇ ನಡೆದರೂ ಅವರಿಗೆ ಕೂಡಲೇ ತಿಳಿಯುವಂತೆ ಸುಮಾರು ಒಂದು ಲಕ್ಷ ಮಾಹಿತಿದಾರರನ್ನು ಇಡೀ ರಾಜ್ಯದಾದ್ಯಂತ ಮತ್ತು ಹೊರಗಡೆ ಹರಡಿದ್ದರು. ಈ ವಿಸ್ತತ ಮಾಹಿತಿದಾರರ ಜಾಲದ ಕಾರಣದಿಂದಲೇ ಅವರು ತಿಂಗಳಾನುಗಟ್ಟಲೇ ರಾಜಧಾನಿಯಿಂದ ದೂರದ ರಾಜ್ಯ ಗಡಿಗಳಲ್ಲಿ ಯುದ್ಧದಲ್ಲಿ ನಿರತರಾಗಿದ್ದರೂ ಆಡಳಿತ ಹಾದಿತಪ್ಪದಂತೆ ನೋಡಿಕೊಂಡಿದ್ದರು.

ಯುದ್ಧ ಮಾಡುತ್ತಿರುವಾಗಲೇ ಹೈದರ್ ಅಸ್ವಸ್ಥನಾದ. ತಾನು ಸಾಯುವ ಕೆಲವೇ ಗಂಟೆಗಳ ಮೊದಲು ಆತ ತನ್ನ ಮಗ ಟಿಪ್ಪು ಸುಲ್ತಾನನಿಗೆ ಒಂದು ಪತ್ರವನ್ನು ಬರೆಸಿಟ್ಟು ಸತ್ತ. ವಾಸ್ತವದಲ್ಲಿ ಅದು ಹೈದರ್‌ನ ರಾಜಕೀಯ ದೃಷ್ಟಿಕೋನಕ್ಕೆ ಹಿಡಿದ ಕನ್ನಡಿಯಾಗಿದೆ. ಹಿಂದೂಸ್ತಾನವನ್ನು ಬ್ರಿಟಿಷರಿಂದ ರಕ್ಷಿಸುವ ಶಕ್ತಿಯೀಗ ಹಿಂದೂಗಳಲ್ಲಿಲ್ಲವಾದ್ದರಿಂದ ಆ ಕೆಲಸವನ್ನು ನೀನೇ ಮಾಡಬೇಕು ಎಂದು ಟಿಪ್ಪುಗೆ ಆ ಪತ್ರದಲ್ಲಿ ಹೈದರ್ ಸ್ಪಷ್ಟವಾಗಿ ಹೇಳುತ್ತಾನೆ. ಟಿಪ್ಪು ಆ ಕೆಲಸವನ್ನು ತನ್ನ ಕೊನೆಯ ಉಸಿರಿರುವ ತನಕವೂ ಮಾಡುತ್ತಲೇ ರಣರಂಗದಲ್ಲಿ ಸಾಯುತ್ತಾನೆ. ಕೇವಲ ಮೈಸೂರು ರಾಜ್ಯವನ್ನು ಮಾತ್ರವಲ್ಲ, ಇಡೀ ಹಿಂದೂಸ್ತಾನವನ್ನು ಬ್ರಿಟಿಷರಿಂದ ರಕ್ಷಿಸಬೇಕು, ಅದಕ್ಕಾಗಿ ಹಿಂದೂಸ್ತಾನದ ಎಲ್ಲಾ ರಾಜರನ್ನು ಬ್ರಿಟಿಷರ ವಿರುದ್ಧ ಒಗ್ಗೂಡಿಸಬೇಕು ಎಂಬ ಹೈದರ್‌ನ ಉಪದೇಶವನ್ನು ಪಾಲಿಸುವುದಕ್ಕೆ ಟಿಪ್ಪು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾನೆ. ಆದರೆ, ಕೊನೆಗೂ ಅದರಲ್ಲಿ ಆತ ಸಫಲನಾಗುವುದಿಲ್ಲ.

1792ರಲ್ಲಿ ನಡೆದ ಮೂರನೇ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಯುದ್ಧದಲ್ಲಿ ಟಿಪ್ಪು ಸೋಲುತ್ತಾನೆ. ಇದರಿಂದ ಮೈಸೂರು ರಾಜ್ಯದ ಅರ್ಧದಷ್ಟು ಭಾಗವನ್ನು ಕಳೆದುಕೊಳ್ಳಬೇಕಾಯಿತಲ್ಲದೇ ಯುದ್ಧ ನಷ್ಟವಾಗಿ ಕೇವಲ ಬ್ರಿಟಿಷರಿಗೆ ಮಾತ್ರವಲ್ಲದೇ ಅವರೊಂದಿಗೆ ಕೈಜೋಡಿಸಿದ ಮರಾಠರಿಗೂ ಅಪಾರ ಪ್ರಮಾಣದ ಹಣ ನೀಡಬೇಕಾಗಿ ಬರುತ್ತದೆ. ನಷ್ಟ ಪರಿಹಾರವಾಗಿ 3,30,00,000 ರೂಪಾಯಿ ಹಣವನ್ನು ನೀಡುವುದಕ್ಕೆ ಟಿಪ್ಪು ಬಳಿ ಅಷ್ಟೊಂದು ಹಣ ಇರುವುದಿಲ್ಲ. ಅದನ್ನು ಪೂರ್ತಿಯಾಗಿ ನೀಡುವತನಕ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಬ್ರಿಟಿಷರಿಗೆ ಒಪ್ಪಿಸುತ್ತಾನೆ ಟಿಪ್ಪು ಸುಲ್ತಾನ್! ರಾಜ್ಯದ ರಕ್ಷಣೆಗಾಗಿ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ತನ್ನ ಸ್ವಂತ ಮಕ್ಕಳನ್ನೇ ಒತ್ತೆಯಾಳುಗಳಾಗಿ ಇಟ್ಟ ರಾಜ ಕೇವಲ ಭಾರತದಲ್ಲಲ್ಲ, ಇಡೀ ವಿಶ್ವದಲ್ಲೇ ಎಲ್ಲೂ ಕಾಣಸಿಗುವುದಿಲ್ಲ. ಈ ಯುದ್ಧದಲ್ಲಿ ಕೇವಲ ಹಣ ಮಾತ್ರವಲ್ಲದೇ ಅರ್ಧದಷ್ಟು ರಾಜ್ಯ, 70 ಕೋಟೆಗಳು, 800 ಫಿರಂಗಿಗಳನ್ನು ಟಿಪ್ಪು ಕಳೆದುಕೊಳ್ಳುತ್ತಾನೆ. ಜೊತೆಗೆ ತನ್ನ 50,000 ಧೀರ ಸೈನಿಕರೂ ಕೊಲ್ಲಲ್ಪಡುತ್ತಾರೆ. ಯುದ್ಧ ಮುಗಿದ ತಕ್ಷಣವೇ ಶ್ರೀರಂಗಪಟ್ಟಣದಿಂದ ಹೊರಟ ಟಿಪ್ಪು ಮರಾಠರನ್ನು ಭೇಟಿಯಾಗಿ "ನಾನು ಎಂದೂ ನಿಮ್ಮ ಶತ್ರುವಲ್ಲ. ಬ್ರಿಟಿಷರು ನಮ್ಮಿಬ್ಬರ ಸಮಾನ ಶತ್ರುಗಳು. ಅವರ ಬಗ್ಗೆ ಎಚ್ಚರವಿರಲಿ" ಎಂದು ಎಚ್ಚರಿಸಿ ಬರುತ್ತಾನೆ. ಆದರೆ ಮರಾಠರು ಟಿಪ್ಪು ಮಾತುಗಳನ್ನು ಕೇಳುವುದಿಲ್ಲ. ಟಿಪ್ಪು ಈ ಮಾತುಗಳನ್ನು ಹೇಳಿದ ಸರಿಯಾಗಿ 22 ವರ್ಷಕ್ಕೆ ಬ್ರಿಟಿಷರು ಕಿರ್ಕಿ ಕದನದಲ್ಲಿ ಮಹಾನ್ ಮರಾಠರನ್ನು ಬಗ್ಗುಬಡಿದು ತಮ್ಮ ಚಕ್ರಾಧಿಪತ್ಯವನ್ನು ಹೇರುತ್ತಾರೆ! ಟಿಪ್ಪು ಮಾತನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಟಿಪ್ಪು ಜೊತೆ ಅವರು ಕೈಜೋಡಿಸಿದ್ದರೆ ಅಥವಾ ಬೇಡ ಅನ್ನಿಸಿದರೆ ಕನಿಷ್ಠ ಟಿಪ್ಪು ವಿರುದ್ಧ ಬ್ರಿಟಿಷರೊಂದಿಗೆ ಅವರು ಕೈಜೋಡಿಸದಿದ್ದರೆ ಮರಾಠರಿಗೆ ಈ ಗತಿ ಬರುತ್ತಿರಲಿಲ್ಲ. ಈ ವಿಷಯವನ್ನು ಫ್ರಾಕ್ಸಿ ಫರ್ನಾಂಡಿಸ್ ಎಂಬ ಚರಿತ್ರೆಕಾರ ಸ್ಪಷ್ಟವಾಗಿ ಬರೆದಿಟ್ಟಿದ್ದಾರೆ.

ಮೂರನೇ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಯುದ್ಧದಿಂದ ಟಿಪ್ಪು ತುಂಬಾ ಬಸವಳಿದಿದ್ದ. ಆತ ಸಂಪೂರ್ಣವಾಗಿ ಚೇತರಿಸಿಕೊಂಡು ಮತ್ತೊಮ್ಮೆ ಬ್ರಿಟಿಷರಿಗೆ ಸೆಡ್ಡು ಹೊಡೆದರೆ ತಮಗೆ ಉಳಿಗಾಲವಿಲ್ಲ ಎಂಬುದು ಬ್ರಿಟಿಷರಿಗೆ ಮನವರಿಕೆಯಾಗಿತ್ತು. ನೇರ ಮತ್ತು ನ್ಯಾಯಯುತ ಯುದ್ಧದಲ್ಲಿ ವೀರೋಚಿತವಾಗಿ ಕಾದಾಡುವ ಶಿಸ್ತುಬದ್ಧ ಮೈಸೂರು ಸೈನ್ಯವನ್ನು ಸೋಲಿಸುವುದು ಅಷ್ಟು ಸುಲಭವಲ್ಲ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಆದ್ದರಿಂದಲೇ ಅವರು ಟಿಪ್ಪು ಸೈನ್ಯ ಮತ್ತು ಆಸ್ಥಾನದಲ್ಲಿದ್ದ ಕೆಲವರನ್ನು ರಹಸ್ಯವಾಗಿ ಖರೀದಿಸಿ ಟಿಪ್ಪು ವಿರುದ್ಧ ಮೋಸದ ಯುದ್ಧಕ್ಕೆ ಸಿದ್ಧವಾದರು. 1799ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕೋರ್ಟ್ ಡೈರೆಕ್ಟರ್ ಸೆಲೆಕ್ಟ್ ಕಮಿಟಿಗೆ ಜನರಲ್ ವೆಲ್ಲೆಸ್ಲಿ ಬರೆದ ಪತ್ರದಲ್ಲಿ ಟಿಪ್ಪು ಆಡಳಿತದ ಕೆಲವು ಪ್ರಮುಖರು ತಮ್ಮೊಂದಿಗೆ ಕೈಜೋಡಿಸಿರುವ ಬಗ್ಗೆ, ಯುದ್ಧದ ನಿರ್ಣಾಯಕ ಸಂದರ್ಭದಲ್ಲಿ ಅವರೆಲ್ಲರೂ ಟಿಪ್ಪು ವಿರುದ್ಧ ತಮಗೆ ಸಹಾಯ ಮಾಡುವ ಬಗ್ಗೆ ವೆಲ್ಲೆಸ್ಲಿ ಖಾತರಿಯಾಗಿ ಹೇಳಿದ್ದ. ಮೈಸೂರು ಸೈನ್ಯದ ಸೇನಾಧಿಪತಿ ಮೀರ್ ಸಾದಕ್ ಮತ್ತು ಟಿಪ್ಪು ಆಡಳಿತದ ಪ್ರಮುಖ ಮಂತ್ರಿ ಪೂರ್ಣಯ್ಯ ಅವರನ್ನು ಖರೀದಿಸಿದ ಮೇಲೆ ಬ್ರಿಟಿಷರ ಮೋಸ-ವಂಚನೆಗಳ ಯೋಜನೆಗೆ ಅಂತಿಮ ರೂಪ ಬಂತು. 1799ರಲ್ಲಿ ಬ್ರಿಟಿಷರು ಬೃಹತ್ ಸೈನ್ಯದೊಂದಿಗೆ ಎರಡು ದಿಕ್ಕಿನಿಂದ ಮೈಸೂರು ರಾಜ್ಯಕ್ಕೆ ಮುತ್ತಿಗೆ ಹಾಕಿದರು. ಜನರಲ್ ವೆಲ್ಲೆಸ್ಲಿ ನೇತೃತ್ವದ ಬ್ರಿಟಿಷ್ ಸೈನ್ಯ ಬಾಂಬೆ ಕಡೆಯಿಂದ ಹೊರಟರೆ ಹೈದರಾಬಾದಿನ ನಿಜಾಮರ ಸೈನ್ಯವನ್ನೂ ಒಳಗೊಂಡ ಪ್ರಧಾನ ಬ್ರಿಟಿಷ್ ಸೇನೆ ಜನರಲ್ ಹ್ಯಾರಿಸ್ ನೇತೃತ್ವದಲ್ಲಿ ಮದ್ರಾಸ್‌ನಿಂದ ಹೊರಟಿತು. ಬ್ರಿಟಿಷ್ ಸೇನಾತುಕಡಿಗಳು ತಮ್ಮ ನೆಲೆಗಳನ್ನು ಬಿಟ್ಟ ಕೇವಲ ಎರಡೇ ತಿಂಗಳಲ್ಲಿ ಶ್ರೀರಂಗಪಟ್ಟಣದ ಹೊಸ್ತಿಲಿಗೆ ಬಂದುನಿಂತವು. ಹಾದಿಯುದ್ದಕ್ಕೂ ಒಂದಾದಮೇಲೆ ಒಂದರಂತೆ ಮೈಸೂರು ರಾಜ್ಯದ ಕೋಟೆಗಳು ಸೋತು ಬ್ರಿಟಿಷರ ವಶವಾಗಿದ್ದವು. ಉನ್ನತಮಟ್ಟದಲ್ಲೇ ಹಲವರು ತಮ್ಮೊಂದಿಗೆ ಕೈಜೋಡಿಸಿ ಟಿಪ್ಪು ವಿರುದ್ಧ ನಿಂತರೂ ವೀರೋಚಿತವಾಗಿ ಕಾದಾಡುತ್ತಿದ್ದ ಮೈಸೂರು ಸೇನೆಯನ್ನು ಕಂಡು ವೆಲ್ಲೆಸ್ಲಿ, ಹ್ಯಾರಿಸ್ ಹೌಹಾರಿದರು. ತಮ್ಮವರೇ ತಮಗೆ ಮೋಸ ಮಾಡಿದ್ದು ಟಿಪ್ಪುಗೆ ಅರಿವಾಯಿತು. ಸೋಲು ಖಚಿತವೆನ್ನಿಸ್ತು. ಬ್ರಿಟಿಷರೊಂದಿಗೆ ರಾಜಿಮಾಡಿಕೊಂಡು, ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡರೆ ಮೈಸೂರು ರಾಜ್ಯದ ಸಿಂಹಾಸನದಲ್ಲಿ ಮುಂದುವರಿಯುವ ಅವಕಾಶ ಆಗಲೂ ಟಿಪ್ಪುಗೆ ಇತ್ತು. ಆದರೆ, ಟಿಪ್ಪು ಅಂತಹ ಯೋಚನೆಯನ್ನೇ ಮಾಡಲಿಲ್ಲ. ಬ್ರಿಟಿಷರನ್ನು ಭಾರತದ ಪ್ರಧಾನ ಶತ್ರುಗಳೆಂದು ಬಗೆದು ಬದುಕಿನುದ್ದಕ್ಕೂ ಅವರ ವಿರುದ್ಧ ಹೋರಾಡಿದ ಟಿಪ್ಪು ಸುಲ್ತಾನ್‌ಗೆ ಕೊನೆಗಳಿಗೆಯಲ್ಲಿ ಸಿಂಹಾಸನಕ್ಕಾಗಿ, ವೈಯಕ್ತಿಕ ಜೀವಕ್ಕಾಗಿ ಶರಣಾಗಬೇಕೆಂದು ಅನ್ನಿಸಲೇ ಇಲ್ಲ. ಸಾಮಾನ್ಯ ಸೈನಿಕನಂತೆ ವೀರೋಚಿತವಾಗಿ ಕಾದಾಡಿದ ಈ ಮೈಸೂರು ಹುಲಿ 1799ರ ಮೇ 4ರಂದು ರಣರಂಗದಲ್ಲೇ ಹುತಾತ್ಮನಾದ. ಆ ಒಂದೇ ದಿನ ಹನ್ನೊಂದು ಸಾವಿರ ಮೈಸೂರು ಸೈನಿಕರ ಮಾರಣಹೋಮ ನಡೆದು ಕಾವೇರಿ ಕೆಂಪಾಗಿ ಹರಿಯುತ್ತದೆ.

■ ಕೆ.ಬಿ. ಕಟ್ಟಿ



ಪ್ರಗತಿಪರ ಶಿಕ್ಷಣ ತಜ್ಞ ಟಿಪ್ಪು ಸುಲ್ತಾನ್

ಶತಮಾನಗಳಿಂದ ಸಾಗಿ ಬಂದಿದ್ದ ಅಕ್ಷರದ ಮೇಲೆ ಬ್ರಾಹ್ಮಣಶಾಹಿಯ ಹತೋಟಿ ತಪ್ಪಿ ಸಾರ್ವಜನಿಕಗೊಳಿಸುವ ಪ್ರಕ್ರಿಯೆಯು ಸಣ್ಣದಾಗಿ ಟಿಪ್ಪುವಿನ ಕಾಲದಲ್ಲಿ ಪ್ರಾರಂಭಗೊಂಡಿತ್ತು ಎಂದು ಐತಿಹಾಸಿಕ ಮಾಹಿತಿ ತಿಳಿಸುತ್ತದೆ. ಶಿಕ್ಷಣ ವ್ಯವಸ್ಥೆಯನ್ನು ದೇವಸ್ಥಾನ, ಮಸೀದಿ ಚರ್ಚುಗಳ ಹಿಡಿತದಿಂದ ಬಿಡಿಸಿ ಜಾತ್ಯತೀತಗೊಳಿಸುವ ನಿಟ್ಟಿನಲ್ಲಿ ಟಿಪ್ಪು ತೆಗೆದುಕೊಂಡ ಮಹತ್ವದ ಚಾರಿತ್ರಿಕ ನಿರ್ಧಾರವಿದು.



ಬ್ರಿಟಿಷ್ ಶಿಕ್ಷಣ ತಜ್ಞ ಮೆಕಾಲೆಯಂತೆ ಟಿಪ್ಪು ಸುಲ್ತಾನ್ ...ಯು ಜನಸಾಮಾನ್ಯರಿಗೆ ಶಿಕ್ಷಣ ವ್ಯವಸ್ಥೆಯನ್ನು ...ಸಿದಾಗ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ...ಗಳಿಗೆ ಪೂರಕವಾದ 'ಗುಲಾಮಗಿರಿ'ಗೆ ಮನಸ್ಸನ್ನು ...ು ಮಾಡುವ ಶಿಕ್ಷಣ ವ್ಯವಸ್ಥೆ ರೂಪಿಸಿರಲಿಲ್ಲ. ಎಲ್ಲಾ ... / ಜಾತಿಗಳ ಜನರು ಸ್ವಾಭಿಮಾನದಿಂದ ಬದುಕಲು ...ಾಗುವ ಪ್ರಗತಿಪರ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದ್ದ ...ು ಇತಿಹಾಸ ತಿಳಿಸುತ್ತದೆ. ಅದಕ್ಕಿಂತ ಮೊದಲು ...ಶದ ದೇಶೀಯ ಶಿಕ್ಷಣ ವ್ಯವಸ್ಥೆ ಬ್ರಾಹ್ಮಣಶಾಹಿಯ ...ಲ್ಲಿತ್ತು. ಮಠಗಳ ಆಶ್ರಯದಲ್ಲಿ ಶಾಲೆಗಳು ...ಯುತ್ತಿದ್ದವು.

ಒಂದು ಕೇಂದ್ರೀಕೃತ ಪ್ರಭುತ್ವದ ಯಶಸ್ವೀ ನಿರ್ವಹಣೆಗೆ ಅಕ್ಷರಸ್ಥ ಅಧಿಕಾರಿ ವರ್ಗದ ಅಗತ್ಯವನ್ನು ಟಿಪ್ಪು ಮನಗಂಡಿದ್ದ. ಈ ಕಾರಣದಿಂದ ಟಿಪ್ಪುವಿನ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಗಳಿಗೆ ಹಾಗೂ ಅವರ ಮಕ್ಕಳು ಓದುಬರಹ ಕಲಿಯುವುದು ಕಡ್ಡಾಯವಾಗಿತ್ತು. ಹೀಗೆ ಶತಮಾನಗಳಿಂದ ಸಾಗಿ ಬಂದಿದ್ದ ಅಕ್ಷರದ ಮೇಲೆ ಬ್ರಾಹ್ಮಣಶಾಹಿಯ ಹತೋಟಿ ತಪ್ಪಿ ಸಾರ್ವಜನಿಕಗೊಳಿಸುವ ಪ್ರಕ್ರಿಯೆಯು ಸಣ್ಣದಾಗಿ ಟಿಪ್ಪುವಿನ ಕಾಲದಲ್ಲಿ ಪ್ರಾರಂಭಗೊಂಡಿತ್ತು ಎಂದು ಐತಿಹಾಸಿಕ ಮಾಹಿತಿ ತಿಳಿಸುತ್ತದೆ. ಶಿಕ್ಷಣ ವ್ಯವಸ್ಥೆಯನ್ನು ದೇವಸ್ಥಾನ, ಮಸೀದಿ ಚರ್ಚುಗಳ ಹಿಡಿತದಿಂದ ಬಿಡಿಸಿ ಜಾತ್ಯತೀತಗೊಳಿಸುವ ನಿಟ್ಟಿನಲ್ಲಿ ಟಿಪ್ಪು ತೆಗೆದುಕೊಂಡ ಮಹತ್ವದ ಚಾರಿತ್ರಿಕ ನಿರ್ಧಾರವಿದು.

ಒಂದು ವಿಶೇಷ ಸಂದರ್ಭದಲ್ಲಿ ತಂದೆ ಹೈದರಾಲಿ ಮಗ ಟಿಪ್ಪುವಿನ ಹತ್ತಿರ 'ನಿನಗೊಂದು ಅಮೂಲ್ಯ ಉಡುಗೊರೆ ಕೊಡಬೇಕೆಂದಿದ್ದೆ, ಏನನ್ನು ಕೊಡಲಿ?' ಎಂದು ಕೇಳಿದಾಗ, ಟಿಪ್ಪು ಒಂದು ಸುವ್ಯವಸ್ಥಿತ 'ಗ್ರಂಥಾಲಯ' ಬೇಕೆಂದು ಹೇಳಿದನಂತೆ. ಜೊತೆಗೆ ಆ ಗ್ರಂಥಾಲಯದಲ್ಲಿ ವಿಶೇಷವಾಗಿ ಫ್ರೆಂಚ್ ಭಾಷೆಯ ಅನುವಾದಿತ ಪುಸ್ತಕಗಳು ಬೇಕೆಂದು ಹೇಳಿದನಂತೆ. ಹಾಗೆ ತಂದೆಯಿಂದ [illegible]ಾರವನ್ನು ಉಡುಗೊರೆಯಾಗಿ ಪಡೆದ ಟಿಪ್ಪು [illegible] ಸ್ವಾತಂತ್ರ್ಯ, ಸಹಭ್ರಾತೃತ್ವದಂತಹ ಮಾನವೀಯ ತತ್ವಗಳನ್ನು ಪ್ರಚುರಪಡಿಸುವ ರೂಸೋ, ವಾಲ್ಟೇರ್, ಮೋಂಟಿಗ್‌ರಂತಹ ಶ್ರೇಷ್ಠ ಫ್ರೆಂಚ್ ಮಾನವತಾವಾದಿಗಳ ಪುಸ್ತಕಗಳನ್ನು ಅಧ್ಯಯನ ಮಾಡಿದ್ದ ಎಂದು ತಿಳಿದುಬರುತ್ತದೆ. ಈ 'ಓದು' ಟಿಪ್ಪುವನ್ನು 'ಪ್ರಗತಿಪರ'ನನ್ನಾಗಿ ಮಾಡಿತು. 1789ರಲ್ಲಿ ಫ್ರೆಂಚ್ ಕ್ರಾಂತಿ ಆದಾಗ ಟಿಪ್ಪು ಆ ಕ್ರಾಂತಿಕಾರಿಗಳ ಪರ ನಿಂತಿದ್ದ. ಅದೇ ಸಂದರ್ಭದಲ್ಲಿ ಫ್ರಾನ್ಸಿನ ಕ್ರಾಂತಿಕಾರಿ ಸಂಘಟನೆ 'ಜಾಕೋಬಿಯನ್ ಕ್ಲಬ್'ಗೆ ಟಿಪ್ಪು ತನ್ನ ರಾಜ್ಯದಲ್ಲಿ ಆಶ್ರಯವಿತ್ತ. 'ಸಿಟಿಜನ್ ಟಿಪ್ಪು' ಎನ್ನುವ ನೆಲೆಯಲ್ಲಿ ಟಿಪ್ಪು ಆ ಕ್ಲಬ್‌ನ ಸದಸ್ಯನಾದ. ಅಲ್ಲದೆ ಟಿಪ್ಪುವಿನ ಪ್ರಾಂಗಣದಲ್ಲಿ ವಿಮೋಚನಾ ವೃಕ್ಷವೊಂದನ್ನು ನೆಡಲಾಯಿತು. ಫ್ರೆಂಚ್ ಕ್ರಾಂತಿ ಸಂಭವಿಸಿದಾಗ ಅದರ ಯಶಸ್ಸಿಗೆ ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸಂಭ್ರಮಾಚರಣೆ ನಡೆಸಿದ.

ಹೀಗೆ ಟಿಪ್ಪು ಕೇವಲ ನಾಡಿನೊಳಗೆ ಮಾತ್ರವಲ್ಲ, ವಿಶ್ವದೆಲ್ಲೆಡೆಯಿದ್ದ ಪ್ರಗತಿಪರ ಶಕ್ತಿಗಳೊಡನೆ ಗುರುತಿಸಿಕೊಂಡಿದ್ದ.

ಚರಿತ್ರೆ, ರಾಜ್ಯಶಾಸ್ತ್ರ ಸಮಾಜಶಾಸ್ತ್ರಗಳಂತಹ ಮಾನವಿಕ ಶಾಸ್ತ್ರಗಳ ಪುಸ್ತಕಗಳನ್ನು ಸರಿಯಾಗಿ ಅಧ್ಯಯನ ನಡೆಸಿದರೆ ವ್ಯಕ್ತಿಯೊಬ್ಬ, ಅದರಲ್ಲೂ ಮುಖ್ಯವಾಗಿ ಆಡಳಿತಗಾರನೊಬ್ಬ-ಹೇಗೆ ಪ್ರಗತಿಪರನಾಗುತ್ತಾನೆ ಎನ್ನುವುದಕ್ಕೆ ಇದು ಉತ್ತಮ ನಿದರ್ಶನ. ವೇದ, ಶಾಸ್ತ್ರ ಪುರಾಣ, ಕುರಾನ್, ಬೈಬಲ್‌ಗಳಂತಹ 'ಧರ್ಮಗ್ರಂಥ'ಗಳನ್ನು ಮಾತ್ರ ಓದಿಕೊಂಡ ಕೋಮುವಾದಿ / ಮೂಲಭೂತವಾದಿಗಳಿಂದ ಇಂತಹ ಪ್ರಗತಿಪರ ನಿಲುವನ್ನು ನಿರೀಕ್ಷಿಸಲಾದೀತೆ?

ಶ್ರಮಜೀವಿಗಳ ಬಗ್ಗೆ ಟಿಪ್ಪುವಿನ ಧೋರಣೆಯನ್ನು ತಿಳಿಸುವ ಮಾಹಿತಿಯೊಂದು ಹೀಗಿದೆ:

"ಈಜಿಪ್ಟಿನ ಫರೋಗಳು ಗುಲಾಮರ ಶ್ರಮದಿಂದ ಪಿರಮಿಡ್ಡುಗಳನ್ನು ಕಟ್ಟಿದರು. ಇಡೀ ಚೀನಾ ಗೋಡೆಯನ್ನು ಶ್ರಮಿಕರ ಮೂಳೆ ಹಾಗೂ ರಕ್ತಸುರಿಸಿ ಕಟ್ಟಲಾಗಿದೆ. ರೋಮಿನ ಬ್ಯಾಬಿಲೋನಿಯಾ, ಗ್ರೀಸ್‌ನ ಸುಂದರ ನಿರ್ಮಾಣವನ್ನು ಕಟ್ಟಲು ಲಕ್ಷಾಂತರ ಕಾರ್ಮಿಕರು ರಕ್ತ ಸುರಿಸಿದ್ದಾರೆ. ಪ್ರಾಣ ಬಿಟ್ಟಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಈ ಎಲ್ಲಾ ನಿರ್ಮಾಣಗಳು ಕಟ್ಟಿಸಿದವರ ನೆನಪಿನ ಸ್ಮಾರಕಗಳೆಂಬುದಕ್ಕಿಂತ ಅವುಗಳನ್ನು ಕಟ್ಟುತ್ತಾ ಪ್ರಾಣತೆತ್ತ ಆ ಲಕ್ಷಾಂತರ ನತದೃಷ್ಟ ಕಾರ್ಮಿಕರ ನೋವು ಹಾಗೂ ಕಣ್ಣೀರಿನ, ರಕ್ತ ಹಾಗೂ ಬೆವರಿನ ಸ್ಮಾರಕಗಳಾಗಿವೆ. ಈ ರೀತಿ ಮಣ್ಣು ಇಟ್ಟಿಗೆಗಳಿಂದ ಕಟ್ಟಿದ ಈ ನಿಶ್ಚಲ ನಿರ್ಮಾಣಗಳು ಏನನ್ನು ನೆನಪಿಸುತ್ತವೆ? ಅದನ್ನು ಕಾಣಬರುವ ಪ್ರವಾಸಿಗರಿಗೆ ಅದು ಕೊಡುವ ಸಂದೇಶವೇನು? ಕ್ರೌರ್ಯ ಹಾಗೂ ಭಯೋತ್ಪಾದನೆಯಿಂದ ಕಟ್ಟಿದ ಸಾಮ್ರಾಜ್ಯದ ವೈಭವದ ಬಗ್ಗೆ ದುರಹಂಕಾರಿ ಚಕ್ರಾಧಿಪತಿಯೊಬ್ಬ ಇಟ್ಟುಕೊಂಡ ಪೊಳ್ಳು ಹೆಗ್ಗಳಿಕೆಯೇ ಇವು ಸಾರುವ ಸಂದೇಶವಾಗಿದೆಯೆಂದು ನಾನು ನಂಬುತ್ತೇನೆ."

18ನೇ ಶತಮಾನದ ಭಾರತೀಯ ರಾಜನೊಬ್ಬನಲ್ಲಿ ಇಂತಹ ಶ್ರಮಜೀವಿಗಳ ಪರವಾದ ನಿಲುವು ಇತ್ತು ಎನ್ನುವುದು ಏನನ್ನು ಸೂಚಿಸುತ್ತದೆ? ಅಂತಹ ಪ್ರಗತಿಪರ ವಿಚಾರಧಾರೆಗಳನ್ನು ಒಳಗೊಂಡಿರುವ ಗ್ರಂಥಗಳನ್ನು ಅವನು ಓದಿರಬೇಕಲ್ಲವೆ? ಆ ಕಾಲದ ಸಂಪ್ರದಾಯದಂತೆ ಕೇವಲ ವೇದ, ಶಾಸ್ತ್ರ ಪುರಾಣ, ಕುರಾನ್, ಬೈಬಲ್‌ಗಳನ್ನು ಮಾತ್ರ ಓದಿ ಮಠ, ಮಸೀದಿ, ಚರ್ಚ್‌ಗಳಲ್ಲಿ ಶಿಕ್ಷಣ ಪಡೆದ ಮೂಲಭೂತವಾದಿ / ಕೋಮುವಾದಿಯೊಬ್ಬನಿಂದ ನಾವು ಇಂತಹ ಕ್ರಾಂತಿಕಾರಿ ನಿಲುವನ್ನು ನಿರೀಕ್ಷಿಸಬಹುದೇ? ಟಿಪ್ಪು ತನ್ನ ಬಿಡುವಿಲ್ಲದ ದಿನಚರಿಯ ನಡುವೆಯೂ ಹಲವು

▶▶ 08

ನಿಜವಾದ ದೇಶಪ್ರೇಮಿ ಟಿಪ್ಪು

1945ರಲ್ಲಿ ಮಹಾತ್ಮ ಗಾಂಧಿಯವರು ಟಿಪ್ಪು ಸ್ಮರಣೋತ್ಸವ ಸಂದರ್ಭದಲ್ಲಿ ಎ.ಜೆ.ಖಲೀಲ್ ಎಂಬುವವರಿಗೆ ಪತ್ರವೊಂದನ್ನು ಬರೆಯುತ್ತಾರೆ. ಅದರಲ್ಲಿ ಅವರು "ಆ ಮಹಾಪ್ರಭು ಟಿಪ್ಪುವಿನ ಮಹಾಮಂತ್ರಿಯಾದರೂ ಯಾರು? ಅವನೊಬ್ಬ ಹಿಂದೂ (ದಿವಾನ್ ಪೂರ್ಣಯ್ಯ). ಸ್ವಾತಂತ್ರ್ಯ ಪ್ರವಾದಿ ಈ ಟಿಪ್ಪುವನ್ನು ಶತ್ರುಗಳಿಗೆ ಹಿಡಿದೊಪ್ಪಿಸಿದ ಸ್ವಾಮಿ ದ್ರೋಹಿ ಅವನೇ ಎಂಬುದನ್ನು ನಾವು ನಾಚಿಕೆಯಿಂದ ಒಪ್ಪಿಕೊಳ್ಳಬೇಕು" ಎನ್ನುತ್ತಾರೆ. ತನ್ಮೂಲಕ ಯಾರು ದೇಶದ್ರೋಹಿಗಳು ಎಂಬುದನ್ನು ಗಾಂಧಿಯವರು ಸೂಕ್ಷ್ಮವಾಗಿ ತಿಳಿಸುತ್ತಾರೆ.



"ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ಹೋರಾಟಗಾರ ಅನ್ನುವುದನ್ನು ಕೇಳಿದರೆ ತಲೆ ಚಚ್ಚಿಕೊಳ್ಳಬೇಕು ಎನಿಸುತ್ತದೆ. ಎಲ್ಲಾ ರಾಜರು ತಮ್ಮ ರಾಜ್ಯವನ್ನು ಉಳಿಸಿಕೊಳ್ಳಲು ಹೋರಾಡಿದಂತೆ ಟಿಪ್ಪು ಕೂಡ ಮಾಡಿದ್ದಾನೆ. ಅವನ ಹೆಸರನ್ನು ಭಗತ್ ಸಿಂಗ್, ಸುಭಾಷ್‌ಚಂದ್ರ ಬೋಸ್, ಮಹಾತ್ಮ ಗಾಂಧಿ ಜೊತೆ ಸೇರಿಸಿಕೊಳ್ಳಲು ಸಾಧ್ಯವಿಲ್ಲ."


ಟಿಪ್ಪುವಿನ ಬಗ್ಗೆ ಹಿಂದೂತ್ವವಾದಿಗಳ 'ಶ್ರೇಷ್ಠ' ಮಾತುಗಳಿವು! ಬಹುಶಃ ಸ್ವಾತಂತ್ರ್ಯ ಹೋರಾಟವೊಂದಕ್ಕೆ, ಆ ಹೋರಾಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬರ ನೆತ್ತರಿನ ಹನಿಗೆ ಇದಕ್ಕಿಂತ ಕ್ರೂರವಾಗಿ ಅಪಮಾನ ಎಸಗಲು ಸಾಧ್ಯವಿಲ್ಲ. ಹಾಗೆ ಹೇಳುವುದಾದರೆ ಹಿಂದೂತ್ವವಾದಿಗಳ ಇಂತಹ ಮಾತುಗಳು ಈ ದೇಶದ, ಈ ದೇಶ ಕಟ್ಟುವಲ್ಲಿ ಯತ್ನಿಸಿದ ಪ್ರತಿಯೊಬ್ಬರನ್ನೂ ಅಪಮಾನಿಸಿದಂತೆ ಮತ್ತು ಅವರು ಹೇಳಿದ್ದೇ ಸತ್ಯವಾದರೆ ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ಅಧ್ಯಾಯಕ್ಕೆ ಬೆಲೆಯೇ ಇರುವುದಿಲ್ಲ, ಯಾಕೆಂದರೆ ಬಹುತೇಕ ಸ್ವಾತಂತ್ರ್ಯ ಹೋರಾಟಗಾರರಿಗೆ ತಾವು ಹಿಂದೂತ್ವವಾದಿಗಳು, 'ನಾವು ಹಿಂದೂಗಳಿಗಾಗಿಯೇ ಬ್ರಿಟಿಷರ ವಿರುದ್ಧ ಹೋರಾಡಬೇಕು, ದೇಶ ಕಟ್ಟಿಕೊಂಡು ನಮಗೇನಾಗಬೇಕು ಎಂಬ ಧೋರಣೆ ಖಂಡಿತ ಇರಲಿಲ್ಲ. ಹಾಗೆಯೇ ಸ್ವಾತಂತ್ರ್ಯ ಹೋರಾಟಗಾರರಿಗೆ ಇಂತಹ ಧೋರಣೆ ಇರಲಿಲ್ಲವೆಂದರೆ ಹಿಂದೂತ್ವವಾದಿಗಳ ಪ್ರಕಾರ ಅಂತಹವರ್‍ಯಾರೂ ಸ್ವಾತಂತ್ರ್ಯ ಹೋರಾಟಗಾರರೇ ಅಲ್ಲ! ಅವರೆಲ್ಲರೂ... ಅಂದರೆ ಬಂಗಾಳದ ನವಾಬ ಸಿರಾಜುದ್ದೌಲ, ಪಂಜಾಬ್‌ನ ರಣಜಿತ್ ಸಿಂಗ್, ಮಹಾರಾಷ್ಟ್ರದ ನಾನಾಫಡ್ನವೀಸ, ನಾನಾ ಸಾಹೇಬ, ಅವಧ್‌ನ ರಾಣಿ ಬೇಗಂ ಹಜರತ್ ಮಹಲ್, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ಕಿತ್ತೂರಿನ ಚೆನ್ನಮ್ಮ, ಹಾಗೆ 1857ರಲ್ಲಿ 'ಬಹದ್ದೂರ್ ಷಾನ ಪರ' ದಂಗೆ ಎದ್ದ ದೆಹಲಿಯ ಸಿಪಾಯಿಗಳು ಇವರ್‍ಯಾರೂ ಸ್ವಾತಂತ್ರ್ಯ ಹೋರಾಟಗಾರರೇ ಅಲ್ಲ! ಸ್ವಾತಂತ್ರ್ಯ ಹೋರಾಟದ ಪುಟದಲ್ಲಿ ಇವರಿಗೇ ಜಾಗವೇ ಇರಲಿಕ್ಕಿಲ್ಲ! ಕ್ಷಮಿಸಿ, ಇವರ ಬದಲು ಹಿಂದೂತ್ವವಾದಿಗಳು ಹೇಳುವವರನ್ನು ತುರುಕೋಣವೆಂದರೆ ಅಂತಹವರಾರೂ ಸಂಘ ಪರಿವಾರದ ಇತಿಹಾಸದಲ್ಲಿ ಹುಟ್ಟಿಲ್ಲ.


ಹಾಗಿದ್ದರೆ ಏನು ಮಾಡುವುದು? ಹಿಂದೂತ್ವವಾದಿಗಳು ಹೇಳುವುದನ್ನು ಒಪ್ಪಿಕೊಂಡು ಟಿಪ್ಪುವನ್ನು ಒಳಗೊಂಡಂತೆ ಇವರನ್ನೆಲ್ಲಾ ತಿರಸ್ಕರಿಸಬೇಕೆ? ಖಂಡಿತ ಸಾಧ್ಯವಿಲ್ಲದ ಮಾತು. ಯಾಕೆಂದರೆ ಸೂರ್ಯಚಂದ್ರರಿರುವ ತನಕ ಇಂತಹವರು



ಸ್ವಾತಂತ್ರ್ಯ ಹೋರಾಟಗಾರರಾಗಿ ಜನಮಾನಸದಲ್ಲಿ ಉಳಿಯುತ್ತಾರೆ. ಹಾಗೆಯೇ ಟಿಪ್ಪು ಕೂಡ. ಅವನನ್ನು ಟೀಕಿಸುವ ಯಾರದೇ ಹೇಳಿಕೆಯಾಗಲೀ ಬಹುಶಃ ಅವನ ಸಾಧನೆಯ ಒಂದಂಶವನ್ನೂ ಸಹ ಅಲುಗಾಡಿಸಲು ಸಾಧ್ಯವಿಲ್ಲ. ಯಾಕೆಂದರೆ ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಡಿದ್ದು ಒಂದೆರಡು ಯುದ್ಧಗಳಲ್ಲಿ ಅಲ್ಲ, ಬರೋಬ್ಬರಿ ನಾಲ್ಕು ಯುದ್ಧಗಳಲ್ಲಿ! ನಿಜ, ಟಿಪ್ಪು ಬ್ರಿಟಿಷರನ್ನು ಭಾರತದಿಂದ ಓಡಿಸಲು ಹೋರಾಡಲಿಲ್ಲ, ಬದಲಿಗೆ ಅವರು ಇಲ್ಲಿ ತಳವೂರಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ಟಿಪ್ಪು ಪ್ರಬಲ ಪ್ರತಿರೋಧ ಒಡ್ಡಿದ. ಬಹುಶಃ ಅವನು ಮನಸ್ಸು ಮಾಡಿದ್ದರೆ ಪಂಜಾಬ್‌ನ ರಣಜಿತ್ ಸಿಂಗ್‌ನ ಹಾಗೆ, ಹೈದರಾಬಾದ್‌ನ ನಿಜಾಮನ ಹಾಗೆ ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಂಡು ಅವರಿಗೆ ಅಡಿಯಾಳಾಗಿ 49 ವರ್ಷವೇನು 99 ವರ್ಷ ಬದುಕಬಹುದಿತ್ತು (ಟಿಪ್ಪು ಹುಟ್ಟಿದ್ದು 1750ರಲ್ಲಿ, ಸತ್ತಿದ್ದು 179[illegible] ಬ್ರಿಟಿಷರ ವಿರುದ್ಧ ಹೋರಾ[illegible]ತ [illegible]ರಂಗದಲ್ಲಿ). ಆದರೆ ಟಿಪ್ಪು ಪರದೇಶಿ ಪರಂಗಿ[illegible] ಶರಣ[illegible] ಸಿದ್ಧನಿರಲಿಲ್ಲ, ಬದಲಿಗೆ ಆ ಕಾಲದಲ್ಲಿ "ತನ್ನ ಹೆಸರು ಕೇಳಿದರೆ [illegible]ಡನ್ ಬೀದಿ ನಡುಗುವಂತೆ" ಮಾಡಿದ್ದ[illegible]ಡನ್ ನಗರದಲ್ಲಿನ ಅಂದಿನ ಬ್ರಿಟಿಷ್ [illegible] ಇಂಡಿಯಾ ಕಂಪನಿಯ ಕೇಂದ್ರ ಸ್ಥಾನ). ಯಾಕೆಂದರೆ ಮರಾಠರು, ಹೈದರಾಬಾದಿನ

1794 ಕಾವೇರಿ ನದಿಗೆ ಕನ್ನಂಬಾಡಿಯಲ್ಲಿ ಅಣೆಕಟ್ಟು ಕಟ್ಟಲು ಟಿಪ್ಪು ಶಂಕುಸ್ಥಾಪನೆ





ನಿಜಾಮರನ್ನೊಳಗೊಂಡಂತೆ ಅಂದಿನ ಕಾಲದ ಎಲ್ಲಾ ರಾಜರು ಬ್ರಿಟಿಷರ ಸಹಾಯಕ ಸೇನಾ ಪದ್ಧತಿಗೆ ಒಪ್ಪಿಕೊಂಡರು. ಆದರೆ ಟಿಪ್ಪು ಅದಕ್ಕೆ ತಲೆಬಾಗಲಿಲ್ಲ, ಬದಲಿಗೆ ಅವರ ವಿರುದ್ಧ ಫ್ರೆಂಚರ ನೆಪೋಲಿಯನ್ ಬೋನಾಪಾರ್ಟೆಯ ಸಹಾಯ ಪಡೆಯಲು, ಆಫ್ಘನ್ನಿನ ದೊರೆ ಜಮಾಲ್ ಷಾನ ಬೆಂಬಲ ಪಡೆಯಲು ಯತ್ನಿಸಿದ. ಆದರೆ ನೆಪೋಲಿಯನ್ನನ ಸೈನ್ಯ ಈಜಿಪ್ಟ್‌ನಲ್ಲಿ ಹವಾಮಾನ ವೈಪರೀತ್ಯದ

ಕಾರಣದಿಂದಾಗಿ ಭಾರತಕ್ಕೆ ಬರ[illegible] ಹಾಗೆಯೇ ಪರ್ಶಿಯನ್ನರು ಆಫ[illegible] ಜಮಾಲ್ ಷಾನ ಮುಂದ[illegible] ತಡೆಯೊಡ್ಡಿದರು. ಅಂತಹ[illegible] - ಅಂದರೆ ನೆಪೋ[illegible] ಬೋನಾಪಾರ್ಟೆ ಏನ[illegible] [illegible] ಟಿಪ್ಪು[illegible] [illegible]-ಆದರೆ [illegible] [illegible]ದ ಚಿ[illegible] [illegible]ಗಿರುತ್ತಿತ್ತು, ಆದರೆ [illegible] ಅವಕಾಶವಿರದೇ ಟಿಪ್ಪು [illegible] ಬ್ರಿಟಿಷರ ಗುಂಡಿಗೆ ತನ್ನ ಎದ[illegible] ಮೂರನೇ ಮೈಸೂರು ಯುದ್ಧದಲ್ಲಿ [illegible] ಮಕ್ಕಳನ್ನು ಲಾರ್ಡ್ ಕಾರ್ನವಾಲೀಸನ[illegible] ಒತ್ತೆಯಾಳುಗಳಾಗಿ ಒಪ್ಪಿಸಿದ್ದ.

ಈ ಸಂದರ್ಭದಲ್ಲಿ ಒಂದೆರಡು ವಿಷ[illegible] ಸ್ಪಷ್ಟಪಡಿಸಲೇಬೇಕು. ಅದು ಟಿಪ್ಪು ಹಿಂದೂ [illegible] ಎನ್ನುವುದರ ಬಗ್ಗೆ ಬಹುಶಃ ಹಾಗೆಂದರೆ ನಮ್ಮ ನ[illegible] ಹುಳ ಬೀಳುತ್ತದಷ್ಟೆ. ಯಾಕೆಂದರೆ ಯಾವ ಹಿಂದೂ[illegible] ಸೇರಿದ ಮಹಾರಾಷ್ಟ್ರದ ಪಿಂಡಾರಿಗಳು ಶೃಂಗೇರಿ[illegible] ಮಠವನ್ನು ಧ್ವಂಸಗೈದರೋ ಅಂತಹ ಮಠವ[illegible] ಕಟ್ಟಿದವನು, ಉದ್ಧಾರ ಮಾಡಿದವನು ಟಿಪ್ಪು [illegible] ಹಾಗೆ ಟಿಪ್ಪುವಿನ ಶ್ರೀರಂಗ ಭಕ್ತಿ ಎಲ್ಲರಿಗೂ [illegible] ಯಾಕೆಂದರೆ ಟಿಪ್ಪುವಿನ ಅರಮನೆಯ ಸಮೀ[illegible] ಮೀಟರುಗಳ ದೂರದಲ್ಲಿ ಶ್ರೀರಂಗಸ್ವಾಮಿಯ ದ[illegible] ಈಗಲೂ ನಳನಳಿಸುತ್ತಾ ನಿಂತಿದೆ. ಇನ್ನೂ ನಂಜ[illegible] ನಂಜುಂಡೇಶ್ವರನನ್ನು ಟಿಪ್ಪು "ಹಕೀಮ್ ನ[illegible] ಎನ್ನುತ್ತಿದ್ದದ್ದು ಮತ್ತು ನಂಜುಂಡೇಶ್ವರನ ದೇ[illegible] ಟಿಪ್ಪು ನೀಡಿದ ರತ್ನಖಚಿತ ಬಟ್ಟಲು, ಕೆಲವು [illegible] ದೊಡ್ಡ ಉದಾಹರಣೆಯೇ ನಮ್ಮ ಮುಂದಿದೆ. [illegible] ನಂಜನಗೂಡಿನ ದೇವಸ್ಥಾನದಲ್ಲಿರುವ ಕೆಲವ[illegible] ಪಾತ್ರೆಗಳು, ಕೊಡುಗೆಗಳ ಮೇಲೆ "ಟಿಪ್ಪು ಸುಲ್ತಾ[illegible] ಎಂದಿರುವುದನ್ನು ನಾವು ಕಾಣಬಹುದು. ಟಿಪ್ಪು[illegible] ಧರ್ಮದ ಪ್ರೋತ್ಸಾಹಕನೇ ಅಥವಾ ದ್ರೋಹಿಯೆ[illegible] ನಿರ್ಧರಿಸಲು ಇಂತಹ ಒಂದೆರಡು ಉದಾ[illegible] ಸಾಕು. ದುರಂತವೆಂದರೆ ಹಿಂದೂತ್ವವಾದಿಗಳು [illegible] ದೇವಾಲಯಗಳ ಬಗ್ಗೆ ಟಿಪ್ಪು ಈ ರೀತಿ[illegible] ನೀಡಿರುವುದನ್ನು "ಟಿಪ್ಪು ತನ್ನ ಅನಿಷ್ಟ ನಿವಾರಣೆಗ[illegible] ಕೆಲಸವೇ ಹೊರತು ಭಕ್ತಿಯಿಂದಲ್ಲ" ಎನ್ನುತ್ತಾರೆ! [illegible] ಮೊಸರಲ್ಲೂ ಕಲ್ಲು ಹುಡುಕುವ ಕೆಲಸ ಮ[illegible] ಹಾಗಿದ್ದರೆ ಇವರ ಪ್ರಕಾರ ಆಂಜನೇಯನ ಹ[illegible] ತನ್ನ ಎದೆಬಗೆದು 'ನೋಡಿ ನನ್ನ ಹಿಂದೂ ಭಕ್ತಿ[illegible] ತೋರಿಸಬೇಕಿತ್ತು! (ಕ್ಷಮಿಸಿ, ಹಾಗೆ ತೋ[illegible]

07 ◄◄

ಪುಸ್ತಕಗಳನ್ನು ರಚಿಸಿದ್ದನೆಂದು ಇತಿಹಾಸ ಹೇಳುತ್ತದೆ. ಅವನು ಕನ್ನಡ, ಪರ್ಶಿಯನ್, ಫ್ರೆಂಚ್, ತೆಲುಗು, ತಮಿಳು ಭಾಷೆ ಬಲ್ಲವನಾಗಿದ್ದ. ಆತ ಬರೆದ ಪುಸ್ತಕಗಳ ಮೂಲಧಾತು ಬ್ರಿಟಿಷ್ ಪಾಹತುಶಾಹಿಯಿಂದ ಹಾಗೂ ಊಳಿಗಮಾನ್ಯತೆಯಿಂದ ನಾಡಿನ ಬಿಡುಗಡೆಯ ಅಂಶವನ್ನೇ ಹೊಂದಿತ್ತು, ಅವುಗಳಲ್ಲಿ ಫಾಸುಲ್ ಮುಜಾಹಿದ್ದೀನ್ (ಸೈನಿಕನ ವಿಜಯ) ಯುದ್ಧ ಕಲೆ ಹಾಗೂ ವಿಜ್ಞಾನದ ಬಗ್ಗೆಯಾಗಿತ್ತು, ಭೂಕಂದಾಯ ಕಾಯಿದೆ ಹಾಗೂ ವಾಣಿಜ್ಯ ಕಾಯಿದೆಗಳು ಟಿಪ್ಪುವಿನ ರಾಷ್ಟ್ರ ನಿರ್ಮಾಣದ ಪ್ರನಾಳಿಕೆಯೇ ಆಗಿತ್ತು, ಅಲ್ಲದೆ 'ಟಿಪ್ಪು ಕನಸುಗಳು' ಎಂಬ ಪುಸ್ತಕಗಳಲ್ಲಿ 38 ಲೇಖನಗಳಿದ್ದು, ಸ್ವತಂತ್ರ ರಾಷ್ಟ್ರ ನಿರ್ಮಾಣದ ಬಗ್ಗೆ ಟಿಪ್ಪುವಿನ ಕನಸುಗಳನ್ನು ಆ ಲೇಖನಗಳು ದಾಖಲಿಸುತ್ತವೆ. ಸಸ್ಯಶಾಸ್ತ್ರದಲ್ಲಿ, ಮಾನವಶಾಸ್ತ್ರದಲ್ಲಿ ಮತ್ತು ಮೂಲವಿಜ್ಞಾನ ವಿಷಯಗಳಲ್ಲೂ ಟಿಪ್ಪು ಆಸಕ್ತಿ ಹೊಂದಿದ್ದ.

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಸಸ್ಯತೋಟವನ್ನು ಅಪರೂಪದ ಸಸ್ಯತಳಿಗಳನ್ನು ಸಂರಕ್ಷಿಸಲೆಂದೇ ಟಿಪ್ಪು ಪ್ರಾರಂಭಿಸಿದ. ಫ್ರಾನ್ಸಿ ಫೆರ್ನಾಂಡಿಸ್ ಎಂಬವರು [illegible]ವಂತೆ "...ಲಾಲ್‌ಬಾಗ್ ಸಸ್ಯ ಉದ್ಯಾನವು ಕೇವಲ ಮನೋಲ್ಲಾಸಕ್ಕಾಗಿ ನಿರ್ಮಿಸಿದ ತೋಟವಾಗಿರಲಿಲ್ಲ, ವಿಶ್ವದ ಬೇರೆ ಬೇರೆ ಕಡೆಗಳಿಂದ ತರಿಸಲಾಗಿದ್ದ ಅಪರೂಪದ ಸಸ್ಯತಳಿಗಳನ್ನೆಲ್ಲಾ ಇಲ್ಲಿ ಸಂರಕ್ಷಣೆ ಮಾಡಲಾಗಿತ್ತು, ಇಂಗ್ಲೆಂಡಿನ ಓಕ್ ಮರ, ದಕ್ಷಿಣ ಆಫ್ರಿಕಾದ ಫೈನ್ ಮರ, ಮೆಕ್ಸಿಕೋದ ಅವೋ ಕಾಡೋ, ಮಾವು, ಕಿತ್ತಳೆ, ಹಿಪ್ಪು ನೇರಳೆ, ಸೀಬೆ ಗಿಡಗಳು ಹಾಗೂ ಹತ್ತಿ ಮತ್ತು ನೀಲಿ ಬೆಳೆಯ ಪ್ರಾಯೋಗಿಕ ಕ್ಷೇತ್ರಗಳು ಲಾಲ್‌ಬಾಗಿನಲ್ಲಿತ್ತು." ಈ ಐತಿಹಾಸಿಕ ಮಾಹಿತಿಯ ಆಧಾರದಿಂದ ಟಿಪ್ಪುವಿನ ರಾಜ್ಯದಲ್ಲಿ ಸಸ್ಯಶಾಸ್ತ್ರಜ್ಞರಿದ್ದಿರಬೇಕು ಮತ್ತು ಅವರ ವಿಶೇಷ ಅಧ್ಯಯನಕ್ಕಾಗಿ ಅವರು ಶಿಕ್ಷಣ ವ್ಯವಸ್ಥೆಯೊಂದನ್ನು ರೂಪಿಸಿದ್ದಿರಬೇಕು ಎಂದು ಸರಿಯಾಗಿಯೇ ಊಹಿಸಬಹುದಲ್ಲವೇ? ವಾಣಿಜ್ಯಶಾಸ್ತ್ರದಲ್ಲಿ ಟಿಪ್ಪುವಿಗಿದ್ದ ಆಸಕ್ತಿ ನಾಡಿನ ವಾಣಿಜ್ಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು ಟಿಪ್ಪು ಸರಕಾರಿ ವಾಣಿಜ್ಯ ನಿಗಮವೊಂದನ್ನು ಸ್ಥಾಪಿಸಿದ್ದ. ಈ ನಿಗಮದಲ್ಲಿ 5 ರೂ. ನಿಂದ 5000 ರೂ.ವರೆಗೆ ಮೌಲ್ಯವಿರುವ ಶೇರುಗಳನ್ನು ಜನರಿಗೆ ಬಿಡುಗಡೆ ಮಾಡಿ ಜನತೆಯೂ ವಾಣಿಜ್ಯ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಲಾಗಿತ್ತು, 5 ರೂ. ನಿಂದ 500 ರೂ. ನಷ್ಟು ಶೇರು ಹೊಂದಿದ್ದ ಶೇರುದಾರರಿಗೆ ವರ್ಷದ ಕೊನೆಯಲ್ಲಿ ಶೇ. 50ರಷ್ಟು ಲಾಭಾಂಶ ಕೊಡಲಾಗುತ್ತಿತ್ತು, 500 ರೂ. ನಿಂದ 5000 ರೂ.ಗೆ ಮೇಲ್ಪಟ್ಟು ಶೇರು ಹೊಂದಿದವರಿಗೆ ಕೇವಲ ಶೇ. 13 ರ ಷ್ಟು ಲಾಭಾಂಶವನ್ನು ಕೊಡಲಾಗುತ್ತಿತ್ತು.

ಇಷ್ಟು ಸಮರ್ಪಕವಾಗಿ ಶೇರು ವ್ಯವಹಾರ ನಡೆಸಲು ವಾಣಿಜ್ಯಶಾಸ್ತ್ರದಲ್ಲಿ ಪರಿಣತಿ ಪಡೆದ ವ್ಯಾಪಾರಿಗಳು ಇದ್ದಿರಲೇಬೇಕಲ್ಲವೇ? ಅವರ ಶಿಕ್ಷಣಕ್ಕಾಗಿಯೂ ಟಿಪ್ಪು ಶಿಕ್ಷಣ ವ್ಯವಸ್ಥೆ ಮಾಡಿರಲೇಬೇಕು.

ಈ ರೀತಿಯ ತರ್ಕವನ್ನು ಬೆಳೆಸುತ್ತಾ ಹೋದಾಗ ಬದುಕಿನ ಬೇರೆ ಬೇರೆ ಕ್ಷೇತ್ರಗಳ ವ್ಯಾವಹಾರಿಕ ನಿರ್ವಹಣೆಗಾಗಿ ಟಿಪ್ಪು ಸುಲ್ತಾನ್ ಆಯಾ ಕ್ಷೇತ್ರಗಳ ಜ್ಞಾನ ಮತ್ತು ಕುಶಲತೆಗಳ ಅಭಿವೃದ್ಧಿಗಾಗಿ ಸಶಕ್ತ ಶಿಕ್ಷಣ ವ್ಯವಸ್ಥೆಯೊಂದನ್ನು ರೂಪಿಸಿರಲೇಬೇಕು ಎನ್ನುವ ತೀರ್ಮಾನಕ್ಕೆ ಬರಬಹುದು. (ಉದಾಹರಣೆಗೆ: ಮಳವಳ್ಳಿಯಲ್ಲಿ ದೊರೆತಿರುವ ಅತ್ಯುತ್ತಮ ಕಬ್ಬಿಣದ ತಯಾರಿಕೆಗಾಗಿ ಲೋಹಶಾಸ್ತ್ರ ರಾಕೆಟ್ ಕ್ಷಿಪಣಿ ತಯಾರಿಕೆಗಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಸಮರಶಾಸ್ತ್ರ ರೇಷ್ಮೆ, ಕೃಷಿ ಅಭಿವೃದ್ಧಿಗಾಗಿ ಕೃಷಿ ಶಾಸ್ತ್ರ.. ಹೀಗೆ)

ಸಂಘ ಪರಿವಾರದವರು ಆರೋಪಿಸುವಂತೆ ಟಿಪ್ಪು ಸುಲ್ತಾನ್ ಮುಸ್ಲಿಂ ಮೂಲಭೂತವಾದಿಯೂ, ಕೋಮುವಾದಿಯೂ ಆಗಿದ್ದರೆ ಇಸ್ಲಾಂನ ಅಭಿವೃದ್ಧಿಗಾಗಿ ಮದ್ರಸಾಗ[illegible]ನ್ನು ಮಾ[illegible] [illegible]ಸಿ, ಕುರಾನ್ ಅಧ್ಯಯನಕ್ಕೆ ಮಾತ್ರ [illegible] [illegible]ಬಹುದಿತ್ತು, ಮಸೀದಿಗಳನ್ನು ಮಾತ್ರ ಉ[illegible] [illegible]ಮಾಡಬಹುದಿತ್ತು,

ಆದರೆ, ವಿಶ್ವದ ಪ್ರಗತಿಪರ ಚಿಂತನೆಗಳಿಗೆ [illegible] ಒಡ್ಡಿಕೊಂಡ ಟಿಪ್ಪು ವಿಶ್ವಮಾನವ ಆಗಿದ್ದ. ತನ್ನ [illegible] ಚರಿತ್ರೆ, ರಾಜ್ಯಶಾಸ್ತ್ರ ಸಮಾಜಶಾಸ್ತ್ರ ಭಾಷೆಗಳು, [illegible] ರಸಾಯನಶಾಸ್ತ್ರ ಭೌತಶಾಸ್ತ್ರ ವಾಣಿಜ್ಯ ಕೃಷಿ ವ[illegible] ಲೋಕೋಪಯೋಗಿ ವಿಷಯಗಳಲ್ಲಿ ಶಿಕ್ಷಣ [illegible] ಪ್ರಗತಿಪರರನ್ನಾಗಿಸಬಯಸಿದ್ದ ಎನ್ನುವುದನ್ನು [illegible] ಪುರಾವೆಗಳು ಸಮರ್ಥಿಸುತ್ತವೆ.

ಟಿಪ್ಪು ವಿಶೇಷವಾಗಿ ಜ್ಞಾನದಾಹಿಯಾಗಿ[illegible] ಅರಸರ ಅರಮನೆಗಳಲ್ಲಿ ಸುಖಭೋಗ ಸ[illegible] ದೊರೆತರೆ, ಟಿಪ್ಪುವಿನ ಅರಮನೆಯಲ್ಲಿ ದ[illegible] ಪುಸ್ತಕಗಳು, ಪ್ರಯೋಗಸಾಧನಗಳು, ವಿಜ್ಞಾನ, [illegible] ಸಾಹಿತ್ಯ ಸೂಫಿ ಧರ್ಮ ಸಾಹಿತ್ಯ ಇತ್ಯಾದಿಗಳ[illegible]

ಅವನು ಸಂಕುಚಿತ ಮನಸ್ಸಿನ ಮುಸ್ಲಿಂ ಮ[illegible] ವಾದಿ ಆಗಿದ್ದರೆ ಜಾತಿ-ಮತ ಭೇದವಿಲ್ಲದೆ [illegible] ಪ್ರಜೆಗಳಿಗೆ ಇಹದ ಬದುಕಿನ ಸುಖ ನೆಮ್ಮದಿಗಾಗಿ[illegible] ಶಿಕ್ಷಣ ಕೊಡುವ ಏರ್ಪಾಡು ಮಾಡುತ್ತಿರಲಿಲ್ಲ[illegible] ಅಂತಹ ಶ್ರೇಷ್ಠ ಜ್ಞಾನಪಕ್ಷಪಾತಿಯ ಜನ್ಮದಿನಾಚ[illegible] ಆಚರಿಸುವುದರಲ್ಲಿ ತಪ್ಪೇನಿದೆ?

■ ಡಾ| ಹಯವದನ ಉ[illegible]

ೋತ್ವವಾದಿಗಳು ನಂಬುತ್ತಿರಲಿಲ್ಲ! ಟಿಪ್ಪುವಿಗೆ ೋಶದ ಕಾಯಿಲೆ ಇತ್ತು, ಆದಕ್ಕೆ ಆತ ಎದೆಬಗೆದ ಿದ್ದನೇನೋ!)

ಂದಹಾಗೆ ಇನ್ನೊಂದು ಅಭಿವೃದ್ಧಿಪರ ಸತ್ಯವನ್ನು ಿಸಲೇಬೇಕು. ಅದು ಕಾವೇರಿ ನದಿಗೆ ಕನ್ನಂಬಾಡಿಯಲ್ಲಿ ಅಣೆಕಟ್ಟು ಕಟ್ಟಲು ಶಂಕುಸ್ಥಾಪನೆ ನೆರವೇರಿಸಿದ್ದರ . ಹೌದು, ಇಂದಿನ ಕೆ.ಆರ್.ಎಸ್‌ಗೆ 1794ರಲ್ಲೇ ನೆ ರೂಪಿಸಿ ಶಂಕುಸ್ಥಾಪನೆ ನೆರವೇರಿಸಿದ್ದು ಟಿಪ್ಪು . ಆ ಬಗ್ಗೆ ಶಾಸನ ಈಗಲೂ ಕೆ.ಆರ್.ಎಸ್‌ನ ದ್ವಾರದಲ್ಲಿರುವ ಗಾಜಿನ ಫಲಕದಲ್ಲಿ ಭದ್ರವಾಗಿದೆ. ಾಸನದಲ್ಲಿ "ಪೈಗಂಬರ್ ಮುಹಮ್ಮದರ ನದಂದು...... ಪಶ್ಚಿಮ ದಿಕ್ಕಿನಲ್ಲಿ ಕಾವೇರಿ ನದಿಗೆ ಗಿ ಚಿರಸ್ಥಾಯಿಯಾದ ಅಣೆಕಟ್ಟು ಕಟ್ಟಿಸಲು ಸ್ಥಾಪನೆ ಮಾಡಿದ್ದೇವೆ" ಎಂದಿದೆ. ಸಂತಸದ ವೆಂದರೆ ನೂರು ವರ್ಷಗಳ ನಂತರ ಅಂದರೆ ರಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅಣೆಕಟ್ಟೆ ಕಟ್ಟಲು ಪ್ರಾರಂಭಿಸಿದ ನಂತರ, ಎಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದನೋ ಅದೇ ಸ್ಥಳದಲ್ಲಿ ಾಜ ಕೃಷ್ಣರಾಜ ಒಡೆಯರ್ ಅವರು ಕೆ.ಆರ್.ಎಸ್ ುತ್ತಾರೆ. ತನ್ಮೂಲಕ ಟಿಪ್ಪು ಕನಸನ್ನು ರಾಜರ್ಷಿ ಯವರು ನನಸು ಮಾಡುತ್ತಾರೆ. ದುರಂತವೆಂದರೆ ರ್ಷ ಶ್ರಮವಹಿಸಿ ಕಟ್ಟಿದ ಟಿಪ್ಪು ಮತ್ತು ನಾಲ್ವಡಿಯವರ ಸಾಧನೆಯನ್ನು ಹಿಂದೂತ್ವವಾದಿ ಇತಿಹಾಸಕಾರರು 3-4 ವರ್ಷ ದಿವಾನರಾಗಿದ್ದ ವಿಶ್ವೇಶ್ವರಯ್ಯನವರ ಹೈಜಾಕ್ ಮಾಡಿದ್ದಾರೆ. ತನ್ಮೂಲಕ ಟಿಪ್ಪು ಮತ್ತು ಯವರಿಗೆ ದ್ರೋಹ ಎಸಗಿದ್ದಾರೆ. ಒಟ್ಟಾರೆ ಆ ಲ್ಲಿ ಅಂದರೆ 1794ರಲ್ಲಿ ನಾಲ್ಕನೇ ಮೈಸೂರು ನಡೆಯದಿದ್ದರೆ, ಟಿಪ್ಪು 1799ರಲ್ಲಿ ಸಾಯದಿದ್ದರೆ ಎಸ್ ಕಟ್ಟಿ ಇಷ್ಟೊತ್ತಿಗಾಗಲೇ 200 ವರ್ಷಗಳ ಗಿರುತ್ತಿತ್ತು. ಮಂಡ್ಯ, ಮೈಸೂರು, ಬೆಂಗಳೂರು, ಕೋಲಾರಗಳನ್ನೊಳಗೊಂಡಂತೆ ಸಮಸ್ತ ದಕ್ಷಿಣ ಕ ಅಭಿವೃದ್ಧಿಯಲ್ಲಿ ಇಷ್ಟೊತ್ತಿಗಾಗಲೇ 100 ವರ್ಷ ಿರುತ್ತಿದ್ದವು. ಟಿಪ್ಪುವಿನ ಮರಣದಿಂದಾಗಿ, ಇಡೀ ುರು ಬ್ರಿಟಿಷರ ವಶವಾದ್ದರಿಂದಾಗಿ ಕೆಆರ್‌ಎಸ್ ಣ 100 ವರ್ಷ ತಡವಾಯಿತು. ಹೀಗಿದ್ದರೂ ಎಸ್‌ಗೆ ಒಂದು ಪರಿಕಲ್ಪನೆ ನೀಡಿ ಕನ್ನಂಬಾಡಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿ ಕರುನಾಡಿಗೆ ಶಾಶ್ವತ ುರಿ ಒದಗಿಸಲು ಯತ್ನಿಸಿದ ಟಿಪ್ಪುವನ್ನು ಕನ್ನಡಿಗರು ೇಷವಾಗಿ ದಕ್ಷಿಣ ಕರ್ನಾಟಕದ ಜನ - ನೆನೆಯ ್ಲವೇ? ಅಂದಹಾಗೆ ಟಿಪ್ಪು ಬರೇ ತನ್ನ ಧರ್ಮದ ೋಸ್ಕರ ಕನ್ನಂಬಾಡಿಯಲ್ಲಿ ಅಣೆಕಟ್ಟೆ ಕಟ್ಟಲು ಭಿಸಿದನೆ? ಅವನನ್ನು ಹಿಂದೂ ದ್ರೋಹಿ ಎನ್ನುವವರು ಗ್ಗೆ ಉತ್ತರಿಸಬೇಕು.

ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿನ ಟಿಪ್ಪುವಿನ ಇಂತಹ ಕಾರ್ಯಗಳನ್ನು ಹೇಳುವುದನ್ನು ಬಿಟ್ಟು ಹಿಂದೂತ್ವ ಳು ದೂರದ ಲಂಡನ್‌ನಲ್ಲಿ ಇದೆ ಎನ್ನಲಾದ, ದಲ್ಲಿ ನೆಡೆದಿದೆ ಎನ್ನಲಾದ ಶಾಸನಗಳನ್ನು ಮತ್ತು ಗಳನ್ನು ಪ್ರಸ್ತಾಪಿಸಿ ಜನತೆಯನ್ನು ದಿಕ್ಕು ತಪ್ಪಿಸಲು ುತ್ತಿದ್ದಾರೆ. ಹಾಗಿದ್ದರೆ ಯಾಕೆ ಇವರ್‍ಯಾರಿಗೂ ಟಿಪ್ಪುವಿನ ಕರ್ನಾಟಕದೊಳಗೆ ಇಂತಹ ಸಾಕ್ಷಿ ಸೃಷ್ಟಿಸಲು ಾಗುತ್ತಿಲ್ಲ? ಜನಸಾಮಾನ್ಯರು ಪರಿಶೀಲಿಸುವರೆಂಬ ವೇ?

ನೇ ಇರಲಿ, ಟಿಪ್ಪುವನ್ನು ಹಿಂದೂ ದ್ರೋಹಿ ುದು, ಸ್ವಾತಂತ್ರ್ಯ ಯೋಧ ಅಲ್ಲ ಎನ್ನುವುದು ಇಡೀ ಸ್ವಾತಂತ್ರ್ಯ ಹೋರಾಟಕ್ಕೆ, ದೇಶಪ್ರೇಮಿ ಯೋಧರಿಗೆ ವ ಭಯಾನಕ ಮೋಸ. ಅಂದಹಾಗೆ 1945ರಲ್ಲಿ ತ್ಮ ಗಾಂಧಿಯವರು ಟಿಪ್ಪು ಸ್ಮರಣೋತ್ಸವ ಸಂದರ್ಭ ಎ.ಜಿ.ಖಲೀಲ್ ಎಂಬುವವರಿಗೆ ಪತ್ರವೊಂದನ್ನು ದಿದ್ದಾರೆ. ಅದರಲ್ಲಿ ಅವರು "ಆ ಮಹಾಪ್ರಭು ಟಿಪ್ಪುವಿನ ಮಂತ್ರಿಯಾದರೂ ಯಾರು? ಅವನೊಬ್ಬ ಹಿಂದೂ ್ ಪೂರ್ಣಯ್ಯ). ಸ್ವಾತಂತ್ರ್ಯ ಪ್ರವಾದಿ ಈ ಟಿಪ್ಪುವನ್ನು ಗೆ ಹಿಡಿದೊಪ್ಪಿಸಿದ ಸ್ವಾಮಿ ದ್ರೋಹಿ ಅವನೇ ದನ್ನು ನಾವು ನಾಚಿಕೆಯಿಂದ ಒಪ್ಪಿಕೊಳ್ಳಬೇಕು" ್ದಾರೆ. ತನ್ಮೂಲಕ ಯಾರು ದೇಶದ್ರೋಹಿಗಳು ದನ್ನು ಗಾಂಧಿಯವರು ಸೂಕ್ಷ್ಮವಾಗಿ ತಿಳಿಸುತ್ತಾರೆ.

್ಥ ಹೀಗಿರುವಾಗ ತನ್ನ ದೇಶಕ್ಕಾಗಿ ಬ್ರಿಟಿಷರ ವಿರುದ್ಧ ್ತ ಚೆಲ್ಲಿದ ಟಿಪ್ಪು ದೇಶದ್ರೋಹಿ, ಹಿಂದೂದ್ರೋಹಿ ಗುತ್ತಾನೆ? ಕಾರ್ಗಿಲ್‌ನಲ್ಲಿ ಭಾರತದ ಸೈನಿಕರು ಿದ್ದನು ಎಂಬುದನ್ನು ಹಾಡಿಹೊಗಳುತ್ತಾ ಎ.ಸಿ ಲ್ಲಿ ಕುಳಿತು ಸಂತಾಪ ಸೂಚಿಸುವುದಲ್ಲ ದೇಶಪ್ರೇಮ! ಸ ದೇಶಪ್ರೇಮಿಗಳು ಬ್ರಿಟಿಷರನ್ನು ಈ ನೆಲದಿಂದ ಿಸಲು ಯತ್ನಿಸಿದವರು, ಅವರ ವಿರುದ್ಧ ಒಂದೊಂದು ಿದವರು, ಹಾಗೆ ಅವರ ವಿರುದ್ಧ ರಣರಂಗದಲ್ಲಿ ಿದು ಸೆಣಸಿದವರು, ರಕ್ತ ಚೆಲ್ಲಿ ಮಾತೃಭೂಮಿಗಾಗಿ ್ತವರು. ಆ ಪಟ್ಟಿಯಲ್ಲಿ ಟಿಪ್ಪು ಅಗ್ರಪಂಕ್ತಿಯಲ್ಲಿ ್ದನೆ!

■ ರಘೋತ್ತಮ ಹೊ.ಬ

ತನ್ನ ಕಾಲಕ್ಕೂ ಮುಂದಿದ್ದ ಆಡಳಿತಗಾರ ಟಿಪ್ಪು




ಗಾಂಧೀಜಿಯವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಒಮ್ಮೆ ಟಿಪ್ಪು ಹಿಂದೂ-ಮುಸ್ಲಿಂ ಏಕತೆಯ ಪ್ರತೀಕವೆಂದು ಬರೆದಿದ್ದಾರೆ. ಪ್ರಸಿದ್ಧ ಚರಿತ್ರಕಾರ ಬಿ.ಎ.ಸಾಲ್ತರ್ ಭಾರತೀಯ ಇತಿಹಾಸ ಮಹಾಸಮ್ಮೇಳನದಲ್ಲಿ ಹಿಂದೂ ಧರ್ಮದ ರಕ್ಷಕನಾಗಿ ಟಿಪ್ಪು ಸುಲ್ತಾನ ಎಂಬ ಶೀರ್ಷಿಕೆಯಡಿ ಸುದೀರ್ಘ ಪ್ರಬಂಧವೊಂದನ್ನು ಮಂಡಿಸಿದ್ದಾರೆ. ಮತ್ತೊಬ್ಬ ಚಿಂತಕ ಎ. ಸುಬ್ಬರಾಯ ಚೆಟ್ಟಿಯವರು ಹಿಂದೂ ಮಠಗಳಿಗೆ ಮತ್ತು ಹಿಂದೂಗಳಿಗೆ ಟಿಪ್ಪು ನೀಡಿದ ಕೊಡುಗೆಗಳ ಒಂದು ಪಟ್ಟಿಯನ್ನೇ ಮಾಡಿದ್ದಾರೆ.

ಟಿಪ್ಪು ಸುತ್ತ ಈಗ ಮತ್ತೊಮ್ಮೆ ವಾಗ್ವಾದಗಳು ನಡೆಯುತ್ತಿವೆ. ಸಮಾಜದ ಒಂದು ವಿಭಾಗವು ಟಿಪ್ಪು ಮುಸ್ಲಿಮೇತರರ ವಿಷಯದಲ್ಲಿ ಬಹಳ ಕ್ರೂರವಾಗಿ ನಡೆದುಕೊಂಡಿದ್ದನೆಂದು ವಾದಿಸುತ್ತಿದೆ. ಆದರೆ ಈ ಬಗೆಯ ವಾದವು ಒಂದೋ ಬ್ರಿಟಿಷ್ ವಸಾಹತುಶಾಹಿ ಇತಿಹಾಸಕಾರರಿಂದ ಬರೆಯಲ್ಪಟ್ಟ ಇಲ್ಲವೇ ಟಿಪ್ಪು ಸೆರೆಹಿಡಿದಿದ್ದ ಬ್ರಿಟಿಷ್ ಕೈದಿಗಳು ಬರೆದ, ಇಲ್ಲವೇ ಆತನ ಆಳ್ವಿಕೆಯಿಂದ ಸಂತುಷ್ಟರಾಗದ ಕೆಲವು ಮಂದಿ ಬರೆದ ಬರವಣಿಗೆಗಳಿಂದ ಪ್ರೇರಿತವಾಗಿರುವ ವಾದವಾಗಿದೆ.

ನಾವಿಲ್ಲಿ ಗಮನಿಸಬೇಕಾದ ವಿಷಯವೊಂದಿದೆ. ಅದೆಂದರೆ ಟಿಪ್ಪುವಿನ ಕಾಣ್ಕೆಯನ್ನು ನೋಡುವಲ್ಲಿ ಸ್ವತಂತ್ರಪೂರ್ವ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಕಂಡುಬರುವ ವ್ಯತ್ಯಾಸ. ಸ್ವತಂತ್ರಪೂರ್ವ ಭಾರತದಲ್ಲಿ ಜಾದೂನಾಥ್ ಸರ್ಕಾರ್‌ರಂತಹ ಇತಿಹಾಸಕಾರರೂ ವಿರುದನಿಯಲ್ಲಿ ಟಿಪ್ಪುವಿನ ಸ್ವಾತಂತ್ರ್ಯಹೋರಾಟವನ್ನು, ಆಡಳಿತ ವೈಖರಿಯನ್ನು ಹಾಡಿಹೊಗಳುತ್ತಿದ್ದರು. ಟಿಪ್ಪುವಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕೊಡುಗೆಗಳಿಗೆ ಮೆಚ್ಚುಗೆ ಸೂಚಿಸುತ್ತಿದ್ದರು. ಆದರೆ ಸ್ವಾತಂತ್ರ್ಯಾನಂತರದಲ್ಲಿ ಹಲವು ಚಿಂತಕರು ಟಿಪ್ಪುವನ್ನು ನಕಾರಾತ್ಮಕವಾಗಿ ಚಿತ್ರಿಸಲು ಆರಂಭಿಸಿದರು. ಆದರೆ ಇತಿಹಾಸವೆಂಬುದು ತನ್ನ ಅಂತಿಮ ನ್ಯಾಯತೀರ್ಮಾನವನ್ನು ಎಂದಾದರೂ ಬಿಟ್ಟುಹೋಗುವ ನ್ಯಾಯಾಧೀಶನಂತೆ. ಮುಂದೊಂದು ದಿನ ಟಿಪ್ಪು ಚರಿತ್ರೆಯಲ್ಲಿ ತನಗೆ ಸಿಗಬೇಕಾದ ಸ್ಥಾನವನ್ನು ಪಡೆದೇ ಪಡೆಯುತ್ತಾನೆನ್ನುವ ಭರವಸೆಯನ್ನು ಇಡೋಣ. ಟಿಪ್ಪು ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಏನೇನು ಸಾಧಿಸಿದ ಎಂಬುದನ್ನು ಮುಕ್ತಮನಸ್ಸಿನಿಂದ ನೋಡುವ ಮೂಲಕವೇ ಆತನ ಕುರಿತು ತೀರ್ಮಾನಕ್ಕೆ ಬರುವುದು ಸೂಕ್ತವಾದುದು.

ರಾಜಕೀಯ

ಈ ದೇಶದ ಚರಿತ್ರೆಯಲ್ಲಿ ಸ್ವತಂತ್ರ ಭಾರತದ ಚರಿತ್ರೆಯನ್ನು ಬರೆಯಲು ತನ್ನ ನೆತ್ತರಶಾಯಿಯನ್ನೇ ನೀಡಿದ ಅತ್ಯದ್ಭುತ ವ್ಯಕ್ತಿ ಟಿಪ್ಪು ಸುಲ್ತಾನ್. ಆತನ ಬಿರುಗಾಳಿಯೋಪಾದಿಯ ಆಳ್ವಿಕೆ ಹಲವು ರೀತಿಗಳಿಂದ ಮುಖ್ಯವಾಗಿದೆ. ಆತನ ಪ್ರಮುಖ ಹೆಗ್ಗಳಿಕೆಯೆಂದರೆ ಭಾರತದಲ್ಲಿ ಬ್ರಿಟಿಷ್ ಅಧಿಪತ್ಯಕ್ಕೆ ನೀಡಿದ ಪ್ರಬಲ ಪ್ರತಿರೋಧ. ಟಿಪ್ಪುವಿನಷ್ಟು ಪ್ರಬಲ ಶತ್ರುವನ್ನು ಬ್ರಿಟಿಷರು ತಮ್ಮ ಆಳ್ವಿಕೆಯ ಇತಿಹಾಸದಲ್ಲೇ ಎಂದೂ ಎದುರುಗೊಂಡಿರಲಿಲ್ಲ. ಹುಲಿಯಷ್ಟೇ ತೀವ್ರತೆಯಿಂದ ಹೋರಾಡಿದ ಟಿಪ್ಪುಗೆ ಸರಿಸಾಟಿಯಾದ ಮತ್ತೊಬ್ಬ ವೀರನನ್ನು ಬ್ರಿಟಿಷರು ಕಂಡಿರಲಿಲ್ಲ. ಈ ನೆಲವನ್ನು ವಿದೇಶಿ ದಾಸ್ಯದ ನೊಗದಿಂದ ಬಿಡುಗಡೆಗೊಳಿಸುವುದು ಟಿಪ್ಪು ಸುಲ್ತಾನನ ಜೀವನದ ಮಹದಾಕಾಂಕ್ಷೆಯಾಗಿತ್ತು. ಅದಕ್ಕಾಗಿ ಆತ ಸಾಧ್ಯವಿರುವುದನ್ನೆಲ್ಲಾ ಮಾಡಿದ. ತನ್ನೆಲ್ಲ ಶಕ್ತಿ-ಶ್ರಮ ಮತ್ತು ಅಧಿಕಾರ, ಕೊನೆಗೆ ತನ್ನ ಜೀವವನ್ನೇ ಧಾರೆಯೆರೆದ. ತನ್ನ ಆದರ್ಶಗಳೊಂದಿಗೆ ಎಂದೂ ರಾಜಿಯಾಗಲಿಲ್ಲ, ತನ್ನ ಗುರಿಯಿಂದ ಎಂದೂ ವಿಚಲಿತನಾಗಲಿಲ್ಲ; ವಿದೇಶಿ ಶಕ್ತಿಗಳ ಮುಂದೆ ಎಂದೂ ತಲೆಬಾಗಲಿಲ್ಲ, ತನ್ನ ಕನಸಿನಲ್ಲಿಯೂ ಟಿಪ್ಪು ವಿದೇಶಿ ಶತ್ರುಗಳ ವಿರುದ್ಧ ಜೀವನ್ಮರಣದ ಹೋರಾಟ ನಡೆಸುತ್ತಿದ್ದ. ಈ ದೇಶದ ಪರಮಾಧಿಕಾರಕ್ಕೆ ಬ್ರಿಟಿಷ್ ಅಧಿಕಾರದಿಂದ ಎಂದಾದರೂ ಧಕ್ಕೆಯುಂಟಾಗಬಹುದು ಎಂಬ ಭ್ರಮೆಯನ್ನೂ ಆತ ಸಹಿಸುತ್ತಿರಲಿಲ್ಲ. ಒಂದಲ್ಲ ನಾಲ್ಕು ಪ್ರಮುಖ ಯುದ್ಧಗಳನ್ನು ಬ್ರಿಟಿಷರೊಂದಿಗೆ ನಡೆಸಿದ ಟಿಪ್ಪು ಎರಡರಲ್ಲಿ ಜಯವನ್ನೂ ಸಾಧಿಸಿದ. ಮೊದಲನೆಯ ಮೈಸೂರು ಯುದ್ಧದಲ್ಲಿ ಮದ್ರಾಸ್ ಸರ್ಕಾರದ ಎಲ್ಲರನ್ನೂ ಒತ್ತೆಯಾಳುಗಳಾಗಿ ತೆಗೆದುಕೊಳ್ಳುವುದರಲ್ಲಿದ್ದ, ಆದರೆ ಅವರು ಕಡಲಕಡೆಯ ಹಡಗೊಂದರೊಳಕ್ಕೆ ಓಡಿಹೋಗಿ ಬಚ್ಚಿಟ್ಟುಕೊಂಡರು. ಎರಡನೇ ಮೈಸೂರು ಯುದ್ಧದಲ್ಲಿ ಬೈಲಿಯ ಸೇನೆಗೆ ಮರ್ಮಾಘಾತ ನೀಡಿದ. ಇಂಗ್ಲಿಷ್ ಸೇನೆಯ ಮುಖ್ಯ ಸೇನಾಧಿಪತಿಗಳೆಲ್ಲಾ ಸತ್ತುಹೋದರು ಇಲ್ಲವೇ ಸೆರೆಸಿಕ್ಕರು. ಸೆರೆಸಿಕ್ಕಿದ 3,820 ಮಂದಿಯಲ್ಲಿ 508 ಜನರು ಬ್ರಿಟಿಷರಾಗಿದ್ದರು. ಬಕ್ಸಾರ್ ಕದನದ ವೀರಾಗ್ರಣಿಯಾಗಿದ್ದ ಹೆಕ್ಟರ್ ಮ... ಬಕ್ಸಾರ್... ಮೂವರು ರಾಜರ ನಡುಮುರಿದು ಬಂದರೂ ಇಲ್ಲಿ ಟಿಪ್ಪು ಎದುರಿಗೆ ಸೋತು ಸುಣ್ಣವಾಗಿ ತನ್ನ ಎಲ್ಲಾ ಬಂದೂಕುಗಳನ್ನು ಕಾಂಚೀವರಂ ದಂಡೆಯ ಮೇಲೆ ಎಸೆದು ಮದ್ರಾಸ್‌ವರೆಗೆ ಓಟಕೀಳುವಂತೆ ಮಾಡಿದ್ದು ಟಿಪ್ಪು. ಬ್ರೈಥ್ವೈಟ್‌ನ ಇಡೀ ಸೇನಾತುಕಡಿಯನ್ನು ಹೆಡೆಮುರಿಕಟ್ಟಿದ ಟಿಪ್ಪು ಸ್ವತಃ ಬ್ರೈಥ್ವೈಟ್‌ನನ್ನೇ ಸೆರೆಹಿಡಿದು ಬಂಧನದಲ್ಲಿಟ್ಟಿದ್ದ. ಜನರಲ್ ಮೀಡೋಸ್, ಅಷ್ಟೇ ಏಕೆ ಕಾರ್ನ್‌ವಾಲಿಸ್ ಕೂಡಾ ಟಿಪ್ಪು ಕೈಯಲ್ಲಿ ಭಯಂಕರ ಕಿರುಕುಳ ಅನುಭವಿಸಿದರು. ಈ ಕಾರಣದಿಂದಲೇ ಬ್ರಿಟಿಷರಿಗೆ ಟಿಪ್ಪು ಹೆಸರು ಕೇಳಿದರೆ ತೊಳ್ಳೆನಡುಕ ಶುರುವಾಗುತ್ತಿತ್ತು. ಎಷ್ಟರಮಟ್ಟಿಗೆ ಎಂದರೆ ಇಂಗ್ಲಿಷರು ಮನೆಯಲ್ಲಿ ತಮ್ಮ ಕಿಲಾಡಿ ಮಕ್ಕಳನ್ನು ಸುಮ್ಮನಿರಿಸಬೇಕೆಂದರೆ ಟಿಪ್ಪು ಹೆಸರು ಹೇಳಿ ಹೆದರಿಸುತ್ತಿದ್ದರು.



ಅಭಿವೃದ್ಧಿ ಯೋಜನೆಗಳು

ಟಿಪ್ಪು ಆಳ್ವಿಕೆಯ ಅತ್ಯಂತ ಗಮನಾರ್ಹ ಅಂಶವೆಂದರೆ ಆತನ ಆಡಳಿತ ನೀತಿ. ವ್ಯಾಪಾರ, ವಾಣಿಜ್ಯ ಕಲೆ ಮತ್ತು ಕರಕುಶಲಗಳಲ್ಲಿ ಟಿಪ್ಪು ಅತೀವ ಆಸಕ್ತಿ ತೋರಿದ್ದನಲ್ಲದೆ ಅತ್ಯಂತ ದಕ್ಷವಾದ ಆಡಳಿತ ವ್ಯವಸ್ಥೆಯೊಂದನ್ನು ಆತ ನಿರ್ಮಿಸಿದ್ದ. ಒಂದು ನೌಕಾಪಡೆಯನ್ನು ಆರಂಭಿಸುವ ಆಲೋಚನೆ ಮೊದಲು ಬಂದಿದ್ದು ಟಿಪ್ಪುಗೇ. ಹಾಗೆಯೇ ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲೆ ಪ್ರಭುತ್ವ ಒಡೆತನ, ಬಂದೂಕು, ನಾಡಕೋವಿ, ಗಾಜು ತಯಾರಿಕೆ, ಮುಳ್ಳುಚಮಚೆ, ಕಾಗದ ಮತ್ತು ಸಕ್ಕರೆ ಇಂತಹವುಗಳ ತಯಾರಿಕೆಗೆ ಕಾರ್ಖಾನೆಗಳನ್ನು ಸ್ಥಾಪಿಸುವ ಯೋಜನೆಗಳನ್ನು ಮೊಟ್ಟಮೊದಲು ಹಾಕಿದ್ದು ಟಿಪ್ಪು. ರಾಕೆಟ್‌ಗಳನ್ನು, ಕ್ಷಿಪಣಿಗಳನ್ನು ಬಳಸುವ ಅಪೂರ್ವಯೋಜನೆಗಳನ್ನು ಟಿಪ್ಪು ಹಾಕಿದ್ದ. ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ಕಟ್ಟುವ ಹಾಗೂ ರೇಷ್ಮೆ ಕೈಗಾರಿಕೆ, ಮುತ್ತು ಹವಳ, ಮೀನುಕೈಗಾರಿಕೆ, ಕುಸುರಿ ಕೆಲಸ, ಸಹಕಾರಿ ಬ್ಯಾಂಕ್ ಇವುಗಳೆಲ್ಲವೂ ಟಿಪ್ಪು ಸುಲ್ತಾನನ ಮಹದಾಕಾಂಕ್ಷೆಯ ಯೋಜನೆಗಳು. ಕೈದಿಗಳು ದಂಡ ತೆರುವ ಬದಲಾಗಿ ಹಣ್ಣಿನ ಮರಗಳನ್ನು ಬೆಳೆಸಬೇಕೆಂಬ ಅಭೂತಪೂರ್ವ ನ್ಯಾಯಪದ್ಧತಿಯನ್ನು ಅನುಷ್ಠಾನಗೊಳಿಸಿದ್ದು ಟಿಪ್ಪು. ಟಿಪ್ಪುನ ಸಾಮಾಜಿಕ ಸುಧಾರಣೆಗಳಲ್ಲಿ ಮದ್ಯಪಾನ ನಿಷೇಧ, ಅನಾಥ ಮಕ್ಕಳ ಮಾರಾಟ ನಿಷೇಧ, ಜೀತಗಾರಿಕೆ ನಿಷೇಧ, ತಂಬಾಕು ನಿಷೇಧ ಮತ್ತು ಜೂಜುದಂಧೆಗಳ ನಿಷೇಧ ಇವೆಲ್ಲ ಸೇರಿದ್ದವು. ರೈತರಿಗೆ ಸಾಲಸೌಲಭ್ಯ ಸಿಗುವಂತೆ ಮಾಡಿದ್ದಲ್ಲದೆ ಬೀಳುಭೂಮಿಯಲ್ಲಿ ಕೃಷಿಯನ್ನು ಉತ್ತೇಜಿಸಿದ. ಟಿಪ್ಪುನ ಸುಧಾರಣೆಗಳು ಪ್ರತಿಯೊಂದು ಇಲಾಖೆಯನ್ನೂ ವ್ಯಾಪಿಸಿದ್ದವು. ಅದು ನಾಣ್ಯ ಠಂಕಿಸುವುದಿರಲಿ, ಪಂಚಾಂಗವಿರಲಿ, ತೂಕ, ಅಳತೆ, ಬ್ಯಾಂಕಿಂಗ್ ಮತ್ತು ಹಣಕಾಸು, ಕಂದಾಯ ಮತ್ತು ನ್ಯಾಯಾಂಗ, ಸೇನೆ, ನೌಕಾಪಡೆ ಮತ್ತು ನೈತಿಕತೆ, ಪ್ರತಿಯೊಂದರಲ್ಲೂ ಟಿಪ್ಪು ಪ್ರಗತಿಪರವಾದ ಸುಧಾರಣೆಗಳನ್ನು ಜಾರಿಗೊಳಿಸಿದ್ದ.

ಧಾರ್ಮಿಕ ನೀತಿ


ವಾಸ್ತವದಲ್ಲಿ ಇಂದು ಚಿಂತಕರಲ್ಲಿ ವಾದವಿವಾದದ ಬಿರುಗಾಳಿ ಎಬ್ಬಿಸಿರುವುದು ಟಿಪ್ಪುನ ಧಾರ್ಮಿಕ ನೀತಿ ಏನಾಗಿತ್ತು ಎಂಬದರ ಬಗ್ಗೆ. ಗಾಂಧೀಜಿಯವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಒಮ್ಮೆ ಟಿಪ್ಪು ಹಿಂದೂ-ಮುಸ್ಲಿಂ ಏಕತೆಯ ಪ್ರತೀಕವೆಂದು ಬರೆದಿದ್ದಾರೆ. ಪ್ರಸಿದ್ಧ ಚರಿತ್ರಕಾರ ಬಿ.ಎ.ಸಾಲ್ತರ್ ಭಾರತೀಯ ಇತಿಹಾಸ ಮಹಾಸಮ್ಮೇಳನದಲ್ಲಿ ಹಿಂದೂ ಧರ್ಮದ ರಕ್ಷಕನಾಗಿ ಟಿಪ್ಪು ಸುಲ್ತಾನ ಎಂಬ ಶೀರ್ಷಿಕೆಯಡಿ ಸುದೀರ್ಘ ಪ್ರಬಂಧವೊಂದನ್ನು ಮಂಡಿಸಿದ್ದಾರೆ. ಮತ್ತೊಬ್ಬ ಚಿಂತಕ ಎ. ಸುಬ್ಬರಾಯ ಚೆಟ್ಟಿಯವರು ಹಿಂದೂ ಮಠಗಳಿಗೆ ಮತ್ತು ಹಿಂದೂಗಳಿಗೆ ಟಿಪ್ಪು ನೀಡಿದ ಕೊಡುಗೆಗಳ ಒಂದು ಪಟ್ಟಿಯನ್ನೇ ಮಾಡಿದ್ದಾರೆ. ಮೈಸೂರ್ ಗೆಝೆಟಿಯರ್ ಸಂಪಾದಕರಾದ ಪ್ರಸಿದ್ಧ ಇತಿಹಾಸಕಾರ ಡಾ.ಹಂಡಾ ಅವರು ಟಿಪ್ಪುವಿನಿಂದ ಪ್ರತಿವರ್ಷವೂ ದೇಣಿಗೆ ಪಡೆಯುತ್ತಿದ್ದ 156 ದೇವಸ್ಥಾ..ಳ ಪಟ್ಟಿ... ನೀಡಿದ್ದಾರಲ್ಲದೆ ಶೃಂಗೇರಿಯ ಮಠಾಧೀಶ ಶಂಕರಾಚಾರ್ಯರಿಗೆ ಟಿಪ್ಪು ಬರೆದಿದ್ದ 30 ಪತ್ರಗಳ ಪ್ರತಿಗಳನ್ನೂ ನೀಡಿದ್ದಾರೆ. ಶೃಂಗೇರಿಯ ಶಾರದಾಮಠದ ಮೂರ್ತಿಯನ್ನು ಪುನಃಸ್ಥಾಪಿಸಲು ಟಿಪ್ಪು ದೇಣಿಗೆ ನೀಡಿದ್ದ. ಶ್ರೀರಂಗಪಟ್ಟಣದ ದೇವಸ್ಥಾನವು ಟಿಪ್ಪು ಸುಲ್ತಾನನ ಅರಮನೆಗೆ ಕೂಗಳತೆಯ ದೂರದಲ್ಲಿದೆ. ಅಲ್ಲಿ ದೇಗುಲದ ಘಂಟಾನಾದ ಮತ್ತು ಮಸೀದಿಯ ಪ್ರಾರ್ಥನೆಗಳೆರಡನ್ನೂ ಸಮಾನಗೌರವದಿಂದ ಟಿಪ್ಪು ಕೇಳಿಸಿಕೊಳ್ಳುತ್ತಿದ್ದ. ಟಿಪ್ಪುನ ಆಡಳಿತಾಂಗದ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದು ಹಿಂದೂ ಅಧಿಕಾರಿಗಳೇ. ಕಂದಾಯ ಮಂತ್ರಿಯಾಗಿ ಪೂರ್ಣಯ್ಯ, ಹಣಕಾಸು ಮಂತ್ರಿಯಾಗಿ ದಿವಾನ್ ಕೃಷ್ಣರಾವ್, ಬಂದರು ಮತ್ತು ಪೊಲೀಸ್ ಇಲಾಖೆಯ ಉಸ್ತುವಾರಿ ಮಂತ್ರಿಯಾಗಿ ಶಾಮರಾವ್ ಇದ್ದರಲ್ಲದೆ ರಂಗ ಐಯಂಗಾರ್, ನರಸಿಂಗ ಐಯಂಗಾರ್ ರಂತವರು ಉನ್ನತ ಹುದ್ದೆಗಳಲ್ಲಿದ್ದರು. ಮಂದರಾಸಿನಲ್ಲಿ ಟಿಪ್ಪು ಸರ್ಕಾರದ ರಾಯಭಾರಿಯಾಗಿದ್ದವರು ಶ್ರೀನಿವಾಸ ರಾವ್. ಪುಣೆಯಲ್ಲಿ ಅಪ್ಪಾಜಿ ರಾಮ ಮತ್ತು ದೆಹಲಿಯಲ್ಲಿ ಮೂಲಚಂದ್ ಇದ್ದರು. ಟಿಪ್ಪುನ ಆಪ್ತ ಸಹಾಯಕನಾಗಿದ್ದುದು ಸುಬ್ಬಾರಾವ್. ಅವರ ನಂಬಿಗಸ್ಥರಾಗಿದ್ದುದು ನಾಯಕ ರಾವ್ ಮತ್ತು ನಾಯಕ ಸಂಗನ. ನಾರಾಣಯ್ಯ ಎಂಬುವವರು ಟಿಪ್ಪುನ ಮುನ್ಷಿಯಾಗಿದ್ದರು. ಕೊಡಗಿನಲ್ಲಿ ನಾಗಪ್ಪಯ್ಯರನ್ನು ಫೌಜ್ದಾರ್ ಆಗಿ ನೇಮಿಸಿದ್ದ ಟಿಪ್ಪು, ಟಿಪ್ಪು ಸೇನೆಯ ಒಂದು ದಳದ ದಳಪತಿಯಾಗಿ ಹರಿಸಿಂಗ್ ಎಂಬುವವರಿದ್ದರು. ಹಾಗೆಯೇ ಟಿಪ್ಪು ಸೇನೆಯ 3000 ಕುದುರೆಗಳ ಅಶ್ವದಳದ ದಳಪತಿಯಾಗಿದ್ದುದು ಶಿವಾಜಿ ಎಂಬ ಮರಾಠ. ಕೇರಳದ ನಾಯರ್‌ಗಳಿಗೆ, ಮಂಗಳೂರಿನ ಕ್ರಿಶ್ಚಿಯನ್ನರಿಗೆ ಮತ್ತು ಮಡಿಕೇರಿಯ ಕೊಡವರಿಗೆ ಟಿಪ್ಪು ಕ್ರೂರಿಯಾಗಿ ಕಂಡುಬಂದಿದ್ದರೆ, ಆತನು ಮಾಪಿಳ್ಳೆ ಮುಸ್ಲಿಮರನ್ನಾಗಲೀ, ಕಡಪ ಮತ್ತು ಕರ್ನೂಲುಗಳ ಮುಸ್ಲಿಂ ನವಾಬರನ್ನಾಗಲಿ ಸುಮ್ಮನೆ ಬಿಟ್ಟಿರಲಿಲ್ಲ. ಟಿಪ್ಪು ಮರಾಠರಿಗಿಂತ ಹೆಚ್ಚು ಕಿಡಿಕಾರುತ್ತಿದ್ದುದು ಹೈದರಾಬಾದಿನ ನಿಜಾಮನ ಮೇಲೆ. ರಾಜಗೃಹಗಳ ಒಂದು ವಿಭಾಗವನ್ನು ಬ್ರಾಹ್ಮಣರಿಗೆಂದೇ ಮೀಸಲಿರಿಸಿದ್ದ. ಸಿರಿಯಾದ ಕ್ಯಾಥೊಲಿಕ್ ಧರ್ಮಾನುಯಾಯಿಗಳಾಗಿದ್ದ ಅರ್ಮೇನಿಯನ್ನರಿಗೆ ದಕ್ಷಿಣ ಕನ್ನಡಕ್ಕೆ ಬಂದು ನೆಲೆಯೂರಲು ಪ್ರೋತ್ಸಾಹ ನೀಡಿದ್ದ. ಕಾಂಚೀವರಂನ ದೇವಸ್ಥಾನದ ನಿರ್ಮಾಣಕಾರ್ಯ ಪೂರೈಸಲು 10,000 ಹನ್ನಳ ದೇಣಿಗೆ ನೀಡಿದ್ದಲ್ಲದೆ ಅದರ ನಿರ್ಮಾಣ ಪೂರ್ಣಗೊಂಡೊಡನೆ ಅದರ ತೇರಿನಲ್ಲಿಯೂ ಪಾಲ್ಗೊಂಡಿದ್ದ. ದಿಂಡಿಗಲ್‌ನಲ್ಲಿ ನಡೆಸಿದ ಒಂದು ಸೇನಾದಾಳಿಯಲ್ಲಿ ತನ್ನ ಸೈನಿಕರಿಗೆ ದಕ್ಷಿಣ ದಿಕ್ಕಿನಿಂದ ಗುಂಡುಹಾರಿಸದಿರಲು ಆದೇಶಿಸಿದ್ದ. ಅದಕ್ಕೆ ಕಾರಣ ಅಲ್ಲಿ ದೇವಸ್ಥಾನವಿದ್ದುದೇ ಆಗಿತ್ತು. ಹೀಗಾಗಿ ಟಿಪ್ಪುವನ್ನು ಒಬ್ಬ ಮತಾಂಧ ಎಂದು ಕರೆಯುವುದು ಅತ್ಯಂತ ತಪ್ಪಾಗುತ್ತದೆ. ಟಿಪ್ಪುನ ಕ್ರೂರತೆಯೇನಿದ್ದರೂ ಬ್ರಿಟಿಷರೊಂದಿಗೆ ಕೈಜೋಡಿಸಿ ತನ್ನ ವಿರುದ್ಧ ನಿಂತವರ ಮೇಲೆ ಮಾತ್ರ ಇತ್ತು. ಹೀಗಾಗಿ ಆತನ ಒರಟುತನ ಕೇವಲ ರಾಜಕೀಯಪ್ರೇರಿತವಾಗಿತ್ತೇ ಹೊರತು ಧರ್ಮಪ್ರೇರಿತವಾಗಿರಲಿಲ್ಲ.

ಅಂತಿಮವಾಗಿ ಟಿಪ್ಪುವಿನ ಕೈಯಲ್ಲಿ ರಾಜಕೀಯ ಕಾರಣಗಳಿಗಾಗಿ ಬಹಳ ಯಾತನೆಗೊಳಗಾದ ಕ್ರೈಸ್ತ ಸಮುದಾಯದ ಒಬ್ಬ ವ್ಯಕ್ತಿಯ ಅಭಿಪ್ರಾಯವನ್ನೂ ಇಲ್ಲಿ ದಾಖಲಿಸಿದರೆ ಮತ್ತಷ್ಟು ಸ್ಪಷ್ಟತೆ ಸಿಗುತ್ತದೆ. ಪ್ರಾಕ್ಸಿ ಫರ್ನಾಂಡಿಸ್ ಹೀಗೆ ಬರೆಯುತ್ತಾರೆ: "ಟಿಪ್ಪು ಪರಿಕಲ್ಪನೆಯ ರಾಷ್ಟ್ರಪ್ರಭುತ್ವ, ಪ್ರಜೆಗಳೆಡೆ ಸರ್ಕಾರದ ಹೊಣೆಗಾರಿಕೆ, ಊಳಿಗಮಾನ್ಯ ಮಧ್ಯವರ್ತಿ ವರ್ಗದ ನಿರ್ಮೂಲನೆ, ಒಂದು ಪ್ರಮಾಣಬದ್ಧ ಕಾನೂನು ವ್ಯವಸ್ಥೆಯನ್ನೂ ರೂಪಿಸುವಲ್ಲಿ ಆತನ ಪ್ರಯತ್ನ ಹಾಗೂ ಆತನ ರೂಪಿಸಿದ ನಾಗರಿಕಸೇವೆಗಳು, ಎಲ್ಲವೂ ಆಧುನಿಕ ಪರಿಕಲ್ಪನೆಗಳೇ ಆಗಿದ್ದವು. ಅವು ಆತನ ಕಾಲವನ್ನೂ ಮೀರಿದ ಚಿಂತನೆಗಳಾಗಿದ್ದರಿಂದ ಆತನ ಸುತ್ತಲಿದ್ದ ಅನೇಕರಿಗೆ ಅವನ್ನು ಅರಗಿಸಿಕೊಳ್ಳಲಾಗಲೀ, ಒಪ್ಪಿಕೊಳ್ಳಲಾಗಲೀ ಆಗಿರಲಿಲ್ಲ."

■ ಪ್ರೊ. ಬಿ.ಶೇಕ್ ಅಲಿ



ಟಿಪ್ಪು ಕ್ರೂರಿಯಾಗಿದ್ದರೆ ಹಾಲೇರಿ ರಾಜರು ದಯಾಳುಗಳಾಗಿದ್ದರೆ?



ಟಿಪ್ಪು ಸುಲ್ತಾನ್ ಜನ್ಮ ದಿನಾಚರಣೆ ಒಂದು ವಿವಾದದ ವಿಚಾರವನ್ನಾಗಿಸಿದ್ದು ಸಂಘ ಪರಿವಾರ. ಇತಿಹಾಸದ ಬಗ್ಗೆ ಸಣ್ಣ ಪ್ರಮಾಣದ ತಿಳಿವಳಿಕೆಯೂ ಇಲ್ಲದೆ, ಅಧ್ಯಯನವನ್ನೂ ನಡೆಸದೆ, ಆತನೊಬ್ಬ ಮತಾಂಧ ಹಾಗೂ ಮತಾಂತರಿ ಎನ್ನುವುದರ ಜೊತೆಗೆ ಆತ ಕ್ರೂರಿ ಎಂದು ಕೂಡ ಬಿಂಬಿಸಿ ಆತನ ಜನ್ಮ ದಿನಾಚರಣೆ ಮಾಡಬಾರದು ಎಂದು ಕೊಡಗು ಜಿಲ್ಲೆಯಲ್ಲಿ ಅನವಶ್ಯಕವಾದ ಗೊಂದಲಕ್ಕೆ ಕಾರಣರಾದವರು ಜಿಲ್ಲೆಯ ಇಬ್ಬರು ಬಿಜೆಪಿ ಶಾಸಕರು ಹಾಗೂ ಸಂಸದ.

ರಾಜ್ಯ ಸರಕಾರ ಟಿಪ್ಪು ಜನ್ಮ ದಿನಾಚರಣೆಯನ್ನು ಸರಕಾರಿ ಕಾರ್ಯಕ್ರಮವಾಗಿ ಆಚರಣೆ ಮಾಡಲು ಘೋಷಣೆ ಮಾಡುತ್ತಿದ್ದಂತೆ ಬಿಜೆಪಿ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಹಾಗೂ ಸಂಸದ ಪ್ರತಾಪ್ ಸಿಂಹ ಮಡಿಕೇರಿಯಲ್ಲಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ, ಟಿಪ್ಪು ಜನ್ಮ ದಿನಾಚರಣೆಯನ್ನು ಕರಾಳದಿನವನ್ನಾಗಿ ಆಚರಿಸಲಾಗುವುದು ಎನ್ನುವುದರ ಜೊತೆಯಲ್ಲಿ ಸ್ವಯಂಪ್ರೇರಿತ ಬಂದ್‌ಗೆ ಕರೆ ನೀಡಿದ್ದರು.

ಇದಕ್ಕೆ ಧ್ವನಿಗೂಡಿಸಿದ್ದು ಹಿಂದೂ ಜಾಗರಣ ವೇದಿಕೆಯ ಸಂಚಾಲಕ ಜಗದೀಶ್ ಕಾರಂತ. ಕೊಡಗು ಜಿಲ್ಲೆಯಲ್ಲಿ ಹಿಂದಿನಿಂದಲೂ ಬೆಂಕಿಹಚ್ಚಿಹೋಗುವ ಸ್ವಭಾವ ಜಗದೀಶ್ ಕಾರಂತರಿಗೆ ಇದೆ. "ಟಿಪ್ಪುವನ್ನು ವೈಭವೀಕರಿಸಲಾಗುತ್ತಿದೆ ಮತ್ತು ಬುದ್ಧಿಜೀವಿಗಳು ಹಾಗೂ ಪ್ರಗತಿಪರ ಚಿಂತಕರು ಎನ್ನುವವರು ಈ ರೀತಿ ಮಾಡುತ್ತಿದ್ದಾರೆ. ದೇವಟಿಪರಂಬಿನಲ್ಲಿ ನರಮೇಧ ನಡೆಸಿದ್ದಾನೆ. ಹಾಗಾಗಿ ಈ ಆಚರಣೆ ಮಾಡಲು ಸರಕಾರ ಹೊರಟಿರುವುದರಿಂದ ಕೊಡಗಿನ ಜನತೆ ಬೀದಿಗಿಳಿಯುವಂತೆ ಸರಕಾರ ಮಾಡಿದೆ" ಎನ್ನುವುದರ ಮೂಲಕ ಕಿಡಿ ಹತ್ತಿಸಿ ಹೋದದ್ದು ಜಗದೀಶ್ ಕಾರಂತ್.


ಸಂಸದ ಪ್ರತಾಪ ಸಿಂಹ "ಕೊಡಗಿನ ಪಾಲಿಗೆ ಕರಾಳ ವ್ಯಕ್ತಿತ್ವ ಹೊಂದಿದ್ದ ಟಿಪ್ಪು ಸುಲ್ತಾನನ ಜನ್ಮದಿನಾಚರಣೆಯನ್ನು ನಡೆಸಲು ಬಿಡುವುದಿಲ್ಲ. ಆತನನ್ನು ದೇಶಪ್ರೇಮಿ ಎಂದು ಹೇಳುವುದು ಇತಿಹಾಸಕ್ಕೆ ಮಾಡುತ್ತಿರುವ ಅಪಮಾನ. ಮುಖ್ಯಮಂತ್ರಿಗಳ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ ಇದು" ಎಂದು ಹೇಳಿ "ರಾಜ್ಯದಲ್ಲಿ ಹಲವರ ಜನ್ಮ ದಿನಾಚರಣೆಗೆ ಕೆಲವೊಂದು ಆದರ್ಶಗಳು ಇವೆ. ಆದರೆ ಟಿಪ್ಪು ಜನ್ಮ ದಿನಾಚರಣೆಗೆ ಯಾವ ಆದರ್ಶ ಇದೆ" ಎಂದು ಪ್ರಶ್ನಿಸಿದ್ದರು.

ಹೀಗೆ ಮಾಡುವುದರ ಮೂಲಕ ಸರಕಾರ ಶಾಂತಿಯುತವಾಗಿ ಮಾಡಲು ಹೊರಟಿದ್ದ ಟಿಪ್ಪು ಜನ್ಮ ದಿನಾಚರಣೆಗೆ ಕೋಮು ಸ್ವರೂಪವನ್ನು ನೀಡಿದ ಕೀರ್ತಿ ಜಿಲ್ಲೆಯ ಬಿಜೆಪಿ ಜನಪ್ರತಿನಿಧಿಗಳಿಗೆ ಸಲ್ಲುತ್ತದೆ. ಕೊಡಗಿನಲ್ಲಿ ಅದರಲ್ಲಿಯೂ ವಿಶೇಷವಾಗಿ ಮಡಿಕೇರಿಯಲ್ಲಿ ನಡೆದಂತಹ ಗಲಭೆಗೆ ಸರಕಾರದ ವೈಫಲ್ಯಗಳು ಹೇಗೆ ಕಾರಣವೋ, ಅದಕ್ಕಿಂತಲೂ ಹೆಚ್ಚು ಬಿಜೆಪಿ ಮತ್ತು ಸಂಘ ಪರಿವಾರ ಕಾರಣವಾಗಿದೆ.

ಕೊಡಗಿನಲ್ಲಿ ಟಿಪ್ಪು ಜನ್ಮ ದಿನಾಚರಣೆಗೆ ಕೊಡವ ಸಮಾಜಗಳು ಕೂಡ ವಿರೋಧವನ್ನು ವ್ಯಕ್ತಪಡಿಸಿದ್ದವು. ಹೀಗೆ ಕೊಡವ ಸಮಾಜಗಳು ವಿರೋಧ ವ್ಯಕ್ತಪಡಿಸಲು ಕಾರಣಗಳು ಏನು ಎಂದು ಅವಲೋಕಿಸಿದರೆ ಬಹುತೇಕ ಕೊಡವ ಸಮಾಜದ ಅಧ್ಯಕ್ಷರುಗಳು ಬಿಜೆಪಿಯ ಅಥವ ಸಂಘ ಪರಿವಾರದ ಹಿನ್ನೆಲೆಯುಳ್ಳವರಾದ್ದರಿಂದ ಸಹಜವಾಗಿ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರವೇ ಟಿಪ್ಪುವನ್ನು ಒಬ್ಬ ಸ್ವಾತಂತ್ರ್ಯ ಸೇನಾನಿ ಎನ್ನುವುದರ ಜೊತೆಯಲ್ಲಿ ಆತನನ್ನು ಮೈಸೂರಿನ ಹುಲಿ ಎಂದು ಕರೆದಿದೆ. ಆದರೆ ಚಿಡ್ಡಿಪರ ಸಂಶೋಧಕ ಡಾ| ಚಿದಾನಂದ ಮೂರ್ತಿ ಗರಿಷ್ಠ ಪ್ರಮಾಣದ ಸಂಶೋಧನೆಯನ್ನು ನಡೆಸಿ ಟಿಪ್ಪು ಒಬ್ಬ ಮತಾಂಧ ಎಂದು ಹೇಳಿದ್ದನ್ನೇ ನಂಬಿರುವ ಕೊಡಗು ಜಿಲ್ಲೆಯಲ್ಲಿರುವ ಅಮಾಯಕ ಕೊಡವ ಜನಾಂಗದವರು ಟಿಪ್ಪು ನಿಜವಾಗಿಯೂ ರಾಷ್ಟ್ರದ್ರೋಹಿ ಎಂದು ತೀರ್ಮಾನಿಸಿಕೊಂಡಿದ್ದಾರೆ. ಟಿಪ್ಪು ರಾಷ್ಟ್ರಭಕ್ತನಾಗಿದ್ದ ಎನ್ನುವುದನ್ನು ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ, ಇದಕ್ಕೂ ಕಾರಣವೇನೆಂದರೆ, ಶೇ. 98ರಷ್ಟು ಕೊಡವ ಜನಾಂಗದವರು ಬಿಜೆಪಿಯ ಜೊತೆಯಲ್ಲಿ ಗುರುತಿಸಿಕೊಂಡಿರುವುದಾಗಿದೆ.


ಚರಿತ್ರೆಯ ಪ್ರಕಾರ ಟಿಪ್ಪು ಕೊಡಗಿನ ಮೇಲೆ ದಂಡೆತ್ತಿ ಬಂದದ್ದು ನಿಜ. ಹಾಗೆ ದಂಡೆತ್ತಿ ಬಂದಾಗ ಆತ ಯುದ್ಧದ ಸಂದರ್ಭದಲ್ಲಿ ಕೊಡಗು ರಾಜರ ಸೈನಿಕರನ್ನು ಹತ್ಯೆ ಮಾಡಿದ್ದೂ ನಿಜ. ಕೊಡಗು ರಾಜರ ಸೈನಿಕರೂ ಟಿಪ್ಪುವಿನ ಸೈನಿಕರನ್ನು ಹತ್ಯೆ ಮಾಡಿದ್ದೂ ಅಷ್ಟೇ ನಿಜ. ಅದು ಯುದ್ಧ ನೀತಿ. ಅಲ್ಲಿ ಸೈನಿಕ ಯಾವ ಜನಾಂಗಕ್ಕೆ ಸೇರಿದವನು ಎಂಬ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಕೊಡಗು ರಾಜರ ವಿರುದ್ಧ ಟಿಪ್ಪು ಯುದ್ಧ ಸಾರಲು ಕಾರಣ, ಕೊಡಗು ರಾಜರು ಬ್ರಿಟಿಷರ ಪರವಾಗಿ ಇದ್ದದ್ದು. ಬ್ರಿಟಿಷರನ್ನು ಓಡಿಸಬೇಕು ಎಂಬುದಷ್ಟೇ ಟಿಪ್ಪುವಿನ ನಿಲುವಾಗಿತ್ತು. ಅದಕ್ಕಾಗಿ ಆತ ಫ್ರೆಂಚರ ಸಹಕಾರವನ್ನೂ ಪಡೆಯಲು ಯತ್ನಿಸಿದ್ದ. ತನ್ನ ಪಕ್ಕದ ರಾಜ್ಯವು ತನ್ನ ಶತ್ರುವಿಗೆ ಬೆಂಬಲ ನೀಡುವುದಾದರೆ ಅದನ್ನು ಮಟ್ಟ ಹಾಕುವುದು ರಾಜಧರ್ಮವಾಗುತ್ತದೆ. ಅದನ್ನೇ ಟಿಪ್ಪು ಮಾಡಿದ್ದಾನೆ. ತನ್ನ ಸಾಮ್ರಾಜ್ಯವನ್ನು ವಿಸ್ತಾರ ಮಾಡುವ ಉದ್ದೇಶದಿಂದ ಟಿಪ್ಪು ಕೊಡಗಿನ ಮೇಲೆ ದಾಳಿ ಮಾಡಿರಲಿಲ್ಲ. ಶ್ರೀರಂಗಪಟ್ಟಣಕ್ಕೆ ಬ್ರಿಟಿಷ್ ಸೈನ್ಯವನ್ನು ಕೇರಳದಿಂದ ಸಾಗಿಸಲು ಕೊಡಗಿನ ರಾಜರು ಅವಕಾಶವನ್ನು ಮಾಡಿಕೊಟ್ಟಿದ್ದರು. ಆ ಸೈನ್ಯವು ಈಗ ಇರುವ ವಿರಾಜಪೇಟೆಯಲ್ಲಿ ತಂಗಿತ್ತು. ಅದರ



ಸವಿನೆನಪಿಗಾಗಿ ವಿರಾಜಪೇಟೆ ನಗರ ಸ್ಥಾಪನೆಯಾಯಿತು ಎನ್ನುವುದು ಇತಿಹಾಸ.

ಇದನ್ನು ಸಂಘ ಪರಿವಾರದವರು ಟಿಪ್ಪು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಮತ್ತು ಸಂರಕ್ಷಿಸಿಕೊಳ್ಳಲು ಮಾಡಿದ ಯುದ್ಧ; ಇದು ಸ್ವಾತಂತ್ರ್ಯ ಹೋರಾಟವಲ್ಲ ಎಂದು ವ್ಯಾಖ್ಯಾನಿಸಲು ಹಲವು ರೀತಿಯ ಸರ್ಕಸ್ ನಡೆಸಿದರೂ ವಿಫಲರಾಗಿದ್ದಾರೆ. ಆದರೂ ಗೋಬೆಲ್ಸ್ ಮಾದರಿಯಲ್ಲಿ ಮತ್ತೆ ಮತ್ತೆ ಅದೇ ಸುಳ್ಳುಗಳನ್ನು ಹೇಳಿ ಸತ್ಯವನ್ನಾಗಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಟಿಪ್ಪು ಹಿಂದೂಗಳನ್ನು ಕೊಂದಿದ್ದಾನೆ ಮತ್ತು



ಕೊಡವರನ್ನು ಕೊಂದಿದ್ದಾನೆ ಎಂದು ಸಂಘ ಪರಿವಾರದವರು ಹೇಳುತ್ತಾರೆ. ಆದರೆ ಲೆಫ್ಟಿನೆಂಟ್ ಕರ್ನಲ್ ಕೆ.ಸಿ.ಪೊನ್ನಪ್ಪ 'ಅ ಸ್ಟಡಿ ಆಫ್ ದಿ ಆರಿಜಿನ್ಸ್ ಆಫ್ ಕೋರ್ಗ್ಸ್' ಎಂಬ ಕೃತಿಯಲ್ಲಿ ಈ ರೀತಿ ಬರೆದಿದ್ದಾರೆ: "ಹಾಲೇರಿ ಲಿಂಗಾಯತರು ಕೊಡಗಿನ ರಾಜರಾದಾಗ ಅವರು ಕೊಡವರನ್ನು ತಮ್ಮ ಯುದ್ಧದಲ್ಲಿ ಉಪಯೋಗಿಸಿಕೊಂಡರಲ್ಲದೆ, ಭಯ ಮತ್ತು ದಬ್ಬಾಳಿಕೆಯ ಮೂಲಕ ಕೊಡವರನ್ನು ಅಡಿಯಾಳುಗಳನ್ನಾಗಿಸಿಕೊಂಡಿದ್ದರು. ವೈಯಕ್ತಿಕ ಪ್ರಗತಿಗೆ ದೊರೆಗಳ ಮರ್ಜಿಯಲ್ಲಿರುವಂತೆ ಮಾಡಿದರು. ಸ್ವಾಭಿಮಾನ ಮತ್ತು ಸ್ವತಂತ್ರ ಪ್ರವೃತ್ತಿಯನ್ನು ತೋರಿದವರನ್ನು ಅವರು ನಿರ್ದಯವಾಗಿ ದಮನಿಸುತ್ತಿದ್ದರು. ಕೊಡವರನ್ನು ತೆಪ್ಪಗಿರಿಸಲು ಹಾಲೇರಿ ರಾಜರು ಒಕ್ಕಲಿಗ, ಬಂಟ ಮತ್ತು ಲಿಂಗಾಯತರ ಸಶಸ್ತ್ರ ಪಡೆಗಳನ್ನು ನೇಮಿಸಿಕೊಂಡಿದ್ದರು. ಹಾಲೇರಿ ರಾಜರ ಸೈನ್ಯದಲ್ಲಿ ಕೊಡವರೇ ಅಧಿಕ ಸಂಖ್ಯೆಯಲ್ಲಿದ್ದರೂ ಹಾಲೇರಿ ರಾಜರು ಕೊಡವರನ್ನು ಕೊಲ್ಲುತ್ತಿದ್ದರು, ಅವರ ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಿದ್ದರು. ಆ ಮೂಲಕ ಅವರು ಕೊಡವರ ಜನಸಂಖ್ಯೆಯನ್ನು ಕುಂಠಿತಗೊಳಿಸಿದ್ದರು. ಎರಡನೆ ದೊಡ್ಡವೀರ ರಾಜ 5,000 ಕೊಡವರನ್ನು ಕೊಂದು ಹಾಕಿದ್ದರೆ, ಆತನ ನಂತರ ಪಟ್ಟಕ್ಕೇರಿದ ಎರಡನೆ ಲಿಂಗರಾಜ (1811-20) ಎರಡು ಸಾವಿರ ಕೊಡವರನ್ನು ಕೊಂದುಹಾಕಿಸಿದ. ಅವನ ನಂತರ ರಾಜನಾದ ಚಿಕವೀರರಾಜ, ಅತಿ ಕ್ರೂರಿಯೂ ಕುತಂತ್ರಿಯೂ ಆಗಿದ್ದು ಮೂರು ಸಾವಿರ ಕೊಡವರನ್ನು ಕೊಂದುಹಾಕಿದ. ಹೀಗೆ 1807ರಿಂದ 1834ರ ವರೆಗಿನ ಅವಧಿಯಲ್ಲಿ ಹತ್ತು ಸಾವಿರ ಕೊಡವರು ಕೊಲ್ಲಲ್ಪಟ್ಟರು. ಇದರ ಜೊತೆಗೆ 1765-1799 ನಡುವೆ ಹೈದರ್ ಮತ್ತು [ಟಿಪ್ಪು] ಸುಮಾರು ಹದಿನೈದು ಸಾವಿರ ಕೊಡವರ[ನ್ನು] ಕೊಂದುಹಾಕಿದರು."

ಇದು ಕೊಡವ ಜನಾಂಗದ ವ್ಯಕ್ತಿಯೇ ಬರೆದ ಕೃ[ತಿಯ] ಅಂಶಗಳು. ಹಾಗಾಗಿ ಕೊಡಗು ರಾಜರ ಪರವಾಗಿ ಇದ್ದ[...] ಕೊಡವರನ್ನೂ ಕೊಡಗಿನ ರಾಜ ಕೊಂದಿದ್ದ ಎಂಬು[ದನ್ನು] ಕೊಡವ ಬರಹಗಾರರೇ ಒಪ್ಪಿಕೊಂಡಿದ್ದಾರೆ. ಆದರೂ [...] ಮುಸಲ್ಮಾನ ಎಂಬ ಕಾರಣಕ್ಕಾಗಿ ಮಾತ್ರ ಆತನನ್ನು ಕ[...] ಮತ್ತು ಕೊಲೆಗಡುಕ ಎಂದೆಲ್ಲಾ ಹಿಂದೂತ್ವವಾದಿ[ಗಳು] ಬಣ್ಣಿಸಿದ್ದಾರೆ. ಜೊತೆಗೆ ಕೊಡಗಿನ ಲಿಂಗಾಯತ ರಾ[ಜರು] ಯುದ್ಧವಿಲ್ಲದೆಯೇ ಕೊಡವ ಸೈನಿಕರನ್ನು ಕೊಂದಿರುವು[ದನ್ನು] ಜಾಣತನದಿಂದ ಮುಚ್ಚಿಡುತ್ತಿದ್ದಾರೆ. ಟಿಪ್ಪು ಸೈನಿಕ[...] ಸದೆಬಡಿದದ್ದು ಕೊಲೆಯಾದರೆ, ಲಿಂಗಾಯತ ರಾ[ಜರು] ಮಾಡಿದ್ದು ಏನು ಎಂಬುದರ ಬಗ್ಗೆ ಕೊಡವರು ಸ[ಂಘ] ಪರಿವಾರವನ್ನು ಪ್ರಶ್ನಿಸಬೇಕಿದೆ.

ಕೊಡಗಿನಲ್ಲಿ ಕೊಡವ ಮುಸ್ಲಿಮರು ಅಥವ ಕೊ[...] ಮಾಪಿಳ್ಳೆಗಳು ಎನ್ನುವ ಒಂದು ವರ್ಗ ಇದೆ. ಇ[...] ಟಿಪ್ಪು ಸುಲ್ತಾನನಿಂದ ಮತಾಂತರಕ್ಕೆ ಒಳಗಾದವರು ಎ[...] ಪ್ರಚಾರ ಮಾಡಲಾಗಿದೆ. ಟಿಪ್ಪು ಸುಲ್ತಾನ್ ಯುದ್ಧಕ್ಕೆ ಬಂ[...] ಒಂದಷ್ಟು ಸೈನಿಕರನ್ನು ಶ್ರೀರಂಗಪಟ್ಟಣಕ್ಕೆ ಸೆರೆಯಾಳುಗ[ಳಾಗಿ] ಸಾಗಿಸಿದ್ದ. ಆ ಪೈಕಿ ಕೆಲವರು ಶ್ರೀರಂಗಪಟ್ಟಣ ಜೈಲಿನ[ಿಂದ] ತಪ್ಪಿಸಿಕೊಂಡು ಕೊಡಗಿಗೆ ವಾಪಸ್ ಬಂದರು. ಆ[...] ಅವರು ಮತಾಂತರ ಹೊಂದಿದ್ದಾರೆ ಎಂದು ಸ್ಥಳೀಯ[...] ಭಾವಿಸಿದ್ದರಿಂದ ಅವರನ್ನು ಅವರ ಮನೆಯವ[ರು] ಸೇರಿಸಿಕೊಳ್ಳಲಿಲ್ಲ. ಮತಾಂತರ ಹೊಂದಿದವರನ್ನು ತಮ್ಮ[...] ಮತ್ತೆ ವಾಪಾಸು ತೆಗೆದುಕೊಳ್ಳಲು ಸಾಧ್ಯವಿಲ್ಲ ಎ[...] ಧೋರಣೆಯನ್ನು ಅವರು ತಾಳಿದ್ದರಿಂದ, ಕೊಡಗಿನ ರಾಜ[...] ಅವರಿಗೆ ಆಶ್ರಯ ನೀಡುವ ಜವಾಬ್ದಾರಿ ಬಿದ್ದಿತ್ತು. ([...] ಘರ್ ವಾಪಸಿ ಕಾರ್ಯಕ್ರಮ ಇರಲಿಲ್ಲ! ತಮ್ಮ ಸಹೋದ[...] ಒಂದು ವೇಳೆ ಬಲವಂತವಾಗಿ ಮತಾಂತರ ಹೊಂದಿ[...] ಅವರನ್ನು ತಮ್ಮ ಮನೆಗೆ ಸೇರಿಸಿಕೊಳ್ಳುವ ಹೃದ[ಯ] ವೈಶಾಲ್ಯತೆಯು ಇರಲಿಲ್ಲ) ಹಾಗಾಗಿ ಕೊಡಗಿನ ರ[...] ಅವರಿಗೆಲ್ಲಾ ಕೊಡಗಿನ ಕೆಲವು ಭಾಗಗಳಲ್ಲಿ ಕೃಷಿ ಮಾಡ[...] ಜಮ್ಮಾ ಭೂಮಿಯನ್ನು ನೀಡಿ, ಕೇರಳದಿಂದ ಮು[...] ಧರ್ಮ ಗುರುಗಳನ್ನು ಕರೆಸಿ, ಮತಾಂತರ ಮಾಡಿದ್ದ ಹಾ[...] ಕೇರಳದ ಮುಸ್ಲಿಂ ಹೆಣ್ಣು ಮಕ್ಕಳ ಜೊತೆಯಲ್ಲಿ ವಿವಾಹವ[...] ಮಾಡಿಸಿದ್ದ ಅಥವ ಮಾಡಿಕೊಂಡಿದ್ದರು. ಇದರಿಂದ[...] ಕೊಡವ ಮುಸ್ಲಿಮರು ಎಂಬ ಜನಾಂಗ ಬಂತು ಎನ್ನುವ[...] ಒಂದು ವಾದ. ಟಿಪ್ಪು ಸುಲ್ತಾನ ಇವರೆಲ್ಲರಿಗೆ ಬಲವಂತವ[ಾಗಿ] ಮತಾಂತರ ಮಾಡಿದ್ದನೋ ಅಥವಾ ಅವ[...] ಅನಿವಾರ್ಯವಾಗಿ ಕೊಡಗಿನ ರಾಜನೇ ಅವರು ಇ[...] ಧರ್ಮವನ್ನು ಸ್ವೀಕರಿಸುವಂತೆ ಮಾಡಿದ್ದನೋ, ಅದರ [...] ಸ್ಪಷ್ಟತೆ ಇಲ್ಲ. ಅದೇನೇ ಆದರೂ ಈಗ ಕೊಡಗಿನಲ್ಲಿರ[ುವ] ಮುಸಲ್ಮಾನರು ಟಿಪ್ಪು ವಿರುದ್ಧ ಯಾವುದೇ ರೀತಿ[ಯ] ಆಕ್ಷೇಪವನ್ನು ಮಾಡುತ್ತಿಲ್ಲ ಎಂಬುದು ಮುಖ್ಯ.

ಟಿಪ್ಪು ಸುಲ್ತಾನ್ ದಿನಾಚರಣೆ ಸರಕಾರಿ ಕಾರ್ಯಕ್ರ[ಮ] ಹಾಗಾಗಿ ಸ್ಥಳೀಯ ಕಾಂಗ್ರೆಸ್ ಪಕ್ಷ ಇದರ ಪರವ[ಾಗಿ] ನಿಲ್ಲಬೇಕಾಗಿತ್ತು. ಅದು ಹಾಗೆ ಮಾಡಲಿಲ್ಲ, ಕಾಂಗ್ರೆಸ[್] ಬೆಂಬಲಿಸುವ ಅಲ್ಪಸಂಖ್ಯಾತ ವರ್ಗದವರು ಕಾಂಗ್ರೆ[ಸ್] ವಿರುದ್ಧ ಹರಿಹಾಯ್ದ ನಂತರವಷ್ಟೇ ಜಿಲ್ಲಾ ಕಾಂಗ್ರೆಸ್ ಸಮ[ಿತಿ] ಅರೆಮನಸ್ಸಿನಿಂದ ಪ್ರತಿಕ್ರಿಯಿಸಿತ್ತು. ಕೊಡವ ಜನಾಂಗ[ಕ್ಕೆ] ಸೇರಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಪ್ರದೀ[ಪ್] ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲೇ ಇಲ್ಲ. ಕೊ[ಡವ] ಜನಾಂಗದವರಾಗಿ ಮಾತನಾಡಿದವರೆಂದರೆ ಎ.ಕೆ. ಸುಬ್ಬ[ಯ್ಯ] ಮಾತ್ರ.

ಸುಬ್ಬಯ್ಯ ತಮ್ಮ ಎಂದಿನ ಶೈಲಿಯಲ್ಲಿ ಸಂ[ಘ] ಪರಿವಾರದ ಕುತಂತ್ರವನ್ನು ಜಾಡಿಸಿದ್ದಲ್ಲದೇ "ಕೊಡವರ[ನ್ನು] ಟಿಪ್ಪು ಹತ್ಯೆ ಮಾಡಲಿಲ್ಲ, ಯುದ್ಧ ನಡೆದಾಗ ಉಭ[ಯ] ಕಡೆಯವರು ಸತ್ತಿದ್ದಾರೆ. ಕೊಡವರು ಚರಿತ್ರೆ [...] ಪ್ರತಿಕ್ರಿಯಿಸಬೇಕು" ಎಂಬ ಬುದ್ಧಿವಾದದ ಮಾತ[ನ್ನು] ಹೇಳಿದರು. ಜೊತೆಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಮ[...]

ಕ್ರೂರಿ ಯಾರು?



ಟಿಪ್ಪು ಸುಲ್ತಾನನನ್ನು ಕ್ರೂರಿ ಎಂದು ಕರೆಯುವ ಪ್ರತಾಪ ಸಿಂಹನ ಒಂದು ಸಣ್ಣ ಸ್ಯಾಂಪಲ್ ಓದುಗರಿಗೆ ಈ ಸಂದರ್ಭದಲ್ಲಿ ನೀಡುವುದು ಅಗತ್ಯವಾಗಿದೆ. ಮಡಿಕೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ನಂತರ, ಮೈಸೂರಿಗೆ ತೆರಳಿ "ಕುರುಬರನ್ನು ಟಿಪ್ಪು ಸುಲ್ತಾನ್ ಕೊಂದಿದ್ದರೆ ಸಿದ್ದರಾಮಯ್ಯ ಟಿಪ್ಪು ಸುಲ್ತಾನ್ ದಿನಾಚರಣೆಯನ್ನು ಆಚರಿಸುತ್ತಿದ್ದರೇ?" ಎಂಬ ಹೇಳಿಕೆಯನ್ನು ನೀಡುವ ಮೂಲಕ, ತಾನು ಎಂತಹ ಚಿಲ್ಲರೆ ವ್ಯಕ್ತಿ ಎಂಬುದನ್ನು ಪ್ರತಾಪ ಸಿಂಹ ಸಾಬೀತು ಮಾಡಿಕೊಂಡಿದ್ದಾರೆ.

ಕೆಲವು ಸಮಯದ ಹಿಂದೆ ಮಡಿಕೇರಿಯಲ್ಲಿ ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಪತ್ರಿಕಾಭವನಕ್ಕೆ ಆಗಮಿಸಿದ್ದ ಪ್ರತಾಪ ಸಿಂಹ ಅಲ್ಲಿ ನೆರೆದಿದ್ದ ಪತ್ರಕರ್ತರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ, ತಾನೊಬ್ಬ ಪತ್ರಕರ್ತನಾಗಿದ್ದರೂ ತಾನು ಸಾಕಷ್ಟು ಅನುಭವವನ್ನು ಪಡೆದಿದ್ದೇನೆ ಎಂದರು. ಜೊತೆಗೆ ತಾನು ಚುನಾವಣೆಗೆ ಸ್ಪರ್ಧಿಸಿದ್ದ ವೇಳೆಯಲ್ಲಿ 'ಲಂಕೇಶ್ ಪತ್ರಿಕೆ' ತನ್ನ ವಿರುದ್ಧ ಎರಡು ಪುಟಗಳ ಲೇಖನವನ್ನು ಬರೆದಿತ್ತು ಎಂದು ಪ್ರಸ್ತಾಪಿಸಿ "ಆ ಲೇಖನವನ್ನು ಓದಿದವರು ನನ್ನ ವಿರುದ್ಧ ಮತ ಚಲಾಯಿಸಿದ್ದರೆ, ನನ್ನ ಪರಿಸ್ಥಿತಿ ಏನಾಗುತ್ತಿತ್ತು?" ಎಂದು ಪ್ರಶ್ನಿಸಿದರಲ್ಲದೆ "ನಾನೀಗ ಪತ್ರಿಕಾ ಮಂಡಳಿಯ ಸದಸ್ಯನಾಗಿದ್ದೇನೆ. ನಾನು ಬಯಸಿದರೆ ಯಾರ ಮೂಲಕವಾದರೂ ಪತ್ರಿಕಾ ಮಂಡಳಿಗೆ ಪುಕಾರು ಕೊಡಿಸಿ ಪತ್ರಿಕೆಯ ಆರ್.ಎನ್.ಐ. ರದ್ದುಪಡಿಸಲು ಸಾಧ್ಯವಿದೆ. ಅದನ್ನು ಅವರು ಅರಿತುಕೊಳ್ಳಬೇಕು" ಎಂದು ಹೇಳಿದರು. ಆ ಮೂಲಕ ತನ್ನಲ್ಲಿರುವ ದ್ವೇಷ ಮನೋಭಾವ ಹಾಗೂ ಕ್ರೂರತನದ ಪ್ರದರ್ಶನವನ್ನು ಮಾಡಿದ್ದರು.

ಟಿಪ್ಪು ಸುಲ್ತಾನ್ ಒಬ್ಬ ರಾಜನಾಗಿದ್ದ. ಆತ ತನ್ನ ಆಡಳಿತದ ವಿರುದ್ಧ ಹೋದವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದ. ಏಕೆಂದರೆ ಆಗ ರಾಜನಾಗಿದ್ದವನು ಸರ್ವಾಧಿಕಾರಿಯಾಗಿದ್ದ. ಆದರೆ ಪ್ರತಾಪ ಸಿಂಹ ಪ್ರಜಾಪ್ರಭುತ್ವದಲ್ಲಿರುವವರು. ಅವರೇ ಈಗಿನ ಕಾಲಘಟ್ಟದಲ್ಲಿ ಇಂತಹ ಮಾತುಗಳನ್ನು ಆಡುತ್ತಾರೆ ಎಂದರೆ, ಯಾರು ಕ್ರೂರಿ ಮತ್ತು ಸರ್ವಾಧಿಕಾರಿ ಎಂದು ಪ್ರಶ್ನಿಸಬೇಕಾಗುತ್ತದೆ. ಇವರಿಗೆ ಏನಾದರೂ ಸಂಪೂರ್ಣ ಅಧಿಕಾರ ದೊರೆತರೆ ಇವರು ಏನು ಮಾಡುತ್ತಾರೆ ಎಂಬುದಕ್ಕೆ ಇದೊಂದು ಕ[...]ಟ್ಟಿ[...] ನವಷ್ಟೇ.



ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ನಿಷ್ಕ್ರಿಯತೆ

ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿರುವ ಬಿ.ಟಿ. ಪ್ರದೀಪ್ ಅತ್ಯಂತ ದುರ್ಬಲ ಅಧ್ಯಕ್ಷ ಎಂಬ ಮಾತು ಈಗ ಪಕ್ಷದ ಕಾರ್ಯಕರ್ತರಿಂದಲೇ ಕೇಳಿ ಬರುತ್ತಿದೆ. ಎಲ್ಲರಿಗಿಂತಲೂ ಹೆಚ್ಚು ಕೊಡವ ಪ್ರೇಮಿತನವನ್ನು ಪ್ರದೀಪ್ ಪ್ರದರ್ಶಿಸುತ್ತಿದ್ದಾರೆ. ವಿಧಾನಸಭೆಗೆ ಸ್ಪರ್ಧಿಸಿದ್ದ ಪ್ರದೀಪ್ ಡೋಂಗಿ ಪರಿಸರವಾದಿಗಳ ಜೊತೆಯಲ್ಲಿ ಸೇರಿಕೊಂಡು "ನಾನು ಕೊಡವ ಜನಾಂಗದವನು. ಹಾಗಾಗಿ ಕೊಡವರು ನನಗೆ ಮತ ಚಲಾಯಿಸುತ್ತಾರೆ" ಎಂದು ಬಹಿರಂಗ ಪ್ರಚಾರ ಮಾಡಿ, ಬೇರೆ ಜನಾಂಗದವರ ಆಕ್ರೋಶಕ್ಕೆ ತುತ್ತಾಗಿ ಗೆಲ್ಲುವ ಸ್ಥಾನವನ್ನು ಸೋತಿದ್ದರು.

ಟಿಪ್ಪು ಸುಲ್ತಾನ್ ಜನ್ಮ ದಿನಾಚರಣೆಯ ವಿಚಾರದಲ್ಲಿ ಅವರಿಗೆ ಸಾಕಷ್ಟು ಅಸಹನೆ ಇತ್ತು ಎಂಬುದು ವಾಸ್ತವ. ಏಕೆಂದರೆ ಅವರು ಈ ದಿನಾಚರಣೆಯ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ, ಬದಲಿಗೆ ಅಲ್ಪಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು ಈ ಬಗ್ಗೆ ಅವರನ್ನು ತರಾಟೆಗೆ ತೆಗೆದುಕೊಂಡಾಗ "ಟಿಪ್ಪು ಸುಲ್ತಾನ್ ನಮ್ಮ ಬಿದ್ದಾಟಂಡ ಕುಟುಂಬದವರ ಮೇಲೆಯೂ ದಾಳಿ ಮಾಡಿದ್ದ ಮತಾಂತರ ಮಾಡಿದ್ದ" ಎಂದು ಹೇಳುವ ಮೂಲಕ ತನ್ನ ಆಕ್ರೋಶವನ್ನು ಹೊರಗೆಡವಿದ್ದಾರೆ.

ಎ.ಕೆ. ಸುಬ್ಬಯ್ಯ ಹೇಳುವಂತೆ ಕಾಂಗ್ರೆಸಿನಲ್ಲಿರುವ ಕೊಡವರು ಮತ್ತು ಅವರ ಕುಟುಂಬಸ್ಥರು ಅಧಿಕಾರಕ್ಕಾಗಿ ಕಾಂಗ್ರೆಸಿನಲ್ಲಿ ಇದ್ದಾರೆ. ಆದರೆ ಅವರು ಮತ ನೀಡುವುದು ಬಿಜೆಪಿಗೆ ಎಂಬ ವಾಸ್ತವ ಪ್ರದೀಪ್ ಅವರ ವರ್ತನೆಯನ್ನು ನೋಡಿದಾಗ ಗೊತ್ತಾಗುತ್ತದೆ. ಟಿಪ್ಪು ಕಾರ್ಯಕ್ರಮದ ಬಗ್ಗೆ ಪ್ರದೀಪ್ ಅವರ ನಿಷ್ಕ್ರಿಯತೆ ಮತ್ತು ಜಿಲ್ಲಾಡಳಿತದೊಂದಿಗೆ ಕಾರ್ಯಕ್ರಮ ಕುರಿತು ಅವರು ಸಂಪರ್ಕವನ್ನು ಇಟ್ಟುಕೊಳ್ಳದೆ ಇರುವುದು ಕೂಡ ಗಲಭೆಗೆ ಕಾರಣ ಎಂದು ಹೇಳಬಹುದು.



...ಸುಬ್ಬಯ್ಯ "ಪಕ್ಷದ ನಾಯಕತ್ವ ಕೊಡವರ ...ಇದೆ. ಆದರೆ ಕೊಡವ ಜನಾಂಗದವರು ಯಾರೂ ... ಮತ ಹಾಕುವವರು ಅಲ್ಲ, ಆದ್ದರಿಂದ ಈ ...ಂದ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ, ಈ ...ಗಿ ಜಿಲ್ಲಾ ಕಂಗ್ರೆಸ್‌ನ ನಾಯಕತ್ವವನ್ನು ಪಕ್ಷಕ್ಕೆ ...ದುವವರ ಕೈಗೆ ಕೊಡಬೇಕು" ಎಂದರು. ತಮ್ಮ ...ವನ್ನು ಗಟ್ಟಿಯಾಗಿ ವ್ಯಕ್ತಪಡಿಸಿದ ಕಾಂಗ್ರೆಸ್ ...ರೀ ವಿ.ಪಿ.ಶಶಿಧರ್ ಮಾತ್ರ. ಎಂದಿನಂತೆ ...ನ ಡಾ| ಐ.ಆರ್. ದುರ್ಗಾಪ್ರಸಾದ್ ಸಂಘ ...ದ ಕುತಂತ್ರವನ್ನು ವಿರೋಧಿಸಿದರು.

ಜಿಲ್ಲಾಡಳಿತದ ವೈಫಲ್ಯ

...ರಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಬೇಕು ...ವನೆ ಜಿಲ್ಲಾ ಆಡಳಿತದಲ್ಲಿ ಇರಲಿಲ್ಲ. ಜಿಲ್ಲಾಧಿಕಾರಿ ...ಾರ್ಯಕ್ರಮಕ್ಕೆ ವಿದೇಶಕ್ಕೆ ತೆರಳಿದ್ದರಿಂದ, ಪ್ರಭಾರ ...ಕಾರಿಗಳು ಯಾವುದೇ ಅನುಭವವಿಲ್ಲದೆ ...ಂಡಿದ್ದಾರೆ. ಇನ್ನು ಸಾರ್ವಜನಿಕರೊಂದಿಗೆ ...ವನ್ನೇ ಇಟ್ಟುಕೊಳ್ಳದ ಪೊಲೀಸ್ ವರಿಷ್ಠಾಧಿಕಾರಿ ... ಕಟಿಯಾರ್ ಕೆಲವು ಕಡೆ ಸಂಘರ್ಷಕ್ಕೆ ...ರಾಗಿದ್ದಾರೆ. ವಾರ್ತಿಕಾ ಕಟಿಯಾರ್‌ಗೆ ಅನುಭವದ ... ಜೊತೆಯಲ್ಲಿ ಐ.ಪಿ.ಎಸ್‌ನ ಅಹಂ ತಲೆಯಲ್ಲಿ ...ರಿಡಿರುವುದರಿಂದ ಆಕೆ ಯಾರ ಮಾತನ್ನೂ ...ಲ್ಲ. ಪ್ರಭಾರ ಜಿಲ್ಲಾಧಿಕಾರಿಗಳು ಪತ್ರಿಕಾಗೋಷ್ಠಿ ...ಸರಕಾರಿ ಕಾರ್ಯಕ್ರಮಕ್ಕೆ ಮೆರವಣಿಗೆಯಲ್ಲಿ ...ದನ್ನು ಕೈಬಿಟ್ಟಿದ್ದೇವೆ ಎಂಬ ಹೇಳಿಕೆಯನ್ನು ...ಎಸ್.ಪಿ. ಮೆರವಣಿಗೆಗೆ ಅನುಮತಿಯೇ ಇಲ್ಲ ... ಘೋಷಿಸುವ ಮೂಲಕ ಒಂದು ರೀತಿಯ ...ತೆಯನ್ನು ಸೃಷ್ಟಿಸಲು ಕಾರಣಕರ್ತರಾಗಿದ್ದಾರೆ. ...ಗೆಯನ್ನು ನಿಷೇಧಿಸಬೇಕಾಗಿರುವುದು ...ರಿಗಳೇ ವಿನಹ, ಪೊಲೀಸ್ ಇಲಾಖೆ ಅಲ್ಲ, ...ದಲಗಳು ಮತ್ತಷ್ಟು ಗೊಂದಲವನ್ನು ಜನರ ... ಹುಟ್ಟು ಹಾಕಲು ಕಾರಣವಾಗಿದೆ. ಸರಕಾರಿ ...ಮ ಯಶಸ್ವಿಯಾಗಬೇಕು ಎನ್ನುವ ರೀತಿಯಲ್ಲಿ ... ಪತ್ರವನ್ನು ಮುದ್ರಿಸಿ ಕಳುಹಿಸಿದ್ದಾರೆ. ಆದರೆ ...ಕ್ರಮದಲ್ಲಿ ಭಾಗವಹಿಸುವವರಿಗೆ ರಕ್ಷಣೆ ಏನು ... ಪೊಲೀಸ್ ಇಲಾಖೆ ಹೇಳಲಿಲ್ಲ. ಈ ...ಮ ಕಾಟಾಚಾರದ ಕಾರ್ಯಕ್ರಮ ಎನ್ನುವುದಕ್ಕೆ ...ದರ್ಶನವೆಂದರೆ, ವಿರಾಜಪೇಟೆಯಲ್ಲಿ ನಡೆದ ...ಮಕ್ಕೆ ಮುಖ್ಯ ಭಾಷಣಕಾರರಾಗಿ ಡಾ| ಜೆ. ...ರವರನ್ನು ಆಹ್ವಾನಿಸಲಾಗಿತ್ತು, ಅವರು ಈ ಹಿಂದೆ ... ಜನಾಂಗದವರ ಬಗ್ಗೆ ತಮ್ಮ ಕೃತಿಯಲ್ಲಿ ...ಕಾರಿಯಾಗಿ ಬರೆದಿದ್ದಾರೆ ಎಂಬ ಆರೋಪವನ್ನು ...ಮುಖಕರು ಬಹಿಷ್ಕಾರವನ್ನು ಹಾಕಿದ್ದೇ ಅಲ್ಲದೆ, ...ಾಪಕ ಹುದ್ದೆಗೂ ಸಂಚಕಾರ ತರುವ ಪ್ರಯತ್ನ ...ಪ್ಪು ಬಾವುಟಗಳ ಪ್ರದರ್ಶನ ನಡೆದಿದೆ. ಅಂತಹ ... ಕಾರ್ಯಕ್ರಮಕ್ಕೆ ಆಹ್ವಾನಿಸಿದರೆ ಕೊಡವ ಜನಾಂಗದವರು ಮುನಿದಿರುವ ಕಾರ್ಯಕ್ರಮಕ್ಕೆ ಅವರು ಬರುತ್ತಾರೆಯೇ ಎಂಬ ಕನಿಷ್ಠ ಜ್ಞಾನವೂ ಇಲ್ಲದೇ ಆಯೋಜಿಸಿದ್ದಾರೆ. ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲೇ ಇಲ್ಲ. ಹಾಗಾಗಿ ಜಿಲ್ಲಾ ಸರಕಾರದ್ದು ಕಾಟಾಚಾರದ ಕಾರ್ಯಕ್ರಮ ಎಂಬುದು ಸಾಬೀತಾಗುತ್ತದೆ.

ಮಡಿಕೇರಿಯ ನಗರಸಭಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಿಲ್ಲೆಯ ಹಲವು ಭಾಗಗಳಿಂದ ಸಾಕಷ್ಟು ಮಂದಿ ಬಂದಿದ್ದಾರೆ. ಮಂಗಳೂರು ಹಾಗೂ ಕೇರಳದಿಂದಲೂ ಜನರು ಬಂದಿದ್ದಾರೆ ಎನ್ನುವ ಮಾತು ಕೇಳಿಬಂದಿದೆ. ಆ ಸಂಗತಿ ಇನ್ನೂ ಸ್ಪಷ್ಟವಾಗಿಲ್ಲ, ಇದು ಸಂಘ ಪರಿವಾರದ ಆರೋಪವೋ ಅಥವ ನಿಜವಾಗಿಯೂ ಬಂದಿದ್ದಾರೋ ಎಂಬುದು ಖಚಿತವಾಗಿಲ್ಲ. ಮಂಗಳೂರಿನಿಂದ ಮಡಿಕೇರಿಗೆ ಬರುವ ಮಾರ್ಗವೂ, ಕೊಡಗಿನ ನಾಪೋಕ್ಲು, ಎಮ್ಮೆಮಾಡು, ಕೊಳಕೇರಿ, ಚೆರಿಯಪರಂಬು, ಕೊಟ್ಟಮುಡಿ ಪ್ರದೇಶಗಳಿಂದ ಬರಲು ಇರುವ ಮಾರ್ಗವೂ ಒಂದೇ ಆಗಿದೆ. ಜೊತೆಗೆ ಈ ಭಾಗಗಳಲ್ಲಿಯೇ ಹೆಚ್ಚು ಮುಸಲ್ಮಾನರು ಇದ್ದಾರೆ. ಕಾರ್ಯಕ್ರಮಕ್ಕೆ ತೆರಳುವ ಮಾರ್ಗದ ಎಲ್ಲಾ ಭಾಗಗಳಲ್ಲಿ ಸಂಘ ಪರಿವಾರದವರು ಗುಂಪು ಸೇರಿ ಕಾರ್ಯಕ್ರಮಕ್ಕೆ ತೆರಳದಂತೆ ಜನರನ್ನು ತಡೆಯುವ ಯತ್ನಮಾಡಿದ್ದಾರೆ.

ಜ| ತಿಮ್ಮಯ್ಯ ಸರ್ಕಲ್ ಬಳಿ ಜನ ವಾಹನಗಳಿಂದ ಇಳಿದು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ತೆರಳುತ್ತಿದ್ದ ವೇಳೆಯಲ್ಲಿ ಸಮೀಪದ ಕಟ್ಟಡವೊಂದರಿಂದ ಕಲ್ಲು ತೂರಾಟ ನಡೆದಿದೆ. ಅದಕ್ಕೆ ಪ್ರತಿಯಾಗಿ ಕಲ್ಲು ತೂರಾಟ ನಡೆದಿದೆ. ಆಗ ಪೊಲೀಸರು ಕಾರ್ಯಕ್ರಮಕ್ಕೆ ಬರುತ್ತಿದ್ದ ಜನರ ಮೇಲೆ ಲಾಠಿ ಬೀಸಿದ್ದಾರೆ. ಲಾಠಿ ಚಾರ್ಜ್ ಬಗ್ಗೆ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದಲ್ಲಿ ನೆರೆದಿದ್ದ ಜನರಿಗೆ ಗೊತ್ತಾಗಿ ಅವರು ಆಕ್ರೋಶಗೊಂಡರಲ್ಲದೆ, ಏರುಧ್ವನಿಯಲ್ಲಿ ಘರ್ಜಿಸಿದಾಗ ಮತ್ತೆ ಪರಸ್ಪರ ಕಲ್ಲು ತೂರಾಟ ನಡೆದಿದ್ದು, ಪೊಲೀಸರು ಮತ್ತೊಮ್ಮೆ ಲಾಠಿ ಬೀಸಿದ್ದಾರೆ.

ಈ ವೇಳೆಯಲ್ಲಿ ಪೊಲೀಸರ ಲಾಠಿಗಳಿಂದ ತಪ್ಪಿಸಿಕೊಳ್ಳಲು ಹಲವರು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಒಂದು ರೀತಿಯ ಗೊಂದಲದ ವಾತಾವರಣ ಉಂಟಾಗಿದೆ. ಆ ವೇಳೆಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಕುಟ್ಟಪ್ಪ ಎಂಬ ವ್ಯಕ್ತಿ ಕೂಡ ಓಡಿ ಕಾಲು ಜಾರಿ ಬಿದ್ದಿದ್ದಾರೆ. ಕುಟ್ಟಪ್ಪ ಮಡಿಕೇರಿ ಕ್ಷೇತ್ರದ ಶಾಸಕರಾಗಿರುವ ಅಪ್ಪಚ್ಚು ರಂಜನ್ ಅವರ ಮಾಜಿ ಆಪ್ತ ಸಹಾಯಕ. ಸರಕಾರಿ ಉದ್ಯೋಗದಲ್ಲಿದ್ದು ನಿವೃತ್ತಿಯನ್ನು ಹೊಂದಿದವರು. ಪ್ರತ್ಯಕ್ಷದರ್ಶಿಗಳ ಪ್ರಕಾರ ಪೊಲೀಸರ ಲಾಠಿ ಬೀಸುವಿಕೆಗೋ ಅಥವ ಕಲ್ಲು ತೂರಾಟಕ್ಕೋ ಅವರು ಓಡುವ ವೇಳೆಯಲ್ಲಿ ಅವರು ಕಾಲು ಬಿದ್ದಿದ್ದಾರೆ. ಬೀಳುವಾಗ ಅವರ ತಲೆಯ ಹಿಂಭಾಗ ಕಲ್ಲಿಗೆ ತಾಗಿ ಅವರಿಗೆ ಪೆಟ್ಟಾಯಿತು. ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅವರು ಅಷ್ಟುಹೊತ್ತಿಗೆ ಮೃತಪಟ್ಟಿದ್ದರು. ಅದೇ ರೀತಿ ರಾಜು ಎಂಬ ವ್ಯಕ್ತಿ ಆಸ್ಪತ್ರೆಯ ಬಳಿ ಯಲ್ಲಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾರೆ. ಇದನ್ನು ಕೂಡ ಈಗ ಸಂಘ ಪರಿವಾರ ತಮ್ಮ ಲೆಕ್ಕಕ್ಕೆ ಜಮಾಯಿಸಿ ಕೊಂಡಿದೆ.

ಆದರೆ ಇದು ಕೊಲೆ ಎಂದು ಶಾಸಕರು ಮತ್ತು ಸಂಸದರು ಹೇಳುವ ಮೂಲಕ ಮತ್ತಷ್ಟು ಪ್ರಚೋದನೆಯ ಕೆಲಸ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಮಡಿಕೇರಿಗೆ ಸಮೀಪದ ನೀರ್ಕೊಲ್ಲಿ ಎಂಬಲ್ಲಿ ಒಂದು ಶೂಟೌಟ್ ಪ್ರಕರಣ ನಡೆದಿದೆ. ಮುಸ್ಲಿಂ ಯುವಕನೊಬ್ಬ ಕಾರಿನಲ್ಲಿ ಬರುತ್ತಿದ್ದಾಗ ಯಾರೋ ಅವರ ಮೇಲೆ ಗುಂಡು ಹೊಡೆದಿದ್ದು ಆತ ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಸೋಮವಾರಪೇಟೆಯಲ್ಲಿ ಸರಕಾರಿ ಕಾರ್ಯಕ್ರಮ ನಡೆಯುವ ಪ್ರದೇಶಕ್ಕೆ ಬಿಜೆಪಿ ಕಾರ್ಯಕರ್ತರು ನುಗ್ಗಿ ಕಾರ್ಯಕ್ರಮ ನಡೆಯದಂತೆ ದಾಂಧಲೆ ನಡೆಸಿದ್ದಾರೆ. ಕುಶಾಲನಗರದಲ್ಲಿಯೂ ಘರ್ಷಣೆ ನಡೆದಿದೆ. ಪೊಲೀಸ್ ಇಲಾಖೆ ಸಂಪೂರ್ಣವಾಗಿ ಘಟನೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಖಂಡಿತವಾಗಿಯೂ ಹೇಳಬಹುದು. ಏಕೆಂದರೆ ಬಿಜೆಪಿಯವರು ಕರಾಳ ದಿನ ಆಚರಿಸುತ್ತೇವೆ ಎಂದು ಪ್ರಚೋದಿಸಿದಾಗ ಮುಂದೇನಾಗಬಹುದು ಎಂಬುದನ್ನು ಊಹಿಸುವಲ್ಲಿ ಜಿಲ್ಲಾಡಳಿತ, ಅದರಲ್ಲಿಯೂ ವಿಶೇಷವಾಗಿ ಪೊಲೀಸ್ ಇಲಾಖೆ, ವಿಫಲವಾಗಿದೆ. ಕಲ್ಲುಗಳನ್ನು ಶೇಖರಿಸಿಡಲಾಗಿತ್ತು, ಅದನ್ನು ಕೂಡ ತಿಳಿಯಲು ಸಾಧ್ಯವಾಗದ ಪೊಲೀಸ್ ಇಲಾಖೆ ಯಾವ ಪ್ರಮಾಣದಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದರು ಎಂಬುದನ್ನು ಅಂದಾಜಿಸಬಹುದು. ಪ್ರತಿಯೊಂದು ಪ್ರದೇಶದಲ್ಲಿಯೂ ಸರಕಾರಿ ಕಾರ್ಯಕ್ರಮ ನಡೆಯುವ ಜಾಗಕ್ಕೆ ಸಮೀಪದಲ್ಲಿ ಬಿಜೆಪಿ ಕಾರ್ಯಕರ್ತರು ಬೀಡು ಬಿಡಲು ಪೊಲೀಸರು ಅವಕಾಶ ಮಾಡಿಕೊಟ್ಟಿದ್ದಾರೆ. ಕಾರ್ಯಕ್ರಮಕ್ಕೆ ಜನ ತೆರಳದಂತೆ ಮಾಡುವ ಬಿಜೆಪಿಯ ಉದ್ದೇಶ ಸಫಲವಾಗಲು ಮತ್ತು ಕಾರ್ಯಕ್ರಮದ ಜೊತೆಯಲ್ಲಿ ಗಲಭೆಯಾಗಲು ಪೊಲೀಸರೇ ಕಾರಣವಾಗಿದ್ದಾರೆ.

ಟಿಪ್ಪು ರಾಷ್ಟ್ರದ ಆಸ್ತಿಯಾಗಬೇಕಾಗಿತ್ತು, ಅದನ್ನು ಒಂದು ಜನಾಂಗದ ಆಸ್ತಿಯನ್ನಾಗಿಸಿದ ಕೀರ್ತಿ ಕೇವಲ ಸಂಘ ಪರಿವಾರದವರಿಗೆ ಮಾತ್ರ ಸಲ್ಲುವುದಿಲ್ಲ, ಮುಸ್ಲಿಮರು ಕೂಡ ಟಿಪ್ಪು ತಮ್ಮ ಜನಾಂಗದ ನಾಯಕ ಎನ್ನುವಂತೆ ಬಿಂಬಿಸಲು ಪ್ರಯತ್ನಿಸಿದ್ದಾರೆ. ಸಂಘ ಪರಿವಾರದವರು ಟಿಪ್ಪುವಿಗೆ ಧಿಕ್ಕಾರ ಕೂಗಿದರೆ, ಮುಸ್ಲಿಮರು ಟಿಪ್ಪುವಿಗೆ ಜೈಕಾರ ಕೂಗುವುದರ ಜೊತೆಯಲ್ಲಿ 'ಅಲ್ಲಾಹು ಅಕ್ಬರ್' ಎಂದು ಕೂಡ ಘೋಷಣೆ ಕೂಗುತ್ತಿದ್ದರು. ಇದರ ಉದ್ದೇಶವಾದರೂ ಏನು? ಇದು ಮತ್ತೊಂದು ರೀತಿಯಲ್ಲಿ ಪ್ರಚೋದಿಸುವ ಕಾರ್ಯವಲ್ಲವೇ? ವಿರಾಜಪೇಟೆಯಲ್ಲಿ ಪ್ರಾರ್ಥನಾಮಂದಿರವೊಂದರಿಂದ ಡಿ.ವೈ.ಎಸ್.ಪಿ. ವಾಹನಕ್ಕೆ ಯಾವುದೇ ಪ್ರಚೋದನೆಯಿಲ್ಲದೆ ಕಲ್ಲು ಎಸೆಯುವ ಕಾರ್ಯವೂ ನಡೆದಿದೆ.

ಈಗ ಮಡಿಕೇರಿಗೆ ಬಿಜೆಪಿಯ ಮುಖಂಡರುಗಳೆಲ್ಲರೂ ಆಗಮಿಸಿದ್ದಾರೆ. ಪ್ರಹ್ಲಾದ್ ಜೋಷಿಯಿಂದ ಮೊದಲ್ಗೊಂಡು, ಶೋಭಾ ಕರಂದ್ಲಾಜೆಯವರೆಗೂ ತಮ್ಮ ಪಕ್ಷದ ವ್ಯಕ್ತಿಯ ಸಾವಿಗೆ ಸಾಂತ್ವನ ಹೇಳುವ ನೆಪದಲ್ಲಿ ಸರಕಾರದ ವಿರುದ್ಧ ತಮ್ಮ ಆಕ್ರೋಶವನ್ನು ಸೂಚಿಸಲು ಬಂದಿದ್ದಾರೆ.

ಒಟ್ಟಾರೆಯಾಗಿ ಕೊಡವರು, ಮುಸ್ಲಿಮರು ಮತ್ತು ಹಿಂದೂಗಳು ಮಾತ್ರವಲ್ಲ, ಎಲ್ಲ ಕನ್ನಡಿಗರು ಮತ್ತು ಭಾರತೀಯರು ಟಿಪ್ಪುವಿನ ಬಗ್ಗೆ ನೈಜ ಸತ್ಯವನ್ನು ಅರಿಯುವ ತುರ್ತು ಅಗತ್ಯ ಮತ್ತೊಮ್ಮೆ ಎದುರಾಗಿದೆ.

● ಬಿ.ಎನ್. ಮನು ಶೆಣೈ





ಟಿಪ್ಪುವನ್ನೇ ಮಣಿಸಿದ್ದ ಕೊಡವರು

ಉತ್ತರದಲ್ಲಿ ಮಲಪ್ರಭಾ ನದಿಯಿಂದ ದಕ್ಷಿಣದ ಪಾಲಕ್ಕಾಡ್, ದಿಂಡಿಗಲ್‌ವರೆಗೆ ಸುವಿಸ್ತಾರ ಸಂಸ್ಥಾನವನ್ನು ಹೊಂದಿದ್ದರೂ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಕೊಡಗಿನಂತಹ ಸಣ್ಣ ಪ್ರಾಂತ್ಯದ ಮೇಲೆ ಆಗಿಂದಾಗ್ಗೆ ದಾಳಿ ನಡೆಸಿದ್ದೇಕೆ?

ತನ್ನ ಸಂಸ್ಥಾನದ ಬೇರಾವ ಭಾಗದಲ್ಲೂ ಮತಾಂತರಕ್ಕೆ ಕೈಹಾಕದ ಟಿಪ್ಪು ಕೊಡಗು ಮತ್ತು ಮಲಬಾರ್ ಪ್ರಾಂತ್ಯದಲ್ಲಿ ಮತಾಂತರಕ್ಕೆ ಮುಂದಾದದ್ದೇಕೆ?

ಟಿಪ್ಪು ಸುಲ್ತಾನನ್ನು ಇಂತಹ ಯಾವುದೇ ವಿಮರ್ಶೆಗೆ ಒಳಪಡಿಸುವ ಮುನ್ನ ನಾವೆಲ್ಲಾ ಅರ್ಥಮಾಡಿಕೊಳ್ಳಬೇಕಿರುವ ಮೊದಲ ಸಂಗತಿಯೆಂದರೆ ನಾವು ಚರ್ಚಿಸುತ್ತಿರುವ ಇವತ್ತಿನ ಕಾಲಘಟ್ಟಕ್ಕೂ ಟಿಪ್ಪೂ ಸುಲ್ತಾನನ ಕಾಲಘಟ್ಟಕ್ಕೂ ನಡುವೆ ಬರೋಬ್ಬರಿ 216 ವರ್ಷಗಳ (ಅವನ ಸಾವಿನ ವರ್ಷವನ್ನು ಪರಿಗಣಿಸಿದರೆ) ಅಂತರವಿದೆ ಎಂಬುದನ್ನು. ಹೆಚ್ಚೂಕಮ್ಮಿ ಎರಡೂವರೆ ಶತಮಾನದಷ್ಟು ಈ ಅಂತರ ಕೇವಲ ವರ್ಷಗಳಿಗೆ ಮಾತ್ರ ಸೀಮಿತವಾದುದಲ್ಲ; ಬದಲಿಗೆ ಹಲವು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದಲಾವಣೆಗಳನ್ನೂ ಹಾದುಬಂದಿದ್ದು ಅಂತಿಮವಾಗಿ ಒಂದು ಪ್ರಜಾತಂತ್ರ ಸಾಂವಿಧಾನಿಕ ಚೌಕಟ್ಟಿಗೆ ನಮ್ಮನ್ನು ತಂದು ನಿಲ್ಲಿಸಿದೆ. ಹಾಗಾಗಿ ಟಿಪ್ಪೂವನ್ನು ಮತ್ತು ಅವನ ಯುದ್ಧಕಾರ್ಯಗಳನ್ನು ಅವನದೇ ಕಾಲಘಟ್ಟದ ತಕ್ಕಡಿಯಲ್ಲಿಟ್ಟು ತೂಗಿ ನೋಡಬೇಕೆ ವಿನಃ ನಮ್ಮ ಇಂದಿನ ಪ್ರಜಾತಾಂತ್ರಿಕ ದೃಷ್ಟಿಕೋನದಿಂದಲ್ಲ, ಏಕೆಂದರೆ ಆ ಕಾಲಘಟ್ಟವು ಮೈಸೂರು ಸಂಸ್ಥಾನವನ್ನೂ ಒಳಗೊಂಡಂತೆ ಇವತ್ತಿನ ಭಾರತ ಭೂಖಂಡದ ಭೌಗೋಳಿಕ ವ್ಯಾಪ್ತಿಗೆ ಒಳಪಡುವ ಅಂದಿನ ಎಲ್ಲಾ ಸಂಸ್ಥಾನಗಳು, ಸಾಮಂತ ದೊರೆಯೇ ನಿರ್ಣಾಯಕನೆನಿಸಿದ್ದ ರಾಜಾಡಳಿತವನ್ನು ಪ್ರತಿನಿಧಿಸುತ್ತಿದ್ದವು.

ಈಗ ಮೇಲಿನ ಪ್ರಶ್ನೆಗಳಿಗೆ ಮರಳೋಣ.

ಮೊದಲನೆಯದಾಗಿ, ಟಿಪ್ಪೂ ಸುಲ್ತಾನನಿಗೆ ಕೊಡಗಿನ ಅಥವಾ ಕೊಡವರ ಬಗ್ಗೆ ಯಾವ ಬಗೆಯ ಜನಾಂಗೀಯ ಅಥವಾ ಮತೀಯ ದ್ವೇಷ ಇರಲಿಲ್ಲ; ಬದಲಾಗಿ ಇದ್ದದ್ದು ಬ್ರಿಟಿಷರಿಂದ ತನ್ನ ಸಾಮ್ರಾಜ್ಯ ರಕ್ಷಣೆಯ ತುಡಿತ ಮತ್ತು ಸಾಮ್ರಾಜ್ಯದೊಳಗೆ ಆಂತರಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವ ಜರೂರತ್ತು. (ಆಗಿನ ಕಾಲದ ಎಲ್ಲಾ ರಾಜರು ಇದಕ್ಕೆ ಹೊರತಾದವರಲ್ಲ). ಅದಕ್ಕೂ ಒಂದು ಕಾರಣವಿದೆ. ಟಿಪ್ಪು ಸುಲ್ತಾನ್ ಪ್ರವರ್ಧಮಾನಕ್ಕೆ ಬರುವ ವೇಳೆಗಾಗಲೆ ಆಂಗ್ಲರ ಈಸ್ಟ್ ಇಂಡಿಯಾ ಕಂಪನಿ ತನ್ನ ಬಿಗಿತವನ್ನು ಭದ್ರವಾಗಿಸಿಕೊಳ್ಳುತ್ತಾ ಇತ್ತು. ಆಂಗ್ಲರ ಬಲಕ್ಕೆ ತಾನು ಸರಿಸಾಟಿಯಾಗಬೇಕೆಂದರೆ ಜಲಮಾರ್ಗ, ಕಿನಾರೆ ಬಂದರುಗಳ ಮೇಲೂ ತನ್ನ ಹಿಡಿತವನ್ನು ಸಾಧಿಸಿಕೊಳ್ಳಬೇಕೆಂಬುದು ಟಿಪ್ಪೂಗೆ ಅರ್ಥವಾಗಿಹೋಗಿತ್ತು. ಜೊತೆಗೆ ಅವನ ವಿದೇಶಿ ವಹಿವಾಟು, ವ್ಯಾಪಾರ, ಒಡನಾಟಗಳೂ ಇದಕ್ಕೆ ಪ್ರೇರಣೆಯಾಗಿದ್ದವು. ಹಾಗಾಗಿ ಪೋರ್ಚುಗೀಸರು 1498ರಲ್ಲಿ ಭಾರತಕ್ಕೆ ಪ್ರಪ್ರಥಮವಾಗಿ ಬಂದು ತಲುಪಿದ್ದ ಕ್ಯಾಲಿಕಟ್ ಬಂದರಿನ ಮೇಲೆ ಪ್ರಭುತ್ವ ಸಾಧಿಸುವುದು ಅವನ ಮುಖ್ಯ ಇರಾದೆಯಾಗಿತ್ತು. ಕ್ಯಾಲಿಕಟ್ ತಲುಪಬೇಕೆಂದರೆ ಕೊಡಗು ಮತ್ತು ಮಲಬಾರ್‌ಗಳನ್ನು ಆತ ಹಾದುಹೋಗಲೇಬೇಕಿತ್ತು.

ಹೈದರ್ ಅಲಿಯ ಕಾಲದಲ್ಲೇ ಇವೆರಡೂ ಮೈಸೂರು ಸಂಸ್ಥಾನದ ಭಾಗವಾಗಿದ್ದರು ಸಹ ಕೊಡಗಿನಲ್ಲಿ ಹಾಲೇರಿ ಪಾಳೇಗಾರರು ಮತ್ತು ಮಲಬಾರ್‌ನಲ್ಲಿ ನಾಯರ್‌ಗಳು ಆಗಿಂದಾಗ್ಗೆ ಬಂಡಾಯವೆದ್ದು ಹೈದರ್ ಮತ್ತು ಟಿಪ್ಪುಗಳಿಬ್ಬರಿಗೂ ಪ್ರತಿರೋಧ ಒಡ್ಡುತ್ತಿದ್ದರು. ಆ ಕಾಲಘಟ್ಟಕ್ಕೆ ಇಂಥಾ ಬಂಡಾಯಗಳು ಸಾಮಾನ್ಯವಾದಂತವು ಎನ್ನುವುದು ಎಷ್ಟು ಸತ್ಯವೋ ಆಳರಸರು ಅಂತವುಗಳನ್ನು ಹತ್ತಿಕ್ಕಲು ಯತ್ನಿಸುತ್ತಿದ್ದುದು ಕೂಡಾ ಅಷ್ಟೇ ವಾಸ್ತವವಾಗಿದ್ದವು. ಆ ಅಪ್ಪ-ಮಗ ಆಡಳಿತಗಾರರು ಮಾಡಿದ್ದೂ ಅದನ್ನೇ. ಟಿಪ್ಪುಗೆ ಮೊದಲೇ ಹೈದರ್, ಬಂಡಾಯವನ್ನು ಹತ್ತಿಕ್ಕುವುದಕ್ಕೋಸ್ಕರ ಕೊಡಗಿನ ಮೇಲೆ ಏಳು ಬಾರಿ ದಾಳಿ ಮಾಡಿದ್ದ. ತನ್ನ ಕಾಲಕ್ಕೂ ಪಾಳೇಗಾರ ಲಿಂಗರಾಜ ಮತ್ತು ಅವನ ಮಗ ವೀರಾಜು ಕೊಡವ ಪ್ರತಿರೋಧವನ್ನು ಮುಂದುವರೆಸಿದಾಗ 1780 ರಿಂದ 1792ರವರೆಗೆ (ವೀರಾಜು ಬ್ರಿಟಿಷ್ ಮಹಾಪ್ರಭುಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವವರೆಗೆ) ಟಿಪ್ಪು ಹಲವು ಬಾರಿ ಕೊಡಗಿನತ್ತ ತನ್ನ ಸೇನೆ ಕಳುಹಿಸಿದ್ದ. ಒಂದೆರಡು ಬಾರಿ ತಾನೇ ಖುದ್ದಾಗಿಯೂ ಸೇನೆಯ ನೇತೃತ್ವ ವಹಿಸಿದ್ದ. ಟಿಪ್ಪು ಕೊಡಗಿನ ಮೇಲೇಕೆ ಆಗಿಂದಾಗ್ಗೆ ದಾಳಿ ನಡೆಸಿದ್ದ ಎಂಬ ಪ್ರಶ್ನೆಗೆ ಇದೇ ಉತ್ತರ.

ಎರಡನೆಯ ಪ್ರಶ್ನೆಗೆ ಹೋಗುವುದಕ್ಕೆ ಮುನ್ನ ಹೈದರ್ ಮತ್ತು ಟಿಪ್ಪು ಅಧಿಪತ್ಯಕ್ಕೆ ಕೊಡವರ ಪ್ರತಿರೋಧ ಮತ್ತು ಕೊಡವ ಸೇನೆಯ ಚಾಣಾಕ್ಷ ಪರಾಕ್ರಮದ ಬಗ್ಗೆಯೂ ಒಂಚೂರು ಗಮನಹರಿಸಿ ಬರೋಣ. ಈ ಹಾದಿಯಲ್ಲಿ ಕೊಡವರು ಹೈದರ್ ಆಡಳಿತದ ವಿರುದ್ಧ ದಂಗೆ ಎದ್ದದ್ದು



ಏಕೆ? ಎನ್ನುವ ಮತ್ತೊಂದು ಉಪಪ್ರಶ್ನೆಗೂ ಉತ್ತರ ಸಿಗಲಿದೆ..

ಟಿಪ್ಪು ಸೇನೆಯೆಂದರೆ ಅದು ಅಂತಿಂಥ ಸೇನೆಯಲ್ಲ, ಅಶ್ವದಳ, ಕಾಲ್ದಳ, ಫಿರಂಗಿ ತುಕಡಿ ಅಂತೆಲ್ಲಾ ಒಂದೂವರೆ ಲಕ್ಷ ಅಧಿಕೃತ ಸೈನಿಕರಲ್ಲದೇ 10,000 ಕುದುರೆಗಳನ್ನು ಸೇನೆ ಒಳಗೊಂಡಿತ್ತು ಅನ್ನೋದನ್ನು ಬಿ.ರಿಕ್ಟರ್ ಎಂಬ ಆಂಗ್ಲ ಇತಿಹಾಸಕಾರ 1790ರಲ್ಲೇ ದಾಖಲಿಸಿದ್ದಾನೆ. ಬ್ರಿಟಿಷರ ಸುಸಜ್ಜಿತ ಸೇನೆಯನ್ನೇ ಮಣಿಸಿದ್ದ ಟಿಪ್ಪುವಿನ ಬಲಿಷ್ಠ ಸೇನೆ ತನ್ನದೇ ಪ್ರಾಂತ್ಯದ ಕೊಡವ ಸೇನೆಯನ್ನು ಹತೋಟಿ ಮಾಡಲಾಗದ್ದು ಅಚ್ಚರಿಯೆನಿಸದಿರದು. ಕೊಡವರೆಂದರೆ ಯುದ್ಧ ಹೋರಾಟಕ್ಕೆ ಕೆಚ್ಚೆದೆಯಿಂದ ಮುನ್ನುಗ್ಗುತ್ತಾರೆನ್ನುವುದರಲ್ಲಿ ಎರಡು ಮಾತಿಲ್ಲ. ಟಿಪ್ಪು ಕಾಲಘಟ್ಟದ ಕೊಡವ ಸೇನೆ ಕೆಚ್ಚೆದೆಯ ಜೊತೆಗೆ ಚಾಣಾಕ್ಷ ಗೆರಿಲ್ಲಾ ಯುದ್ಧನೀತಿಯಲ್ಲೂ ಪಳಗಿದ್ದರಿಂದಲೇ ಟಿಪ್ಪು ಸೇನೆ ಮತ್ತೆಮತ್ತೆ ಪರಾಭವಗೊಳ್ಳಬೇಕಾಗಿತ್ತು. ಅಷ್ಟಕ್ಕೂ ಅವತ್ತಿನ ಕೊಡವ ಸೇನೆಯಲ್ಲಿ ಇದ್ದದ್ದು ಆರರಿಂದ ಎಂಟು ಸಾವಿರ ಸೈನಿಕರು ಮಾತ್ರ!

ಹೈದರ್ ಅಲಿ ಕೊಡಗಿನ ಮೇಲೆ 1765ರಲ್ಲಿ ಅಧಿಪತ್ಯ ಸ್ಥಾಪಿಸುವುದಕ್ಕೂ ಮುನ್ನ ವೀರಶೈವ ಹಾಲೇರಿ ಕುಟುಂಬದ ಪಾಳೇಗಾರಿಕೆಯ ಆಡಳಿತಕ್ಕೆ ಅದು ಒಳಪಟ್ಟಿತ್ತು. ಆಗ ಅಲ್ಲಿ ಅಸ್ತಿತ್ವದಲ್ಲಿದ್ದುದು ಊಳಿಗಮಾನ್ಯ ಪದ್ಧತಿ. ಪಾಳೇಗಾರನೇ ಸಂಪೂರ್ಣ ಅಧಿಕಾರಸ್ಥನಾಗಿದ್ದರೂ ಜಮೀನನ್ನು ಉಳುಮೆ ಮಾಡುತ್ತಿದ್ದ ಕುಟುಂಬಗಳು ಬೆಳೆಗೆ ಅನುಗುಣವಾಗಿ ಕಂದಾಯವನ್ನು ನಿಗದಿ ಮಾಡಲಾಗಿತ್ತು. ಬಿ.ರಿಕ್ಟರ್ ದಾಖಲಿಸುವಂತೆ 100 'ಬುಟ್ಟಿ' ಭತ್ತಕ್ಕೆ 5 ರೂಪಾಯಿ ನಿಗದಿ ಮಾಡಲಾಗಿತ್ತು (ಒಂದು ಬುಟ್ಟಿ ಎಂದರೆ 8000 ಸೇರು). ಅದನ್ನವರು 'ಜಮ್ಮಾ ಗುತ್ತಿಗೆ' (jamma tenure) ಅಂತ ಕರೆಯುತ್ತಿದ್ದರು. ಇದರ ಜೊತೆಗೆ ಜಮೀನನ್ನು ಊಳಿಗಕ್ಕೆ ಪಡೆದಿದ್ದ ಕುಟುಂಬಗಳು ಗೇಣಿಯ ಜೊತೆಗೆ ಪಾಳೇಗಾರನ ಸೇನೆಯಲ್ಲಿ ರಕ್ಷಣಾ ಭಟರಾಗಿ, ಸಾರ್ವಜನಿಕ ಸೇವೆ ಸಲ್ಲಿಸಬೇಕೆಂಬ ಕರಾರು ಇತ್ತು. ಒಟ್ಟಿನಲ್ಲಿ ಕೊಡವ ಪಾಳೇಗಾರರ ಸೇನೆ ಇತರೆ ರಾಜರ ಸೇನೆಯಂತೆ ಕಾಯಂ ವ್ಯವಸ್ಥಿತ ಸೇನೆಯಾಗಿರಲಿಲ್ಲ, ರೈತಾಪಿ ವರ್ಗವೇ ಸೈನಿಕರ ಪಾತ್ರವನ್ನೂ ನಿಭಾಯಿಸುತ್ತಿದ್ದರು. ಚೌಡಿಗರು (ಕೂರ್ಗಿ ಸೈನಿಕರು) ಎಂದು ಕರೆಯಲ್ಪಡುತ್ತಿದ್ದ ಸೈನಿಕರನ್ನು ಹದಿನೈದು ದಿನಕ್ಕೊಮ್ಮೆ ಪಾಳಿಯಲ್ಲಿ ಪಾಳೆಗಾರ ನೇಮಕ

1765ರಲ್ಲಿ ಹೈದರ್ ಅಲಿ ಪಾಳೇಗಾರನಿಂದ ಕೊಡಗನ್ನು ತನ್ನ ವ... ತೆಗೆದುಕೊಂಡು1774ರಲ್ಲಿ ಜಮ್ಮಾ ಗುತ್ತಿಗೆಯನ್ನು ರದ್ದು ಮಾ... ಸೇನೆಯಲ್ಲಿ ಕರ್ತವ್ಯ ನಿರ್ವಹಿಸುವ ಅಗತ್ಯವೇನಿಲ್ಲ, ಬದಲಿಗೆ ಉಳು... ಮಾಡುತ್ತಿದ್ದ ಜಮೀನಿಗೆ ಹೆಚ್ಚಿಗೆ ಕಂದಾಯ ನೀಡುವಂತೆ ಕಾನೂನ... ಜಾರಿಗೆ ತಂದಿದ್ದ. ಹೊಸ ಕಂದಾಯ ದುಬಾರಿ ಎನಿಸಿದಾಗ ಊ... ಮಾಡಿಕೊಂಡಿದ್ದ ಕೊಡವ ಮತ್ತು ಅರೆಗೌಡ ರೈತಾಪಿ ಸಮುದಾ... ಹೈದರ್ ಅಲಿಯ ಆಡಳಿತದ ವಿರುದ್ಧ ಅಸಮಾಧಾನ ಹೊರಹಾಕ... ಶುರು ಮಾಡಿತು. ಹೈದರ್ ಅಲಿಯಿಂದ ಅಧಿಕಾರ ವಂಚಿತನಾಗಿ... ಲಿಂಗರಾಜ ಎಂಬ ಪಾಳೇಗಾರ ಇದನ್ನು ತನ್ನ ಸ್ವಾರ್ಥ... ಬಳಸಿಕೊಳ್ಳಲು ಮುಂದಾದ. ಅವನು ಮತ್ತು ಅವನ ಮ... ವೀರಾಜು ರೈತಾಪಿ ಅಸಮಾಧಾನವನ್ನೇ ಹೈದರ್ ಆಡಳಿತ ವಿರು... ಸಶಸ್ತ್ರ ಮತ್ತು ಗೆರಿಲ್ಲಾ ದಂಗೆಯಾಗಿಸುವಲ್ಲಿ ಯಶಸ್ವಿಯಾದ...

ಮಾಡುತ್ತಿದ್ದ. ಈ ಸೈನಿಕರನ್ನು ಕಡಿಮೆಯೆಂದರೆ 10ರಿಂದ ಗರಿಷ್ಠ 100 ಜನರವರೆಗಿನ ತುಕಡಿಗಳನ್ನಾಗಿ ವಿಭಜಿಸಲಾಗುತ್ತಿತ್ತು. ಒಂದೊಂದು ತುಕಡಿಗೂ ಒಬ್ಬ 'ಜಮೀನ್ದಾರ' ಉಸ್ತುವಾರಿ ವಹಿಸುತ್ತಿದ್ದ. ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ತುಕಡಿಯಿದ್ದರೆ ಅದನ್ನು 'ಕರಿಯಾಗಾರ' ಎಂಬಾತ ನೋಡಿಕೊಳ್ಳುತ್ತಿದ್ದ. ಸೇನೆಯಲ್ಲಿದ್ದವರಿಗೆ ವಿಶೇಷವಾಗಿ ರಾಜವೇತನವೇನೂ ಇರಲಿಲ್ಲ, ಗೇಣಿಗೆ ಬದಲಾಗಿ ಅವರು ಸೈನಿಕರಾಗಿ ಕರ್ತವ್ಯ ನಿಭಾಯಿಸಬೇಕಿತ್ತಷ್ಟೆ. ಯುದ್ಧ ಸಂದರ್ಭದಲ್ಲಿ ಮಾತ್ರ ಪಾಳೇಗಾರನ ಖಜಾನೆಯಿಂದ ಸೇನೆಯ ಖರ್ಚುವೆಚ್ಚ ನಿಭಾಯಿಸಲಾಗುತ್ತಿತ್ತು. ಕೊಡಗು ಹೇಳಿಕೇಳಿ ಗುಡ್ಡಗಾಡು ಪ್ರದೇಶ. ಜೊತೆಗೆ ಅಂತಹ ತಾಣದಲ್ಲೇ ಉಳುಮೆ ಮಾಡಿಕೊಂಡು ಭೌಗೋಳಿಕ ವ್ಯಾಪ್ತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ರೈತರೇ ಸೈನಿಕರು. ಹಾಗಾಗಿ ಗೆರಿಲ್ಲಾ ಯುದ್ಧದಲ್ಲಿ ಅವರು ಪಳಗಿದವರಾಗಿದ್ದರು.

ಹೆಚ್ಚೇನು ತೆರಿಗೆಯ ಹೊರೆಯಿಲ್ಲದೇ ಸೇನಾ ಸೇವೆಗೆ ಪರ್ಯಾಯವಾಗಿ ಜಮೀನು ಪಡೆದುಕೊಂಡು ಉಳುಮೆ ಮಾಡುವುದಕ್ಕೆ ಕೊಡವರು ಒಗ್ಗಿಹೋಗಿದ್ದರು. 1765ರಲ್ಲಿ ಹೈದರ್ ಅಲಿ ಪಾಳೇಗಾರನಿಂದ ಕೊಡಗನ್ನು ತನ್ನ ವಶಕ್ಕೆ ತೆಗೆದುಕೊಂಡನಾದರು 1774ರವರೆಗೆ ಕೊಡಗಿನಲ್ಲಿ ಯಾವ ಬಂಡಾಯವೂ ಕಾಣಿಸಿರಲಿಲ್ಲ. ಅದಕ್ಕೆ ಕಾರಣ, 1774ರವರೆಗೆ ಹೈದರ್ ಅಲಿ ಈ ಮೊದಲಿದ್ದ ಜಮ್ಮಾ ಗುತ್ತಿಗೆ ಗೇಣಿ ವ್ಯವಸ್ಥೆಯನ್ನಾಗಲಿ ಅಥವಾ ಇತರೆ ಕಂದಾಯ ಹೊಂದಾಣಿಕೆಯನ್ನಾಗಲಿ ಬದಲಿಸುವ ಗೋಜಿಗೆ ಹೋಗಿರಲಿಲ್ಲ, ಆದರೆ 1774ರಲ್ಲಿ ಜಮ್ಮಾ ಗುತ್ತಿಗೆಯನ್ನು ರದ್ದು ಮಾಡಿ, ಸೇನೆಯಲ್ಲಿ ಕರ್ತವ್ಯ ನಿರ್ವಹಿಸುವ ಅಗತ್ಯವೇನಿಲ್ಲ, ಬದಲಿಗೆ ಉಳುಮೆ ಮಾಡುತ್ತಿದ್ದ ಜಮೀನಿಗೆ ಹೆಚ್ಚಿಗೆ ಕಂದಾಯ ನೀಡುವಂತೆ ಕಾನೂನನ್ನು ಜಾರಿಗೆ ತಂದಿದ್ದ. ಹೊಸ ಕಂದಾಯ ದುಬಾರಿ ಎನಿಸಿದಾಗ ಊಳಿಗ ಮಾಡಿಕೊಂಡಿದ್ದ ಕೊಡವ ಮತ್ತು ಅರೆಗೌಡ ರೈತಾಪಿ ಸಮುದಾಯ ಹೈದರ್ ಅಲಿಯ ಆಡಳಿತದ ವಿರುದ್ಧ ಅಸಮಾಧಾನ ಹೊರಹಾಕಲು ಶುರು ಮಾಡಿತು. ಹೈದರ್ ಅಲಿಯಿಂದ ಅಧಿಕಾರ ವಂಚಿತನಾಗಿದ್ದ ಲಿಂಗರಾಜ ಎಂಬ ಪಾಳೇಗಾರ ಇದನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲು ಮುಂದಾದ. ಅವನು ಮತ್ತು ಅವನ ಮಗ ವೀರಾಜು






ಕೊಡವ ಸೇನೆಯು ಗೆರಿಲ್ಲಾ ಯುದ್ಧ ಮಾಡಲು ಬಳಸುತ್ತಿದ್ದ ಅಡಗು ತಂತ್ರದ ಹಳ್ಳಗಳು

ರೈತಾಪಿ ಅಸಮಾಧಾನವನ್ನೇ ಹೈದರ್ ಆಡಳಿತ ... ಸಶಸ್ತ್ರ ಮತ್ತು ಗೆರಿಲ್ಲಾ ದಂಗೆಯಾಗಿಸುವಲ್ಲಿ ಯಶಸ್ವಿ... ಈ ರೀತಿ ಕೊಡವ ರೈತರ ಕಂದಾಯದ ... ಪಾಳೆಗಾರರ ಅಧಿಕಾರಶಾಹಿ ದಂಗೆಯಾಗಿ ರೂಪ ತ...

ಪಾಳೆಗಾರರ ನೇತೃತ್ವದಲ್ಲಿ ದಂಗೆ ಎದ್ದಿದ್ದ ... ರೈತಾಪಿ ಸೈನಿಕರಿಗೆ ತಮ್ಮ ಹೋರಾಟದ ಕಿಚ್ಚಿನ ... ನಂಬಿಕೆ ಇರುವಷ್ಟೇ ತಮ್ಮ ಸಾಮರ್ಥ್ಯ ಮಿತಿಯ ಬ... ಎಚ್ಚರಿಕೆಯಿತ್ತು. ಹಾಗಾಗಿ ಬೃಹತ್ ಸೇನೆ ಮತ್ತು ... ನಾಯಕತ್ವಗಳು ಶ್ರೀರಂಗಪಟ್ಟಣದಿಂದ ಆಗಮಿ... ಪ್ರತಿರೋಧವನ್ನೇ ತೋರದೆ ಅವರು ಕೊಡಗಿನ ... ತಮ್ಮ ಹಿಡಿತ ಸಾಧಿಸಲು ಬಿಟ್ಟುಕೊಡುತ್ತಿದ್ದರು. ... ಹೈದರ್ ಅಥವಾ ಟಿಪ್ಪು ಎಲ್ಲಾ ತಣ್ಣಗಾಯಿ... 'ಫೌಜ್‌ದಾರ್' (ತಮ್ಮ ಪರವಾಗಿ ಆಡಳಿತದ ಉ... ನೋಡಿಕೊಳ್ಳುವ ಅಧಿಕಾರಿ) ಒಬ್ಬನನ್ನು ನೇಮಿಸಿ ರಾ... ಶ್ರೀರಂಗಪಟ್ಟಣದತ್ತ ಮುಖ ಮಾಡುತ್ತಿದ್ದಂತೆಯೇ ... ತಮ್ಮ ಗೆರಿಲ್ಲಾ ಯುದ್ಧ ಶುರು ಮಾಡುತ್ತಿದ್ದ ... ಸೇನೆ ಫೌಜದಾರ್ ಸೇನೆಯನ್ನು ಮಣಿಸಿ ಕೊಡಗನ್ನು ... ತಮ್ಮ ವಶಕ್ಕೆ ಪಡೆಯುತ್ತಿತ್ತು.

1782ರಲ್ಲಿ ಟಿಪ್ಪು ಸುಲ್ತಾನ್, ವೀರಾಜು ... ಲಿಂಗರಾಜುರನ್ನು ಬಂಧಿಸಿ ಕೈದಿಯಾಗಿಸಿಕೊಳ್ಳು... ಈ ಬಗೆಯ ಹೋರಾಟ ಮುಂದುವರೆದೇ ಇತ್ತು. ... ಟಿಪ್ಪುವೇ ಖುದ್ದಾಗಿ ಸೇನೆಯ ನೇತೃತ್ವ ... ಮಡಿಕೇರಿಯನ್ನು ವಶಪಡಿಸಿಕೊಂಡಿದ್ದಲ್ಲದೇ ... ಸೈನಿಕರು ನಾಶಪಡಿಸಿದ್ದ ಮಡಿಕೇರಿ ಕೋಟೆಯನ್ನು ... ನಿರ್ಮಾಣ ಮಾಡಲು ಆದೇಶಿಸಿ ಝೈನ್ ಉಲ್‌ಆ... ಮಹೆದ್ದಿಯನ್ನು ಫೌಜ್‌ದಾರ್‌ನನ್ನಾಗಿ ನೇಮಿಸಿ ವಾಪ... ಟಿಪ್ಪು ಶ್ರೀರಂಗಪಟ್ಟಣ ತಲುಪುವ ಮುನ್ನವೇ ... ಸೇನೆ ಮತ್ತೆ ಮಡಿಕೇರಿಯನ್ನು ತನ್ನ ವಶಕ್ಕೆ ತೆಗೆದು... ಬಂಡಾಯದ ಸೂಚನೆ ರವಾನಿಸಿತ್ತು. ಅದನ್ನು ತ... ಉದ್ದೇಶದಿಂದ 1784ರಲ್ಲಿ ಹೈದರ್ ಅಲಿ ... ಎಂಬಾತನ ಮುಂದಾಳತ್ವದಲ್ಲಿ ಟಿಪ್ಪು ಸೇನೆ ... ಕಳುಹಿಸಿದನಾದರೂ ಕೊಡವ ಸೈನಿಕರ ಗೆರಿಲ್ಲಾ ಯು... ಎದುರಿಸಲಾಗದೆ ಆತ ಅರ್ಧ ದಾರಿಯಲ್ಲೇ ... ವಾಪಾಸಾದ. ಅದೇ ವರ್ಷ ರಾಜಾ ಕಂಕೇರಿ (ಟಿಪ್ಪು ಸೇ... ಹಿಂದೂ ಸೇನಾನಿಗಳೂ ಇದ್ದರು ಎನ್ನುವುದಕ್ಕೆ ಇ... ನಿದರ್ಶನ) ಎಂಬ ಮತ್ತೊಬ್ಬ ಸೇನಾಧಿಪತಿಯ ನೇ...



...ಸೇನೆಯನ್ನು ಟಿಪ್ಪು ಕಳುಹಿಸಿದ್ದ. ರಾಜಾ ... ಮಡಿಕೇರಿ ತಲುಪುವ ಮೊದಲೇ ...ವ ಸೇನೆ ಆತನನ್ನು ಮಣಿಸಿ ...ಪ್ಪು ಕಳುಹಿಸಿತ್ತು. 1785ರಲ್ಲಿ ... ಟಿಪ್ಪುವೇ ಸೇನೆ ಸಮೇತ ...ಗೆ ಆಗಮಿಸಿದಾಗ ಕೊಡವ ...ಯಿಂದ ಯಾವ ...ಧವೂ ತೋರಿಬರಲಿಲ್ಲ. ... ಅಥವಾ ಟಿಪ್ಪುವಿನಂತಹ ...ಟೂಣಿ ನಾಯಕರೇ ಸೇನೆಯ ... ವಹಿಸಿ ಬಂದರೆಂದರೆ ಬೃಹತ್ ...ಯೇ ಬಂದಿರುತ್ತದೆಂದು ಅರಿತಿದ್ದ ...ವ ಗೆರಿಲ್ಲಾ ಸೈನಿಕರು ಪ್ರತಿದಾಳಿ ...ತ್ತಿರಲಿಲ್ಲ. ಟಿಪ್ಪು ವಾಪಾಸ್ ಶ್ರೀರಂಗಪಟ್ಟಣಕ್ಕೆ ...ತ್ತಿದ್ದಂತೆಯೇ ಕೊಡವ ಗೆರಿಲ್ಲಾ ಸೇನೆ ಮಡಿಕೇರಿಯನ್ನು ... ಪಡೆದುಕೊಂಡಿತ್ತು.

1785ರ ಸೆಪ್ಟೆಂಬರ್ ಮಾಹೆಯಲ್ಲಿ ರ್ರ್ಯುನ್ ...ಬುದಿನ್ ಶೂಸ್ತ್ರಿ ಎಂಬ ಸಿಫಾದಾರ್ ನೇತೃತ್ವದಲ್ಲಿ ...ಂದು ತುಕಡಿಯನ್ನು ಟಿಪ್ಪು ರವಾನಿಸಿದ್ದ. ಸಿದ್ದಾಪುರ ...ಮುಲ್ಲಿ ಆತನ ಸೇನೆ ಸಂಚರಿಸುತ್ತಿದ್ದಾಗಲೇ ಶೂಸ್ತ್ರಿ ...ಜ್ವರದಂತಹ ಅನಾರೋಗ್ಯಕ್ಕೆ ತುತ್ತಾದ. ಜೊತೆಗೆ ...ಸೈನಿಕರೇ ಫೌಜ್‌ದಾರ್‌ನ ವಿರುದ್ಧ ಬಂಡಾಯವೆದ್ದರು. ...ಲಾಭ ಪಡೆದ ಕೊಡವ ಸೈನಿಕರು ಮುಡಿಗೇರಿನಾಡು ...ಉಲಗಳ್ಳಿ ಎಂಬಲ್ಲಿ ಟಿಪ್ಪು ಸೇನೆಯ ಮೇಲೆ ...ಮಾಡಿ ಮಣಿಸಿತು. ಬಿ.ರಿಕ್ಟರ್ ಹೇಳುವಂತೆ ಅಂದು ... ನಾಲ್ಕು ಸಾವಿರದಷ್ಟಿದ್ದ ಕೊಡವ ಸೇನೆ ತನ್ನ ... ಯುದ್ಧತಂತ್ರದಿಂದ ಸುಮಾರು 15,000 ಸೈನಿಕ ... ಟಿಪ್ಪು ಸೇನೆಯನ್ನು ಪರಾಭವಗೊಳಿಸಿತ್ತು.

...ನ್ನ ತಂದೆಯ ಕಾಲದಿಂದಲೂ ಕೊಡಗಿನಲ್ಲಿ ಪದೇಪದೇ ...ಯ ಹೇಳುತ್ತಿರುವುದಕ್ಕೆ ಶಾಶ್ವತ ಅಂತ್ಯಗಾಣಿಸಲು ...ದ ಟಿಪ್ಪು ಸುಲ್ತಾನ್ 1785ರ ಅಕ್ಟೋಬರ್‌ನಲ್ಲಿ ...ರ್ಘ ಏಳು ತಿಂಗಳ ಕಾಲಾವಧಿಯ ಬಂಡಾಯ ...ಲನಾ ಅಭಿಯಾನದ ಸಮೇತ ಕೊಡಗಿಗೆ ಬಂದಿಳಿದ. ... ಚೆಡ್ಡಿಗಳು ಹುಯಿಲೆಬ್ಬಿಸುತ್ತಿರುವಂತೆ 'ಟಿಪ್ಪು ನಡೆಸಿದ ...ವರ ಮಾರಣಹೋಮದ ಕಥೆ' ಹುಟ್ಟಿಕೊಂಡಿದ್ದೇ ...ಂದರ್ಭಕ್ಕೆ ಹೊಂದಿಕೊಂಡಂತೆ. 20,000 ಸಶಸ್ತ್ರ ...ರು, 10,000 ಕಾಲ್ದಳ ಸೇನೆಯ ಜೊತೆಗೆ ಮಡಿಕೇರಿಗೆ ...ಸಿದ ಟಿಪ್ಪು ಎರಡು ತುಕಡಿಗಳಲ್ಲಿ ಸೇನೆಯನ್ನು ...ಗಿನಾದ್ಯಂತ ಪಸರಿಸಿದ. ಬಂಡಾಯಗಾರರು ...ಯುಪಡೆಯುಬಹುದಾಗಿದ್ದ ಗುಡ್ಡಗಾಡು ...ದಾಣಗಳನ್ನು ಸಂಪೂರ್ಣ ನಾಶ ಮಾಡಲಾಯಿತು. ...ಸ್ ಘಾಟ್ ಮೂಲಕ ಕಾಡನ್ನು ಪ್ರವೇಶಿಸಿದ ಟಿಪ್ಪು ...ದಂಗೆ ಎದ್ದಿದ್ದ ಕೊಡವ ಸೇನೆಯನ್ನು ನಿವಾರಿಸಲು ...ಯಿತು. ಕೊಡಗಿನ ಸುತ್ತ ಪರಿಧಿಯನ್ನು ಸುತ್ತುವರೆದ ...ಒಮ್ಮೆಲೇ ಮಡಿಕೇರಿಯತ್ತ ಧಾವಿಸಿ ಬರುವಂತೆ ...ಆ ಹಾದಿಯಲ್ಲಿ ಬಂಡಾಯಗಾರರು ತಪ್ಪಿಸಿಕೊಳ್ಳದಂತೆ ... ರಚಿಸಿದ್ದ. ಹಾಗಂತ ಪ್ರತಿ ಸೈನಿಕರನ್ನು ಸಾಯಿಸುವ ...ನನ್ನೇನು ಆತ ಹೊರಡಿಸಿರಲಿಲ್ಲ. ಬಂಡಾಯಗಾರ ...ನ್ನು ಸೆರೆ ಹಿಡಿಯಬೇಕು, ಸೈನಿಕ ದರ್ಜೆಗಿಂತ ...ಟ್ಟದ ಬಂಡಾಯಗಾರರನ್ನು ಮಾತ್ರ ಸಾಯಿಸುವಂತೆ ...ಸಿದ್ದ. ಅಂದರೆ ಬಂಡಾಯದ ನಾಯಕತ್ವವನ್ನು ...ಣಿಸುವುದಷ್ಟೇ ಟಿಪ್ಪುವಿನ ಉದ್ದೇಶವಾಗಿತ್ತೆನ್ನುವುದು ...ಗುತ್ತದೆ.

...ದಾದ ನಂತರವೂ ಕೊಡಗಿನ ಬಂಡಾಯ ಸಂಪೂರ್ಣ ...ವಾಗಲಿಲ್ಲ. ಬಂಧಿಯಾಗಿದ್ದ ಪಾಳೇಗಾರ ವೀರರಾಜು ...ದಲ್ಲಿ ತಪ್ಪಿಸಿಕೊಂಡು ಕೊಡಗು ಸೇರಿದ ನಂತರ ...ಯು ಮತ್ತಷ್ಟು ಬಿರುಸುಗೊಂಡಿತ್ತು. 1789ರಲ್ಲಿ ...ರು ಸಂಸ್ಥಾನದ ಸಾಗಾಣಿಕ ಮಾರ್ಗವೊಂದರ ಮೇಲೆ ... ಹೂಡಿದ್ದ ವೀರರಾಜು, ಟಿಪ್ಪುವಿಗೆ ಸೇರಿದ್ದ ...ಾರುಗಳು ಮತ್ತು ದಾಸ್ತಾನನ್ನು ಕೊಡಗಿನ ತನ್ನ ...ಯ ಸೇನೆಯತ್ತ ಸಾಗಿಸಿದ್ದ. ಆಗ ಗುಲಾಮ್ ಅಲಿ ...ತ್ವದಲ್ಲಿ ಸೇನಾ ತುಕಡಿಯನ್ನು ಟಿಪ್ಪು ಕೊಡಗಿಗೆ ...ಸಿದ್ದ. ಆ ಬೃಹತ್ ಸೇನೆಯ ಎದುರು ಕೊಡವ ...ಸೈನಿಕರು ಮಣಿದರಾದರು, ಗುಲಾಂ ಅಲಿ ತನ್ನ ...ನ್ನು ಮಂಗಳೂರಿನತ್ತ ಕೊಂಡೊಯ್ಯುತ್ತಿದ್ದಾಗ ...ಕೂರು ಕಣಿವೆಯ ಬಳಿ ದಾಳಿಗೆ ತುತ್ತಾಗಿ ಅಪಾರ ...ಲ್ಲಿ ಸೈನಿಕರನ್ನು ಕಳೆದುಕೊಂಡಿದ್ದ. ಆನಂತರ ನಾಲ್ವರು ...ಕರ ನೇತೃತ್ವದಲ್ಲಿ ಸೇನೆಯನ್ನು ಟಿಪ್ಪು ಕೊಡಗಿನತ್ತ ...ದ್ದ. ಆಗಲೂ ಹೆಗ್ಗಳ ಕಣಿವೆ ಬಳಿ ವೀರರಾಜುವಿನ ...ಸೈನಿಕರ ದಾಳಿಗೆ 800 ಟಿಪ್ಪೂ ಸೈನಿಕರು ಹತರಾಗಿ ...ಸಾನಾಗಿತ್ತು.

17... ಜೂನ್‌ನಲ್ಲಿ 1,500 ಸೈನಿಕರ ಸಮೇತ ...ಕೋಟೆಯನ್ನು ವಶಪಡಿಸಿಕೊಂಡ ವೀರರಾಜು ...ವರ್ಷದ ಆಗಸ್ಟ್ ಮಾಹೆಯಲ್ಲಿ ಬೆಪ್ಪುನಾಡ್ ... ತನ್ನ ಕಬ್ಜಾಕ್ಕೆ ಪಡೆದ. 1790ರಲ್ಲಿ ... ಮತ್ತು ಮಡಿಕೇರಿ ಕೋಟೆಗಳನ್ನೂ ವಶಕ್ಕೆ ... ವೀರರಾಜು ಬ್ರಿಟಿಷರ ಜೊತೆ ಒಪ್ಪಂದ ಮಾಡಿಕೊಂಡಿದ್ದ.

ಅಷ್ಟರಲ್ಲಾಗಲೆ ಕೊಡಗಿನ ಮೇಲೆ ತನ್ನ ಸೇನೆಯ ಶಕ್ತಿ ಸಾಮರ್ಥ್ಯವನ್ನು ವ್ಯಯಿಸುತ್ತಿರುವುದು ಎಷ್ಟು ದುಬಾರಿ ಮತ್ತು ಅವ್ಯಾವಹಾರಿಕವಲ್ಲದ್ದು ಎಂಬುದು ಟಿಪ್ಪುವಿಗೂ ಮನದಟ್ಟಾಗಿತ್ತು. 25 ವರ್ಷದ ಅಂತರದಲ್ಲಿ ಕೊಡಗು ಮತ್ತು ಮಲಬಾರ್ ಬಂಡಾಯಕ್ಕಾಗಿ 1 ಲಕ್ಷದಷ್ಟು ಸೈನಿಕರನ್ನು ಕಳೆದುಕೊಂಡಿದ್ದೇನೆಂದು ಸ್ವತಃ ಟಿಪ್ಪು ಉಲ್ಲೇಖಿಸಿರುವುದನ್ನು ಬಿ. ರಿಕ್ಟರ್ ದಾಖಲಿಸಿದ್ದಾನೆ. ಕೊಡಗು ಮತ್ತು ಮಲಬಾರ್‌ಗಳ ಮೇಲೆ ದಾಳಿ ಮಾಡುವುದು ಟಿಪ್ಪುವಿನ ರಾಜತಾಂತ್ರಿಕ ತಪ್ಪು ತೀರ್ಮಾನವೂ ಆಗಿತ್ತು. ಇದು ಅರಿವಿಗೆ ಬರುತ್ತಿದ್ದಂತೆಯೇ ಕೊಡಗಿನ ಪಟೇಲರಿಗೆ 'ಫರ್ಮಾನ' (ಆದೇಶ) ಕಳುಹಿಸಿದ ಟಿಪ್ಪು ಈ ಸುದೀರ್ಘ ಸಂಘರ್ಷವನ್ನು ಮರೆತು ರಾಜಿಗೆ ಬರುವಂತೆ ಆಹ್ವಾನಿಸಿದ್ದ. ಅಲ್ಲದೇ ಈ ಬಂಡಾಯಕ್ಕೆ ಮೂಲ ಕಾರಣವಾಗಿದ್ದ ತೆರಿಗೆಯನ್ನೂ ಪ್ರಸ್ತಾಪಿಸಿದ್ದ ಟಿಪ್ಪು "ಈ ಮೊದಲು ನಿಮ್ಮ ಸ್ವಂತ 'ರಾಜ'ರಿಗೆ ಯಾವ ತೆರಿಗೆ ಕೊಡುತ್ತಿದ್ದರೋ ಅದೇ ತೆರಿಗೆಯನ್ನು ಈ ನಿಮ್ಮ ಹೊಸ 'ಸರ್ಕಾರ'ಗೆ ಕೊಟ್ಟರೂ ಸಾಕು" ಎಂದಿದ್ದ. ಆದರೆ ಕಾಲ ಮಿಂಚಿಹೋಗಿತ್ತು. ವೀರರಾಜು ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಆದಾಗಲೇ ಒಪ್ಪಂದ ಮಾಡಿಕೊಂಡಿದ್ದ. 1792ರಲ್ಲಿ ಅಧಿಕೃತವಾಗಿ ಕೊಡಗು ಮೈಸೂರು ಸಂಸ್ಥಾನದ ಕೈತಪ್ಪಿ ಹೋಯಿತು.

ಟಿಪ್ಪು ಮತ್ತು ಕೊಡವರ ನಡುವಿನ ಕಾಳಗದಲ್ಲಿ ಕಂದಾಯ ಹೇರಿಕೆ, ರೈತಾಪಿ ವರ್ಗದ ಅಸಮಾಧಾನ, ಪಾಳೇಗಾರರು ಅದನ್ನು ಬಂಡಾಯವಾಗಿಸಿದ್ದು, ಆಡಳಿತಗಾರನಾಗಿ ಟಿಪ್ಪು ಬಂಡಾಯವನ್ನು ಹತ್ತಿಕ್ಕಲು ಸುದೀರ್ಘ ಯತ್ನಿಸಿದ್ದು ಎಂಬುದಷ್ಟೇ ವಾಸ್ತವವಾಗಿ ಉಳಿಯುತ್ತವೆ.

ಈಗ ಎರಡನೇ ಮತ್ತು ಅತಿ ಪ್ರಮುಖ ಪ್ರಶ್ನೆಗೆ ಧಾವಿಸೋಣ. ಟಿಪ್ಪು ಕೊಡಗಿನಲ್ಲಿ ಮತಾಂತರ ಮಾಡಿದ್ದನ್ನು ಸುಳ್ಳೆಂದು ಹೇಳಿ ಇತಿಹಾಸಕ್ಕೆ ಅಪಚಾರ ಮಾಡಲಾಗುವುದಿಲ್ಲ. ಆತ ಮತಾಂತರ ಮಾಡಿದ್ದು ನಿಜ. ಆದರೆ, ಅದರ ಹಿಂದೆಯೂ ಕೊಡವರ ಬಂಡಾಯವನ್ನು ಹತ್ತಿಕ್ಕುವ ರಾಜತಾಂತ್ರಿಕ ಉದ್ದೇಶವಿತ್ತೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಮೊದಲೇ ತಿಳಿಸಿದಂತೆ ಟಿಪ್ಪುವಿಗೆ ಬಂಡಾಯದ ನಾಯಕತ್ವಗಳನ್ನು ಅಂತ್ಯಗಾಣಿಸುವುದಷ್ಟೇ ಮುಖ್ಯವಾಗಿತ್ತು. ಅದಕ್ಕೋಸ್ಕರ ಸೈನಿಕ ದರ್ಜೆಯ ಬಂಡಾಯಗಾರರನ್ನು ಸೆರೆಹಿಡಿದು ಸೈನಿಕರಿಗಿಂತ ಉನ್ನತ ಶ್ರೇಣಿಯ ಬಂಡಾಯಗಾರ ನಾಯಕರನ್ನು ಕೊಲೆ ಮಾಡಲು ಆದೇಶಿಸಿದ್ದ ಟಿಪ್ಪು ಅದರ ಜೊತೆಗೆ ಮತ್ತೊಂದು ಉಪಾಯವನ್ನೂ ಹೂಡಿದ್ದ. ಗುಂಪಿನ ಬಂಡಾಯದ ನಾಯಕರುಗಳನ್ನು ಇಸ್ಲಾಂಗೆ ಮತಾಂತರಿಸಿದರೆ ಅಂತಹವರು ತಮ್ಮ ಅನುಯಾಯಿಗಳ ಮೇಲೆ ಪ್ರಭಾವ ಕಳೆದುಕೊಂಡು ಅಪಾಯಕಾರಿಗಳಾಗುವುದು ನಿಲ್ಲುತ್ತದೆನ್ನುವುದು ಟಿಪ್ಪುವಿನ ಲೆಕ್ಕಾಚಾರ. ಅಂತಹ ಬಂಡಾಯದ ನಾಯಕರಲ್ಲೊಬ್ಬನಾಗಿದ್ದ ರಂಗನಾಯರ್ ಎಂಬಾತನಿಗೆ ಆಹ್ವಾನ ನೀಡಿ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿದ್ದು ಇದಕ್ಕೊಂದು ನಿದರ್ಶನ. ಇದನ್ನು ಬಹಳ ಜನ ಅನುಸರಿಸಿದ್ದನ್ನೇ ಹಲವು ಇತಿಹಾಸಕಾರರು "ಟಿಪ್ಪು ಸಾಮೂಹಿಕ ಮತಾಂತರಗೊಳಿಸುವ ಅನೂಚಾನ ಪದ್ಧತಿಯನ್ನು ಅನುಸರಿಸಿದವ ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸದವರನ್ನು ಸಾಮೂಹಿಕವಾಗಿ ಹತ್ಯೆ ಮಾಡಿದ" ಎಂದು ಚಿತ್ರಿಸಿದ್ದಾರೆ. ಟಿಪ್ಪುವಿನ ಮತಾಂತರಗಳು ಸುದೀರ್ಘ ಕಾಲದಿಂದ ತಲೆದೋರಿದ್ದ ಬಂಡಾಯವನ್ನು ಹತ್ತಿಕ್ಕುವ ರಾಜತಾಂತ್ರಿಕ ಉದ್ದೇಶದಿಂದ ಕೂಡಿದ್ದವೇ ವಿನಾಃ ಮತಾಂಧ ಪ್ರಯತ್ನವಾಗಿರಲಿಲ್ಲ!

ಇತಿಹಾಸದ ಈ ಸತ್ಯವನ್ನು ಕೊಡವರು ಅರ್ಥಮಾಡಿಕೊಳ್ಳಬೇಕಿದೆ. ಹೈದರ್ ಮತ್ತು ಟಿಪ್ಪುವಿನಂತಹ ಪರಾಕ್ರಮಿ ಸೇನೆಗೇ ಬಗ್ಗದೆ ಸುದೀರ್ಘ ಹದಿನಾರು ವರ್ಷಗಳ ಕಾಲ ನಿರಂತರ ನಿದ್ದೆಗೆಡಿಸಿದ ಹೋರಾಟ ಮತ್ತು ಶೌರ್ಯ ಹಿನ್ನೆಲೆಯ ಕೊಡವರ ಹಿಂದಿನ ಹುಟ್ಟಾ ಸೇನಾನಿ ಪೀಳಿಗೆಯವರು ಟಿಪ್ಪು ಒಬ್ಬ ಮುಸ್ಲಿಂ ಎಂಬುದನ್ನು ಹೊರಗಿಟ್ಟು ಆತನೂ ಒಬ್ಬ ವೀರ ಸೇನಾನಿ ಎಂದು ಒಪ್ಪಿಕೊಳ್ಳುವ ಜರೂರಿದೆ. ಕೇಸರಿ ಪಡೆಯ ಉನ್ಮತ್ತ ಅರಚಾಟಗಳಿಗೆ ತಲೆದೂಗುವುದನ್ನು ಬಿಟ್ಟು ಇಂಥಾ ಚಿಂತನೆಗಳತ್ತ ದೃಷ್ಟಿ ನೆಟ್ಟಾಗ ಮಾತ್ರ ಸಮಾಜದಲ್ಲಿ ಭ್ರಾತೃತ್ವ ಮುದುಗಟ್ಟುತ್ತದೆ. ಇಲ್ಲವಾದಲ್ಲಿ ಮುಗಿದುಹೋದ ಮುನ್ನೂರು ವರ್ಷಗಳ ನೆಪದಲ್ಲಿ ಹೆಣಗಳ ರಾಶಿ ಬೆಳೆಯುತ್ತಲೇ ಸಾಗುತ್ತದೆ...

– ಗಿರೀಶ್ ತಾಳಿಕಟ್ಟೆ

– ಆಧಾರ: 'ಮೇಕಿಂಗ್ ಹಿಸ್ಟರಿ- ಭಾಗ 1' (ಲೇಖಕರು: ಸಾಕೇತ್ ರಾಜನ್) ಮತ್ತು 'ಟಿಪ್ಪು ಸುಲ್ತಾನನ ಇತಿಹಾಸ (ಲೇಖಕರು: ಕೋ. ಚನ್ನಬಸಪ್ಪ)

ಟಿಪ್ಪು ಅನ್ನ ತಿಂದವರ ದನಿಯೇ ಜೋರಾಗಿದೆಯಂತಲ್ಲಾ

ಧೂತ್ತೇರಿ

▸ ಧೂಮಪೂ

ದೇಶದೆಲ್ಲೆಡೆ ಅಸಹಿಷ್ಣುತೆ ತಾಂಡವವಾಡುತ್ತಿದೆ. ಆದ್ದರಿಂದಲೇ ಸಾಹಿತಿಗಳು, ಕಲಾವಿದರು, ವಿಜ್ಞಾನಿಗಳೂ ಆತಂಕಗೊಂಡು ತಮ್ಮ ಕೈಲಾದ ಪ್ರತಿಭಟನೆ -ಅಂದರೆ ಪ್ರಶಸ್ತಿಗಳನ್ನು ಮರಳಿಕೊಡುವುದು- ಮಾಡಿದ್ದಾರೆ. ಇಂತಹ ಸಾತ್ವಿಕ ಮತ್ತು ನೈತಿಕ ಪ್ರತಿಭಟನೆಗೆ ಹೆದರಿದ ಚೆಡ್ಡಿಗಳು ರಾಷ್ಟ್ರಮಟ್ಟದಲ್ಲಿ ಚೆಡ್ಡಿ ಭೈರಪ್ಪನಿಂದ ಪ್ರತಿಭಟನೆ ಮಾಡಿಸುವುದು ಮತ್ತು ಕರ್ನಾಟಕದ ಮಟ್ಟಿಗೆ ನೋಡಿದ ಕೂಡಲೇ ಬುದ್ಧಿಮಾಂದ್ಯ ಮತಾಂಧನಂತೆ ಕಾಣುವ ಚಿದಾನಂದ ಮೂರ್ತಿಯಿಂದ ಪ್ರತಿಭಟಿಸುವುದೆಂದು ನಿರ್ಧರಿಸಿದರಂತಲ್ಲ. ಅದರಂತೆ ಮಾಡಿದಾಗ ದೆಹಲಿಯ ರಾಷ್ಟ್ರಪತಿ ಭವನದ ವಿಶಾಲ ರಸ್ತೆಯಲ್ಲಿ ನಿಂತ ಭೈರಪ್ಪ ತನ್ನ ಕೀರಲು ದನಿಯಲ್ಲಿ "ಪ್ರಶಸ್ತಿಗಳನ್ನು ವಾಪಸು ಮಾಡುತ್ತಿರುವವರೆಲ್ಲಾ ಒಂದು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡವರೇ ಆಗಿದ್ದಾರೆ" ಎಂದರಂತಲ್ಲ. ಅಲ್ಲೇ ಇದ್ದ ಪತ್ರಕರ್ತರು "ನೀವೂ ಕೂಡ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದೀರಲ್ಲ" ಎನ್ನಲಾಗಿ, ಭೈರಣ್ಣ "ಸುಳ್ಳು, ನಾನು ಯಾವತ್ತೂ ಬಿಜೆಪಿಯಲ್ಲಿ ಗುರುತಿಸಿಕೊಂಡು ರಾಜಕಾರಣ ಮಾಡಿದವನಲ್ಲ, ನಾನೇನಿದ್ದೂ ಆರೆಸ್ಸೆಸ್ಸಿನ ಪೂರ್ಣಾವಧಿ ಕಾರ್ಯಕರ್ತ" ಎನ್ನಲಿಲ್ಲವಂತಲ್ಲ, ಥೂತ್ತೇರಿ!

* * *

ಸದರಿ ಭೈರಪ್ಪ ಆರೆಸೆಸ್ಸಿನ ಸತ್ವಶಾಲಿ ಲೇಖಕ. ಆ ದೃಷ್ಟಿಯಲ್ಲಿ ಆತ ಹಿಂದೂಸ್ತಾನದ ಲೇಖಕ. ಅವರ ಕಾದಂಬರಿ ಗೃಹಭಂಗದಲ್ಲಿ ಅಪ್ಪಣ್ಣಯ್ಯ ಚೆನ್ನಿಗರಾಯ ಎಂಬ ಬ್ರಾಹ್ಮಣರು ತಮ್ಮ ಹೆಂಡತಿಯನ್ನು ಮಾತನಾಡಿಸುವುದು "ಏನೇ



ಕತ್ತೆಮುಂಡೆ, ದರಿದ್ರಮುಂಡೆ, ಬೇವರ್ಸಿ ಮುಂಡೆ" ಇತ್ಯಾದಿ ಸಂಸ್ಕೃತ ಬೈಗುಳದಿಂದ. ಬ್ರಾಹ್ಮಣನಾಗಿ ಹುಟ್ಟಿದರೂ ಇಂತಹದೊಂದು ಸಂಸ್ಕೃತಿಯನ್ನು ತನ್ನ ಕಾದಂಬರಿಯಲ್ಲಿ ದಾಖಲಿಸಿರುವುದು ಕಾಕತಾಳೀಯವಲ್ಲ. ಸದ್ಯಕ್ಕೆ ಭೈರಪ್ಪನ ಪಾತ್ರಗಳು ನಾಡಿನ ತುಂಬ, ದೇಶದ ತುಂಬಾ ಹರಡಿಕೊಂಡು ಶೂದ್ರ ಸಮೂಹವೇ ಬೆಚ್ಚಿ ಬೀಳುವಂತೆ ಮಾತನಾಡುತ್ತಿವೆಯಂತಲ್ಲ. ಇದರಲ್ಲಿ ಹೆಣ್ಣುಗಂಡೆಂಬ ಭೇದವೇ ಇಲ್ಲ. ಮೋದಿ ಕೂದಲಪ್ರೇಮಿ ಶೋಭಾಳಿಂದ ಹಿಡಿದು ಅವಳ ಮೈದುನನಂತಿರುವ ಈಶ್ವರಪ್ಪನವರೆಗೆ ಎಲ್ಲರೂ ಭೈರಪ್ಪನ ಸಾಹಿತ್ಯದಿಂದ ಪ್ರೇರಣೆ ಪಡೆದವರಂತೆಯೇ ಬೊಗಳುತ್ತಿದ್ದಾರಲ್ಲ. ಇವುಗಳಿಗೆ ಆ ಪೇಜಾವರನಾದರೂ ಒಳ್ಳೆ ಭಾಷೆ ಕಲಿಸಬಹುದಲ್ಲಾ ಎಂದು ಕನ್ನಡದ ಸುಸಂಸ್ಕೃತರು ಆಡಿಕೊಳ್ಳುತ್ತಿರುವಾಗ, ಸದರಿ ಪೇಜಾವರನೇ ತಮ್ಮ ಪಾರ್ಟಿ ಜನರ ಹಲ್ಕ ಮಾತಿಗೆ ಈವರೆಗೂ ಪ್ರತಿಕ್ರಿಯಿಸಿಲ್ಲವಂತಲ್ಲಾ, ಥೂತ್ತೇರಿ!!

* * *

ಸದ್ಯದ ತಮಾಷೆ ಎಂದರೆ ಶೋಭಕ್ಕನವರು ರಾಹುಲ್ ಗಾಂಧಿಯನ್ನು 'ಬಚ್ಚಾ' ಎಂದು ಕರೆದಿರುವುದು. ಅದಕ್ಕೆ ಕಾಂಗ್ರೆಸ್ ಕುಹಕಿಗಳು "ಈ ಶೋಭಕ್ಕನಿಗೆ ರಾಹುಲ್ ಗಾಂಧಿ ಬಚ್ಚನಂತೆಯೇ ಕಾಣಿಸಿರುವುದು ಸಹಜ. ಏಕೆಂದರೆ ಆಕೆಯ ದೃಷ್ಟಿಯಲ್ಲಿ ಯಡಿಯೂರಪ್ಪ ಮಾತ್ರ ಪ್ರೌಢ ಮತ್ತು ಅನುಭವೀ ವೃದ್ಧ. ಅವರ ಅಣ್ಣನಂತೆ ಕಾಣುವ ಮೋದಿಯಂತೂ ಹೆಂಡತಿಯಿಂದ ತಪ್ಪಿಸಿಕೊಂಡು ಗೃಹಸ್ಥನಂತೆ ಮಾತನಾಡುವ ಸಭ್ಯ. ಆದರೆ ದೊಡ್ಡ ತಪುವಿನ ಮೇಲೆ ಹಾರಲು ಹಾತೊರೆಯುವ ಗಿಡ್ಡ ಕರುವಿನಂತೆ ಕಾಣುವ ರಾಹುಲ್ ಬೀಜದ ಕರು ಎಂಬುದು ಆಕೆಗೆ ಗೊತ್ತಿಲ್ಲ. ನಮ್ಮ ಈ ಕರು ಎಷ್ಟು ಮರ್ಯಾದಸ್ಥ ತಳಿ ಎಂದರೆ, ತನ್ನ ಅಪಾಯಕಾರಿ ಪ್ರಾಯವನ್ನೆಲ್ಲಾ ಪರದೇಶದಲ್ಲೇ ಕಳೆದು, ಮೋಸಗಾರ ಮೋದಿಗಿಂತಲೂ ಎತ್ತರದಲ್ಲಿದೆ" ಎಂದರಂತಲ್ಲಾ, ಥೂತ್ತೇರಿ!!

* * *

ಆಂಜನೇಯ ಈ ಕೂಡಲೇ ರಾಜೀನಾಮೆ ಕೊಡಬೇಕೆಂದು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಗುಡುಗಿದ್ದಾರಲ್ಲಾ. ಈಗ ಬದುಕಿರುವ ಐವರಲ್ಲಿ ಯಾರು ಇಂತಹ ಘರ್ಜನೆ ಮಾಡಿದವರೆಂದು ನೋಡಿದರೇ ಭ್ರಷ್ಟತೆಯನ್ನು ದಕ್ಷತೆಯಿಂದ ನಿಭಾಯಿಸಿದ ಯಡಿಯೂರಪ್ಪನವರಂತಲ್ಲಾ. ಯಡಿಯೂರಪ್ಪನವರ ಗುಡುಗಿನಲ್ಲೂ ಒಂದು ಅನಾಹುತಕಾರಿ ಎಚ್ಚರಿಕೆಯಿದೆ. ಅದೇನೆಂದರೆ ಲಂಚವನ್ನು ಮನೆಯಲ್ಲೇ, ಅದೂ ಟಿವಿ ಮಾಧ್ಯಮದವರ ಎದುರಲ್ಲೇ ತೆಗೆದುಕೊಳ್ಳಬಾರದು. ಚೆಕ್ ಮುಖಾಂತರ ತೆಗೆದುಕೊಂಡರೆ ಅದು ಈ ಜಗತ್ತಿಗೇ ಗೊತ್ತಾಗುವುದಿಲ್ಲ! ಹಾಗೇ ಮಾಡಿದ ಯಡಿಯೂರಪ್ಪ ಮುಂದೆ ಕೊಂದರೆ ಅನುಭವಿಸುವುದಾದರೆ ಈ ಚೆಕ್ಕಿನ ಪರಿಣಾಮದಿಂದಲೇ ಅಂತಲ್ಲಾ. ಅದೇನಾ ದರಾಗಲಿ, ಭಲೆ ಯಡಿಯೂರಪ್ಪ, ನಿಮ್ಮ ಭ್ರಷ್ಟ ವಿರೋಧಿ ಗರ್ಜನೆ ಸಕಾಲಿಕ ಮತ್ತು ಸೂಕ್ತ. ನಿಮ್ಮ ಕಾಲದಲ್ಲೇ ಸುಮ್ಮನಿದ್ದ ಪ್ರಾಮಾಣಿಕ ಸಜ್ಜನರು ಇಂದೂ ಹಾಗೇ ಇರುವುದು ಅಕ್ಷಮ್ಯ. ಭ್ರಷ್ಟತೆಯ ಸುಳಿಗೆ ಸಿಕ್ಕಿ ನೋವು ಅನುಭವಿಸುತ್ತಿರುವ ವ್ಯಕ್ತಿಯ ಸೂಚನೆ ಸಹಜವಲ್ಲವೆ, ಥೂತ್ತೇರಿ!!!

* * *

ನಮ್ಮ ಆಧುನಿಕ ಪೆರಿಯಾರ್ ರಾಮನಂತಿರುವ ಸಿದ್ದರಾಮಯ್ಯನಿಗೆ ಹೇಳಿಮಾಡಿಸಿದ ಆಂಜನೇಯ ಅದೇನೋ ಮಾಡಲು ಹೋಗಿ ಇನ್ನೇನೋ ಮಾಡಿಕೊಂಡರಂತಲ್ಲಾ. "ಒಂದು ಕಾಲದಲ್ಲಿ ತಿಂಡಿ ಊಟಕ್ಕೆ ತೊಂದರೆಪಡುತ್ತಿದ್ದ ನಾನು ಈಗ ಹಾಗಿಲ್ಲ, ಬನ್ನಿ, ತಿಂಡಿ ತಿನ್ನಿ, ಶುಗರ್‌ಲೆಸ್ ಕಾಫಿ ಕುಡಿಯಿರಿ" ಎಂದು ಮನೆಯ ಮುಂದೆ ಹೋಗುವವರನ್ನೆಲ್ಲಾ ಕರೆದು ಗಂಡಹೆಂಡತಿ ಸತ್ಕರಿಸುವುದೇ ಮುಳುವಾಗಿ ಖೆಡ್ಡಾವೊಂದಕ್ಕೆ ಸಿಕ್ಕಿಬಿದ್ದಿದ್ದಾರಂತಲ್ಲಾ. ಸದ್ಯದ ಪ್ರಕರಣದ ಬಗ್ಗೆ ಡಿಎಸ್‌ಎಸ್ ಹಾಸ್ಟಲಿನ ಹುಡುಗರು "ಈ ಟಿವಿ ಮಾರಿ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟತೆಯ ಕಾಲದಲ್ಲಿ ಎಲ್ಲಿದ್ದಳು? ಈಕೆಗೆ ಅಶೋಕನ ಮನೆ ಗೊತ್ತಿರ ಲಿಲ್ಲವೆ? ಸೋಮಣ್ಣನ ಅಡ್ರೆಸ್ಸಿರಲಿಲ್ಲವೆ? ರೇಣುಕಾಚಾರಿ ಇದ್ದಲ್ಲಿಗೆ ಎಂದಾದರೂ ಹೋಗಿದ್ದಳೆ? ಮೈಸೂರು ರಾಮದಾಸನ ಮನೆ ಹತ್ತಿರ ಎಂದಾದರೂ ಕಂಡಳೆ? ಒಂದು ಕಾಲದಲ್ಲಿ ಯಾರ ಮನೆಗೂ ಹೋಗಲಾರದ ನಾವು ಇಂದು ನಮ್ಮ ಮನೆಗೆ ಎಲ್ಲರನ್ನು ಸೇರಿಸಿದ್ದೇ ಪ್ರಮಾದವಾಗಿದೆ. ಇದೆಲ್ಲಾ ದಲಿತ ವಿರೋಧಿ ಚೆಡ್ಡಿಗಳ ಕುತಂತ್ರ" ಎಂದು ಪ್ರಶ್ನಿಸುತ್ತಾ ಘೋಷಣೆ ಕೂಗುತ್ತಿದ್ದಾರಂತಲ್ಲಾ, ಥೂತ್ತೇರಿ!!

* * *


ನಾಡಿನಾದ್ಯಂತ ಟಿಪ್ಪು ಜಯಂತಿ ನಡೆದುಹೋಗಿದೆ. ಈ ದೇಶಭಕ್ತನ ಜಯಂತಿ ಎರಡು ಜನ ದೇಶದ್ರೋಹಿಗಳ ಜೀವ ಪಡೆದಿದೆ. ಆದರೆ ಯಾರ ಜೀವವೂ ಹೋಗಬಾರದು. ಪ್ರತಿಭಟನೆ ಸಾವಿನಲ್ಲಿ ಅಂತ್ಯವಾಗಬಾರದು. ಮಹಾವಿಷ್ಣುವಿನ ಹೊಕ್ಕಳದಲ್ಲಿನ ಕಮಲದ ಮೇಲೆ ಬ್ರಹ್ಮ ಕುಳಿತಿದ್ದಾನೆ. ಆ ಕಮಲವನ್ನೇ ತಮ್ಮ ಪಾರ್ಟಿಯ ಚಿಹ್ನೆಯಾಗಿ ಮಾಡಿಕೊಂಡ ಈ ಬ್ರಾಹ್ಮಣರು ನೂರಾರು ವರ್ಷದ ಹಿಂದೆ ಭಾರತಕ್ಕೆ ಮುಸ್ಲಿಮರು ಬಂದಾಗ ಅವರ ಆಸ್ಥಾನದಲ್ಲಿ ಕರಣಿಕರಾದರು. ಸಂಗೀತಗಾರರಾದರು, ನರ್ತಕಿಯರಾದರು. ಹಾಗೆ ಬಂದ ಬ್ರಿಟಿಷರ ಆಡಳಿತದಲ್ಲೂ ಹಂಗೇ ಆದರು. ಇವರು ದೇಶದ್ರೋಹಿ ಎಂದು ಕೂಗುವ ಟಿಪ್ಪು ಸಂಪುಟದಲ್ಲಿ ಯಾವ ಒಕ್ಕಲಿಗನಾಗಲಿ, ಲಿಂಗಾಯತನಾಗಲಿ ಇರಲಿಲ್ಲ. ಬರೀ ಬ್ರಾಹ್ಮಣರೇ ತುಂಬಿಕೊಂಡಿದ್ದರು. ಇವರಿಗೆಲ್ಲಾ ಯಜಮಾನ ಪೂರ್ಣಯ್ಯ. ಹೀಗೆ ಟಿಪ್ಪುವಿನಿಂದ ಭೂಮಿ ಪಡೆದು, ಆತನ ಅನ್ನ ತಿಂದ ಜನರಿಂದು ಆತ ದೇಶದ್ರೋಹಿ, ಕನ್ನಡ ದ್ರೋಹಿ ಎಂದು ಪ್ರತಿಭಟನೆ, ಬಂದ್ ಕಾರ್ಯಕ್ರಮ ಮಾಡುತ್ತಿವೆಯಲ್ಲಾ, ಇದಕ್ಕಿಂತ ಯಾವ ದ್ರೋಹವನ್ನೂ ಈ ನಾಡು ಕಂಡಿಲ್ಲವಂತಲ್ಲಾ, ಥೂತ್ತೇರಿ!!!

ಮಾಯಕೊಂಡ

ಮಾಜಿಮಂತ್ರಿ ಶಿವಮೂರ್ತಿ ನಾಯ್ಕನ 'ಬಂಜಾರ ಕುಟುಂಬಕಂ'

ಶಿವಮೂರ್ತಿ ನಾಯ್ಕನೆಂಬ ಶಾಸಕ ಮಹಾಶಯನಿಂದ ಮಾಯಕೊಂಡದ ಜನತೆ ಅನುಭವಿಸುತ್ತಿರುವ ಯಾತನೆಯನ್ನು 'ಪತ್ರಿಕೆ' ಹಿಂದಿನ ಸಂಚಿಕೆಯಲ್ಲಷ್ಟೇ ವಿವರವಾಗಿ ಬಿಡಿಸಿಟ್ಟಿತ್ತು, ಇದೀಗ ಆತನ ದ್ರೋಹದ ಮತ್ತೊಂದು ಮಗ್ಗುಲನ್ನು ಅನಾವರಣ ಮಾಡುತ್ತಿದೆ.

ಪರಮ ಸ್ವಾರ್ಥಿ ಶಿವಮೂರ್ತಿ ನಾಯ್ಕ ರಾಜಕೀಯ ಮುಖಂಡನಾಗಿ ಅವತರಿಸಿದ್ದು ಕೇವಲ ಮಾಯಕೊಂಡದ ಅಭಿವೃದ್ಧಿಗೆ ಮಾತ್ರ ಮಾರಕವಾಗಲಿಲ್ಲ, ಆತನು ಪ್ರತಿನಿಧಿಸುವ ಇಡೀ ಬಂಜಾರ (ಲಂಬಾಣಿ) ಸಮುದಾಯವೇ ಪಶ್ಚಾತ್ತಾಪ ಪಡುವಂತಾಗಿದೆ. ಯಾವ ಲಂಬಾಣಿ ಜನ ಶಿವಮೂರ್ತಿ ನಾಯ್ಕನನ್ನು ಹೋರಾಟಗಾರ, ಶಿಕ್ಷಣ ಕಳಕಳಿಯುಳ್ಳ ನಾಯಕ ಅಂತ ಪೊಲಿಟಿಷಿಯನ್ ಮಾಡಿದ್ದರೋ ಅದೇ ಜನ ಶಿವಮೂರ್ತಿ ನಾಯ್ಕನನ್ನು ತಮ್ಮ ಸಂಘದ ಆವರಣದಿಂದ ಹೊರದಬ್ಬಲು



ಕೋರ್ಟ್ ಮೆಟ್ಟಿಲೇರಲೂ ಸಿದ್ಧವಾಗುತ್ತಾರೆಂದರೆ ಆತ ತನ್ನ ಸಮುದಾಯಕ್ಕೆ ಅದಿನ್ನೆಂಥಾ ಟಾರ್ಚರ್ ಕೊಟ್ಟಿರಬೇಡ!

19.8.2015ರಂದು ಸ್ವತಃ ಹೈಕೋರ್ಟ್ 'ಹದಿನೈದು ವರ್ಷಗಳಿಂದ ಬಂಜಾರ ಸಂಘದಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ನೀನು ನಡೆಸಿರೋ ಅವ್ಯವಹಾರ ಸಾಬೀತಾಗಿದ್ದು ನಿನ್ನ ಮೇಲೆ ಏಕೆ ಕ್ರಮ ಜರುಗಿಸಬಾರದು' ಎಂಬ ಖಾರದ ಪ್ರಶ್ನೆಯನ್ನು ಶಿವಮೂರ್ತಿ ಮುಖಕ್ಕೆ ಎಸೆದಿದೆ. ಅಲ್ಲದೇ ಶಿವಮೂರ್ತಿ ನಾಯ್ಕನ ಹದ್ದುಬಸ್ತಿನಲ್ಲಿ ನಡೆದುಕೊಂಡು ಬಂದಿದ್ದ ಸಂಘವನ್ನು ಕೂಡಲೇ ವಜಾ ಮಾಡಿ ಸದಸ್ಯರ ಚುನಾವಣೆಯ ಮೂಲಕ ನೂತನ ಪದಾಧಿಕಾರಿಗಳ ತಂಡವನ್ನು ರಚಿಸುವಂತೆಯೂ ಹೈಕೋರ್ಟ್ ತಾಕೀತು ಮಾಡಿರೋದು ಶಿವಮೂರ್ತಿ ನಾಯ್ಕ ಘನ ತಿನ್ನಾಟದ ಅಸಲಿಯತನ್ನು ಕಳಚಿಡುವಂತಿದೆ.

ಇದೆಲ್ಲಾ ವೃತ್ತಾಂತ ಶುರುವಾಗೋದು 1981ರಿಂದ. ಆಗಿನ್ನೂ ಶಿವಮೂರ್ತಿ ನಾಯ್ಕನದು ಹುಮ್ಮಸ್ಸಿನ ಯೌವ್ವನ. ಲಂಬಾಣಿ ಸಮುದಾಯದಿಂದ ಬಂದಿದ್ದರೂ ಒಂದಷ್ಟು ಓದಿಕೊಂಡಿದ್ದರಿಂದ ಹೋರಾಟ, ಚಳವಳಿ, ಸಾಮಾಜಿಕ ನ್ಯಾಯ, ಸಮಾನತೆ ಎಂಬ ಮಾತುಗಳನ್ನಾಡಿಕೊಂಡು ತಿರುಗಾಡುತ್ತಿದ್ದ. ಹಾಗಾಗಿ ಲಂಬಾಣಿ ಸಮುದಾಯದವರು ಕೂಡಾ ಈತ ನಮ್ಮನ್ನು ಉದ್ಧಾರ ಮಾಡಲಿರುವ ಯುವನಾಯಕ ಅಂತಲೇ ಭ್ರಮಿಸಿದ್ದರು. ಆಗ ರಾಘವೇಂದ್ರನಾಯ್ಕ, ಜಯದೇವನಾಯ್ಕ ಎಂಬಿಬ್ಬ ದೋಸ್ತಿಗಳೊಂದಿಗೆ ಸೇರಿ ಶಿವಮೂರ್ತಿ ನಾಯ್ಕ 1981ರಲ್ಲಿ ಚಿತ್ರದುರ್ಗದಲ್ಲಿ ಬಂಜಾರ (ಲಂಬಾಣಿ) ಯುವಕರ ಸಂಘವನ್ನು ಹುಟ್ಟುಹಾಕಿದ್ದ. ಇನ್ನು ಆ ಸಂಘಕ್ಕೆ ಶಿವಮೂರ್ತಿ ನಾಯ್ಕನೇ ಅಧ್ಯಕ್ಷನಾಗಿದ್ದ ಎಂಬುದನ್ನು ಬಿಡಿಸಿಹೇಳುವ ಅಗತ್ಯವಿಲ್ಲ. ಅದೇ ವೇಳೆಗೆ ದಾವಣಗೆರೆ ತಾಲೂಕು ಹೆಚ್.ಕಲಪನಹಳ್ಳಿಯಲ್ಲಿ ಲಂಬಾಣಿ ಸಮಾಜದ ಗೌರೀಬಾಯಿ ಎಂಬಾಕೆಯ ಮರ್ಡರ್ ನಡೆದುಹೋಗಿತ್ತು, ಅದನ್ನೇ ಕೈಗೆತ್ತಿಕೊಂಡು ಚಳವಳಿಯ ರೂಪ ನೀಡಿದ ಶಿವಮೂರ್ತಿ ನಾಯ್ಕ ಇಡೀ ರಾಜ್ಯದ ಲಂಬಾಣಿ ಸಮುದಾಯ ತನ್ನತ್ತ ಭರವಸೆಯ ನೋಟ ಬೀರುವಂತೆ ಮಾಡಿದ್ದ. ಅಷ್ಟಲ್ಲದೇ ರಾಜಕೀಯ ಮುಖಂಡರುಗಳೂ ಶಿವಮೂರ್ತಿಯತ್ತ ಕೊಂಚ ದಿಟ್ಟಿ ಬೀರಿದ್ದರು.


ಲಂಬಾಣಿ ಸಮುದಾಯದ ಮಕ್ಕಳಿಗೆ ಸೂಕ್ತ ಶಿಕ್ಷಣ ಸಿಕ್ಕರೆ ಮಾತ್ರ ಅವರು ತಮ್ಮ ಶೋಷಿತ ಬದುಕಿನಿಂದ ಹೊರಬರಬಲ್ಲರು ಎನ್ನುವ ಸ್ಲೋಗನ್ ಹಿಡಿದು ಲಂಬಾಣಿ ಸಮುದಾಯವನ್ನು ಎಡತಾಕುತ್ತಿದ್ದ ಶಿವಮೂರ್ತಿ ನಾಯ್ಕನನ್ನು ಜನ ನಂಬಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಶಿವಮೂರ್ತಿಯ ಅದೃಷ್ಟವೋ ಎಂಬಂತೆ ಅದೇವೇಳೆಗೆ ಅವಿಭಜಿತ ಚಿತ್ರದುರ್ಗ ಜಿಲ್ಲೆಗೆ ಸೇರಿದ್ದ ದಾವಣಗೆರೆಯ ನಾಗಮ್ಮ ಕೇಶವಮೂರ್ತಿಯವರು ಕೂಡಾ ಗುಂಡೂರಾಯರ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಯಾಗಿದ್ದರು. ಗೌರೀಬಾಯಿ ಮರ್ಡರ್ ಹೋರಾಟದಿಂದ ಹೈಲೈಟಿಗೆ ಬಂದಿದ್ದ ಶಿವಮೂರ್ತಿ ನಾಯ್ಕನ ಬಗ್ಗೆ ನಾಗಮ್ಮ ಒಳ್ಳೆಯ ಅಭಿಪ್ರಾಯವನ್ನೇ ಇಟ್ಟುಕೊಂಡಿದ್ದರು.

ಇದನ್ನೇ ಬಂಡವಾಳ ಮಾಡಿಕೊಂಡ ಶಿವಮೂರ್ತಿ, ಮಂತ್ರಿ ನಾಗಮ್ಮನವರ ಮೂಲಕ ತಾನು ಹುಟ್ಟುಹಾಕಿದ್ದ ಲಂಬಾಣಿ ಸಂಘದ ಹೆಸರಲ್ಲಿ ಪ್ರೌಢಶಾಲೆಗಳನ್ನು ಶುರುಮಾಡಲು ಮುಂದಾದ. ಅದರ ಅಂಗವಾಗಿ ಮೊದಲು ಶುರುವಾದದ್ದು ಹೊನ್ನೂರಿನ (ದಾವಣಗೆರೆ ತಾಲೂಕು) ಪಂಪಾರೂಢ ಸ್ವಾಮಿ ಪ್ರೌಢಶಾಲೆ. ಆದಾದನಂತರ ಮಾಚಿಹಳ್ಳಿ, ಹರಪನಹಳ್ಳಿ ತಾಲೂಕು ಭಾರತೀ ಕಾಲೋನಿ, ದಾವಣಗೆರೆಯ ಚಿಕ್ಕಬೆನ್ನೂರು, ಚಿತ್ರದುರ್ಗ ತಾಲೂಕು ಇಸಾಮುದ್ರ, ಭರಮಸಾಗರ ಹೀಗೆ ಆರು ಪ್ರೌಢಶಾಲೆಗಳು ಮತ್ತು ಆರು ವಿದ್ಯಾರ್ಥಿ ನಿಲಯಗಳನ್ನೂ ಶಿಕ್ಷಣ ಮಂತ್ರಿ ನಾಗಮ್ಮ ಮಂಜೂರು ಮಾಡಿಕೊಟ್ಟಿದ್ದರು.

ಹೀಗೆ ಶಿಕ್ಷಣ ಸಂಸ್ಥೆಗಳ ಮೂಲಕ ಪ್ರವರ್ಧಮಾನಕ್ಕೆ ಬಂದ ಶಿವಮೂರ್ತಿ ನಾಯ್ಕ ನಿಧಾನವಾಗಿ ರಾಜಕೀಯಕ್ಕೂ ಎಂಟ್ರಿ ಕೊಟ್ಟ. ಅದಕ್ಕೂ ನಾಗಮ್ಮ ಕೇಶವಮೂರ್ತಿಯವರ ಕೃಪಾಶೀರ್ವಾದವೇ ಇತ್ತು, 1983ರ ವೇಳೆಗಾಗಲೇ ಬಂಗಾರಪ್ಪನ ಬಾಲ ಹಿಡಿದುಕೊಂಡ ಶಿವಮೂರ್ತಿ ಭರಮಸಾಗರ ವಿಧಾನಸಭಾ ಕ್ಷೇತ್ರದ ಶಾಸಕನಾಗಿಯೂ ಆಯ್ಕೆಯಾಗಿ ಬಿಟ್ಟ. ಆಗ ಕರುಳು ತುಂಬಾ ಖುಷಿ ಅನುಭವಿಸಿದ್ದು ಅದೇ ಲಂಬಾಣಿ ಸಮುದಾಯ. ಆದರೆ ಯಾವಾಗ ಶಿವಮೂರ್ತಿ ನಾಯ್ಕ ರಾಜಕಾರಣಿಯಾಗಿ ಬಂಗಾರಪ್ಪನ ಕ್ಯಾಂಪಿನಲ್ಲಿ ಗುರುತಿಸಿಕೊಂಡನೋ, ಆಗಿನಿಂದಲೇ ಸಮಾಜದ ಉದ್ಧಾರದ ಕನಸನ್ನು ಮರೆಯ ತೊಡಗಿದ. 6 ಪ್ರೌಢಶಾಲೆಗಳು, 6 ವಿದ್ಯಾರ್ಥಿನಿಲಯಗಳು ಶಿವಮೂರ್ತಿನಾಯ್ಕನಿಗೆ ಸಖತ್ ಆಮದನಿ ತಂದುಕೊಡುವ ಮೂಲಗಳಾದವೇ ಹೊರತು ಶಿಕ್ಷಣ ಕಾಳಜಿಯನ್ನು ಅವು ಕಾಯ್ದುಕೊಂಡದ್ದು ಅಷ್ಟಕ್ಕಷ್ಟೆ ಇದೆ. 1992ರಲ್ಲಿ ಅಬಕಾರಿ ಮಂತ್ರಿಯಾದ ನಂತರವಂತೂ ಶಿವಮೂರ್ತಿಗೆ ಅಧಿಕಾರ ಮತ್ತು ದುಡ್ಡಿನ ಮದ ನೆತ್ತಿಗೇರಿತು.

ಕಾಸು ತಿಂದ ಖದೀಮ

1981 ರಿಂದ 1995ರ ತನಕ ಬಣಜಾರ (ಲಂಬಾಣಿ) ಯುವಕ ಸಂಘದ ಪ್ರಶ್ನಾತೀತ ಅಧ್ಯಕ್ಷನಾಗಿ ಘನವಾಗಿ ಬಲಿತುಕೊಂಡಿದ್ದ ಶಿವಮೂರ್ತಿ ನಾಯ್ಕ



ಅಕ್ಷರಶಃ ಧನದಾಹಿಯಾಗಿಬಿಟ್ಟಿದ್ದ. 1995-96ರಲ್ಲಿ ಡಿ. ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು (ಭರಮಸಾಗರದಲ್ಲಿ), ಅದೇ ಬಣಜಾರ (ಲಂಬಾಣಿ) ಯುವಕ ಸಂಘದ ಹೆಸರಲ್ಲಿ ಮಂಜೂರಾದದ್ದೇ ತಡ ಶಿವಮೂರ್ತಿ ನಾಯ್ಕ ಶಿಕ್ಷಣ ಕ್ಷೇತ್ರದ ದರೋಡೆ ದಣಿಯಾಗಿ ರೂಪಾಂತರಗೊಂಡ. ಅಂದಹಾಗೆ, 1981ರಲ್ಲೇ ಸಚಿವೆ ನಾಗಮ್ಮರು ಲಂಬಾಣಿ ಯುವಕ ಸಂಘಕ್ಕೆ 6 ವಿದ್ಯಾರ್ಥಿ ನಿಲಯಗಳನ್ನೇನೊ ಮಂಜೂರು ಮಾಡಿದ್ದರು. ಆದರೆ ಹತ್ತು ವರ್ಷವಾದರೂ ಅವ್ಯಾವೂ ಕಾರ್ಯನಿರ್ವಹಿಸಲೇ ಇಲ್ಲ; ಯಾವೊಬ್ಬ ಲಂಬಾಣಿ, ದಲಿತ ವಿದ್ಯಾರ್ಥಿಗೂ ಹಿಡಿ ಅನ್ನ ಹಾಕಲಿಲ್ಲ, ಹೆಚ್ಚೂಕಮ್ಮಿ ಹದಿನೈದು ವರ್ಷಗಳತನಕ ಪ್ರತಿ ವಿದ್ಯಾರ್ಥಿನಿಲಯಕ್ಕೆ ಪ್ರತಿ ವರ್ಷ ಸರ್ಕಾರದಿಂದ ಹರಿದುಬರುತ್ತಿದ್ದ 80 ಸಾವಿರ ರೂಪಾಯಿ ಅನುದಾನವನ್ನು ಶಿವಮೂರ್ತಿ ನಾಯ್ಕ ಅನಾಮತ್ತು ತನ್ನ ಹೊಟ್ಟೆಗಿಳಿಸಿಕೊಂಡ.


6 ಪ್ರೌಢಶಾಲೆಗಳು ಆರಂಭವಾದ ನಂತರ ಬೋಧಕರು ಮತ್ತು ಬೋಧಕೇತರರು ಸೇರಿ 72 ಮಂದಿ ಅಲ್ಲಿ ಕೆಲಸ ಮಾಡುತ್ತಿದ್ದರು. ಈ ನೌಕರರ ಬಡ್ತಿ, ನಿರಂತರ ಸೇವಾ ಬಡ್ತಿ, ಪದೋನ್ನತಿ ಬಡ್ತಿ, ಗಳಿಕೆ ರಜೆಗಳ ನಗದೀಕರಣದ ಮಂಜೂರಾತಿಗಾಗಿ ಅಧ್ಯಕ್ಷ (ಅಷ್ಟೊತ್ತಿಗಾಗಲೇ ಮಾಜಿಮಂತ್ರಿ) ಶಿವಮೂರ್ತಿ ನಾಯ್ಕ ತಲಾ ಒಬ್ಬರಿಂದ 4 ಸಾವಿರದಂತೆ ಎತ್ತುವಳಿ ಮಾಡಿದ್ದ. ಈ ಹಣದ ಮೊತ್ತವೇ 2.88 ಲಕ್ಷ ರೂಪಾಯಿಯ ಆ ಕಾಲದ ದೊಟ್ಟ ಇಡಗಂಟಾಗಿತ್ತು. ಈ ಹಣವನ್ನು ಇಡಿಯಾಗಿ ತಾನೊಬ್ಬನೇ ಲಪಟಾಯಿಸುವ ಪ್ರಯತ್ನದಲ್ಲಿದ್ದ ಶಿವಮೂರ್ತಿ ನಾಯ್ಕನಿಗೆ ಸಂಘದ ಉಪಾಧ್ಯಕ್ಷ-ಕಾರ್ಯದರ್ಶಿಗಳು ಅಡ್ಡಿ ಮಾಡಿದ್ದಲ್ಲದೆ, ತಮಗೂ ಅದರಲ್ಲಿ ಪಾಲಂಬು ಎನ್ನುವ ತಕರಾರು ತೆಗೆದರು. ಅಲ್ಲಿಂದಲೇ ಬಣಜಾರ (ಲಂಬಾಣಿ) ಯುವಕರ ಸಂಘ ಸಮಾಜದ ಶೈಕ್ಷಣಿಕ-ರಾಜಕೀಯ-ಸಾಮಾಜಿಕ ಹೊಣೆಗಾರಿಕೆಗೆ ಎಳ್ಳುನೀರು ಬಿದ್ದದ್ದು.

ಅಂದರ್-ಬಾಹರ್

ಈ ಮೊದಲು 1992ರಲ್ಲಿ ಮಂತ್ರಿಯಾಗಿದ್ದ ಸಂದರ್ಭದಲ್ಲೇ ತನ್ನನ್ನೇ ಅಧ್ಯಕ್ಷನನ್ನಾಗಿಸಿಕೊಂಡು 'ಸ್ವಾಮಿ ವಿವೇಕಾನಂದ ಟ್ರಸ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದ ಶಿವಮೂರ್ತಿ ನಾಯ್ಕ ಬಣಜಾರ (ಲಂಬಾಣಿ) ಯುವಕ ಸಂಘದ ಶಿಕ್ಷಣ ಸಂಸ್ಥೆಗಳನ್ನು ವಿವೇಕಾನಂದ ಟ್ರಸ್ಟಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವ ಸಖತ್ ಹುನ್ನಾರ ರೂಪಿಸಿದ್ದ. ಆಗಲೂ ಪದಾಧಿಕಾರಿಗಳಾಗಿದ್ದ ರಾಘವೇಂದ್ರ ನಾಯ್ಕ, ಜಯದೇವನಾಯ್ಕರಿಂದ ಪ್ರತಿರೋಧ ಬಂದಿದ್ದರಿಂದ ಆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿದ್ದ. ಆದರೆ ಯಾವಾಗ ನೌಕರರ ಎತ್ತುವಳಿ ಮತ್ತು ಸರ್ಕಾರಿ ಅನುದಾನಗಳನ್ನು ತಾನೊಬ್ಬನೇ ನುಂಗಲು ಯತ್ನಿಸಿದನೋ ಆಗ ಈ ಮೊದಲು ಉಸಿರಾಡಿದ್ದ ವೈಮನಸ್ಸು ತೀರಾ ವಿಕೋಪಕ್ಕೆ ಬಂದು ತಲುಪಿತ್ತಲ್ಲದೆ ಸಂಘದ ಆಂತರಿಕ ಜಗಳ ಬೀದಿಗೂ ಬಂದಂತಾಗಿತ್ತು. 1997ರ ಹೊತ್ತಿಗಾಗಲೇ ಮಂತ್ರಿಗಿರಿಯೂ ಇಲ್ಲದೆ, ಶಾಸಕಗಿರಿಯೂ ಇಲ್ಲದೆ ಕಂಗಾಲಾಗಿದ್ದ ಶಿವಮೂರ್ತಿ ನಾಯ್ಕನನ್ನೇ ಸಂಘದಿಂದ ಹೊರಹಾಕುವ ಕಸರತ್ತು ಶುರುವಾಗಿತ್ತು.

ಅದರಂತೆ ಶಿವಮೂರ್ತಿ ನಾಯ್ಕನ ಅನುಪಸ್ಥಿತಿಯಲ್ಲೇ ಸರ್ವ ಸದಸ್ಯರ ಸಭೆ ಕರೆದ ಉಪಾಧ್ಯಕ್ಷ ಜಯದೇವನಾಯ್ಕ, ಕಾರ್ಯದರ್ಶಿ ರಾಘವೇಂದ್ರನಾಯ್ಕರು ಸತತ ಹದಿನೈದು ವರ್ಷಗಳಿಂದ ಸ್ವಯಂಘೋಷಿತ, ಪ್ರಶ್ನಾತೀತ ನಾಯಕನಾಗಿದ್ದ ಶಿವಮೂರ್ತಿನಾಯ್ಕನನ್ನು ಸರ್ವಾನುಮತದಿಂದ ವಜಾ ಮಾಡಿದ್ದರು. ಸಂಘದೊಳಗಿನ ಕಾಳಗ ತಾರಕಕ್ಕೇರಿದಾಗ ಸರ್ಕಾರ ಮಧ್ಯ ಪ್ರವೇಶಿಸಿ ಬಣಜಾರ (ಲಂಬಾಣಿ) ಯುವಕ ಸಂಘಕ್ಕೆ ಚಿತ್ರದುರ್ಗದ ಉಪವಿಭಾಗಾಧಿಕಾರಿಯನ್ನೇ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತು. ಆಡಳಿತಾಧಿಕಾರಿ ನೇಮಕದ ವಿರುದ್ಧ ನ್ಯಾಯಾಲಯದಲ್ಲಿ ಹಳೆಯ ಆಡಳಿತ ಮಂಡಳಿ ದಾವೆ ಹೂಡಿದ್ದರಿಂದ 1997ರಲ್ಲಿ ನ್ಯಾಯಾಲಯ ಆಡಳಿತಾಧಿಕಾರಿಯನ್ನು ವಜಾ ಮಾಡಿತಲ್ಲದೆ ಚುನಾವಣೆಯ ಮೂಲಕ ಪದಾಧಿಕಾರಿಗಳನ್ನು ಆಯ್ಕೆ ಮಾಡುವಂತೆ ಸೂಚನೆ ನೀಡಿತ್ತು.

ಆದರೆ ಉಪಾಧ್ಯಕ್ಷ ಜಯದೇವನಾಯ್ಕ, ಕಾರ್ಯದರ್ಶಿ ರಾಘವೇಂದ್ರನಾಯ್ಕರು 6 ತಿಂಗಳಾದರೂ ಚುನಾವಣೆ ನಡೆಸಲು ಮುಂದಾಗಲಿಲ್ಲ. ತನ್ನನ್ನು ಹೊರಹಾಕಿದ್ದ ಜಯದೇವ ನಾಯ್ಕ, ರಾಘವೇಂದ್ರ ನಾಯ್ಕರ ಮೇಲೆ ಕತ್ತಿ ಮಸೆಯುತ್ತಿದ್ದ ಶಿವಮೂರ್ತಿ ನಾಯ್ಕ ಚುನಾವಣೆ ನಡೆಸದ್ದನ್ನೇ ಬಂಡವಾಳ ಮಾಡಿಕೊಂಡು ನ್ಯಾಯಾಂಗ ನಿಂದನೆಯ ಕೇಸು ಸಮೇತ ಕೋರ್ಟ್ ಮೆಟ್ಟಿಲೇರಿದ್ದ. ಯಾವಾಗ ಶಿವಮೂರ್ತಿ ನಾಯ್ಕ ಕೇಸು ದಾಖಲಿಸಿದನೋ ಆಗ ಜಯದೇವನಾಯ್ಕ, ರಾಘವೇಂದ್ರನಾಯ್ಕರಿಬ್ಬರೂ ಬಾಲ ಸುಟ್ಟ ಬೆಕ್ಕಿನಂತೆ ತಾವೇ ಹೊದ್ದು ಹೊರಹಾಕಿದ್ದ ಶಿವಮೂರ್ತಿಯೊಂದಿಗೆ ರಾಜಿ ಮಾಡಿಕೊಂಡರು. ಪರಿಣಾಮವಾಗಿ 19 ಜನ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಜಯದೇವನಾಯ್ಕ-ರಾಘವೇಂದ್ರನಾಯ್ಕರ ಪರವಾಗಿ 10 ಜನ, ಶಿವಮೂರ್ತಿ ನಾಯ್ಕನ ಪರ 9 ಜನರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಒಳಒಪ್ಪಂದ ಮಾಡಿಕೊಂಡಿದ್ದರು. ಅಷ್ಟೇ ಅಲ್ಲ, 2001ರಲ್ಲಿ ಅದೇ ಶಿವಮೂರ್ತಿ ನಾಯ್ಕ ಮತ್ತೊಮ್ಮೆ ಅಧ್ಯಕ್ಷನಾಗಿ ಠಳಾಯಿಸಿಬಿಟ್ಟ!



ಸರ್ವಂ 'ಕುಟುಂಬ' ಮಯಂ

ಶಿವಮೂರ್ತಿ ನಾಯ್ಕ, ಜಯದೇವ ಮ
ರಾಘವೇಂದ್ರ ನಾಯ್ಕರ ಜೊತೆ ದೋಸ್ತಿ
ವಿಲಾಯಿಸಿಕೊಂಡು ಸಂಘಕ್ಕೆ ವಾಪಾಸಾದದ್ದ
ಅಧ್ಯಕ್ಷನೇನೋ ಆಗಿದ್ದ. ಆದರೆ ಈ ಹಿಂದೆ
ಸಂಘದಿಂದ ಹೊರಹಾಕಿದ್ದ ಅವರ ಮೇಲಿದ್ದ
ಅವನಲ್ಲಿ ಸಂಪೂರ್ಣ ನೆಲಕಚ್ಚಿರಲಿಲ್ಲ. ಸಮ
ಕಾಯುತ್ತಲೇ ಇದ್ದ. ಅಂತಹದ್ದೊಂದು ಸಂದ
2002ರಲ್ಲಿ ಶಿವಮೂರ್ತಿಗೆ ಒದಗಿಬಂದಿತ್ತು.
ಜನರಲ್ ಬಾಡಿ ಮೀಟಿಂಗ್ ಕರೆದ ಶಿವಮ
ಇಡೀ ಸಂಘದ ಪದಾಧಿಕಾರಿ ಬಾಡಿಯನ್ನೇ
ಹೋಲ್‌ಸೇಲಾಗಿ ವಜಾ ಮಾಡಿದ್ದ!

ವಜಾಗೊಂಡವರೆಲ್ಲ ಹೊಡೆತದಿಂದ
ಚೇತರಿಸಿಕೊಳ್ಳುವ ಮೊದಲೇ ಹೊಸ ಪದಾ
ಮಂಡಳಿಯನ್ನು ರಚಿಸಿದ ಶಿವಮೂರ್ತಿ ಅ
ಅಧ್ಯಕ್ಷನಾದದ್ದಲ್ಲದೆ ರಾಮಾನಾಯ್ಕರನ್ನು
ಕಾರ್ಯದರ್ಶಿಯನ್ನಾಗಿಸಿ, ತನ್ನ ಹೆಂಡತಿ ಡಾ
ಗೀತಾಳನ್ನು ಸಹಕಾರ್ಯದರ್ಶಿ ಮಾಡಿದ್ದ. ಜ
ತಮ್ಮ, ಅಣ್ಣ, ಅಕ್ಕ, ಅಳಿಯಂದಿರನ್ನೆಲ್ಲ ಸಂಘ
ಪದಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಇಡಿ
ಸಂಘವನ್ನೇ ಕುಟುಂಬದ ಆಸ್ತಿಯನ್ನಾಗಿ ಹೈ
ಮಾಡಿದ್ದ. ಹೊಸ ಪದಾಧಿಕಾರಿ ಮಂಡಳಿಯ
ಕುಟುಂಬದ ಹೊರತಾಗಿ ಇದ್ದ ಏಕಮಾತ್ರ
ಸದಸ್ಯನೆಂದರೆ ಅದು ಕಾರ್ಯದರ್ಶಿ ರಾಮಾ
ಮಾತ್ರ! ರಾಮಾನಾಯ್ಕರಿಗೆ ವಯಸ್ಸಾಗಿದ್ದರಿಂ
ಹೇಳಿದಂತೆ ಕೇಳಿಕೊಂಡು ಬಿದ್ದಿರುತ್ತಾರೆ ಅಂ
ಶಿವಮೂರ್ತಿ ಎಣಿಸಿದ್ದೇ ತಪ್ಪಾಯಿತು.

ಯಾವಾಗ ಶಿವಮೂರ್ತಿ ನಾಯ್ಕ, ಸಂಘ
ಸಂಸ್ಥೆಗಳ ಬೋಧಕರು ಮತ್ತು ಬೋಧಕೇತ
ಆಂತರಿಕ ವರ್ಗಾವಣೆಗೆ ಕೈಹಾಕಿ ಎತ್ತುವಳಿಗ
ನಿಂತುಬಿಟ್ಟನೋ ಆಗ ಕಾರ್ಯದರ್ಶಿ ರಾಮ
ಧ್ವನಿ ಎತ್ತಿದರು. ಅಷ್ಟಕ್ಕೂ, ವರ್ಗಾವಣೆ ಮ
ನೌಕರರ ಗಳಿಕೆ ರಜೆಯ (1 ತಿಂಗಳು) ವೇ
ನಗದೀಕರಣದ ಹೆಸರಲ್ಲಿ ಶಿವಮೂರ್ತಿ ಎ
ಮೊತ್ತವೇ ಅಜಮಾಸು 10 ಲಕ್ಷ ದಾಟುತ್ತಿ
ಕಾರ್ಯದರ್ಶಿ ಯಾಗಿ ರಾಮಾನಾಯ್ಕ ಇಂತ
ವಿರೋಧಿಸಿದ್ದಲ್ಲದೇ ಶಿವಮೂರ್ತಿನಾಯ್ಕನ
ನಡುವೆಯೂ ನೌಕರರಿಗೆ ಸಲ್ಲಬೇಕಾಗಿದ್ದ ನ
ಆರ್ಥಿಕ ಸೌಲಭ್ಯ ದೊರಕಿಸಿಕೊಡಲು ಯಾ
ಮುಲಾಜಿಲ್ಲದೆ ಸಹಿಮಾಡಿದ್ದರು. ಶಿವಮೂ
ಇಷ್ಟೇ ಸಾಕಾಯಿತು. 21.8.2004ರಂದು
ವಿಶೇಷ ಮಹಾಸಭೆ ಕರೆದಂತೆ ಮಾಡಿ, ಸಂ
ಬೈಲಾವನ್ನೇ ಬದಲು ಮಾಡಿದ ಆತ ಅಧ್ಯ
ಸಮಗ್ರ ಅಧಿಕಾರ ಬರುವಂತೆ ಮಾಡಿಕೊಂ
ರಾಮಾನಾಯ್ಕರನ್ನೂ ವಜಾಗೊಳಿಸಿದ್ದ. ಖಾ
ಕಾರ್ಯದರ್ಶಿ ಹುದ್ದೆಗೆ ತನ್ನ ಹೆಂಡತಿ ಡಾ
ಅಣ್ಣನ ಮಗಳು 17 ವರ್ಷದ (ಜನ್ಮದಿನಾ
11.9.1986) ಅಶ್ವಿನಿಯನ್ನೆ ತಂದು ಕೂರಿ

ಸತ್ತವರು ಎದ್ದು ಬಂದರು

ಶಿವಮೂರ್ತಿ ನಾಯ್ಕ ಅದೆಷ್ಟು ಹದ್ದು
ಹೋಗಿದ್ದನೆಂದರೆ ಈ ಸಭೆಗೆ ಸಂಘದ ಜನ
ಬಾಡಿಯ ಎಲ್ಲಾ ನಿರ್ದೇಶಕರುಗಳ ಸಹಿ
ಪಡೆಯಬೇಕಾಗಿತ್ತು. ಅದರಂತೆ ನಿರ್ದೇಶಕರ
ಒಬ್ಬರಾಗಿದ್ದ ಶಿವಪ್ರಕಾಶ್ ಎಂಬುವವರ ಸಹಿ
ಪಡೆದಿದ್ದ. ಅಚ್ಚರಿಯ ವಿಷಯವೇನೆಂದರೆ
ಶಿವಪ್ರಕಾಶ್ ಸಭೆ ನಡೆಯುವುದಕ್ಕೂ ಒಂಬ
ತಿಂಗಳು ಮೊದಲೇ ಅಂದರೆ, 23.11.20

...ಗಿದ್ದರು. ಶಿವಮೂರ್ತಿಯ ಆಡಳಿತದಲ್ಲಿ ಕೂಡಾ ಘೋರಿಯಿಂದ ಎದ್ದು ಬಂದು ...ದ್ದರು! ಇಂತಹ ಪ್ರಕರಣ ಇದೊಂದೇ ...ನಾಯ್ಕ ಎಂಬ ಮತ್ತೊಬ್ಬ ನಿರ್ದೇಶಕ ... ಸತ್ತು ಹೋಗಿದ್ದರೂ ಶಿವಮೂರ್ತಿಯ ... 2004ರವರೆಗೂ ಬದುಕಿದ್ದ. ಆತನೂ ...ನಡಾವಳಿ ಪುಸ್ತಕದಲ್ಲಿ ಸಹಿ ಹಾಕಿದ್ದ! ... ಸ್ಥಾನಕ್ಕೆ ಅಶ್ವಿನಿಯನ್ನೂ, ತಿಪ್ಪಾನಾಯ್ಕನ ...ಡತಿ ಡಾ|| ಗೀತಾಳನ್ನೂ ನೇಮಕ ...ಳ್ಳುವವರೆಗೆ ಅವರಿಬ್ಬರನ್ನೂ ...ರಿಸಿಕೊಂಡಿದ್ದ.

...ಂದು ಸೋಜಿಗವೆಂದರೆ 2004ರಲ್ಲಿ ಆ ... ದಿನ ಅವನ ಹೆಂಡತಿ ಇಡೀ ದಿನ ತಾನು ...ಡುತ್ತಿದ್ದ ಬೆಂಗಳೂರಿನ ವಾಣಿವಿಲಾಸ ... ಕರ್ತವ್ಯದಲ್ಲಿದ್ದಳು. ಆದರೆ ಅದೇ ದಿನ ಇನ್ನೂರೈವತ್ತು ಕಿಲೋಮೀಟರ್ ... ಚಿತ್ರದುರ್ಗದಲ್ಲಿ ನಡೆದ ಸಭೆಯಲ್ಲೂ ...ವಾಗಿ ಉಪಸ್ಥಿತಿಯಿದ್ದು ನಡಾವಳಿ ...ಲ್ಲಿ ಸಹಿ ಮಾಡಿದ್ದಾಳೆ.

...ಪೆ ಮೂರ್ನಾಲ್ಕು ವರ್ಷ ಹೊರದಬ್ಬಿಸಿಕೊಂಡ ... ಶಿವಮೂರ್ತಿನಾಯ್ಕ ಬಣಜಾರ ... ಯುವಕರ ಸಂಘದ ಸುಮಾರು 6 ... 3 ಪ್ರಥಮದರ್ಜೆ ಕಾಲೇಜುಗಳಲ್ಲಿ ...ಂದ 2015 ರ ತನಕ ಮಾಡಿದ ಅಖಂಡ ... ಸಣ್ಣದೇನೂ ಅಲ್ಲ. ಜೊತೆಗೆ ಶಿಕ್ಷಕರಿಗೆ ...ಂಕೆ, ಕಿರುಕುಳಗಳೂ ಕಮ್ಮಿಯೇನು ಇಲ್ಲ. ...ಗಿದ್ದ 6 ವಿದ್ಯಾರ್ಥಿ ನಿಲಯಗಳನ್ನು ...ಹದಿನೈದು ವರ್ಷಗಳಿಂದ ಕೋಟ್ಯಾಂತರ ... ಅನುದಾನವನ್ನೂ ನುಂಗಿ ನೀರು ...ದೇ ಸತ್ತವರ ದಾಖಲಾತಿಗಳನ್ನು ಮುಚ್ಚಿಟ್ಟು ...ಸರಲ್ಲಿ ಹೊಸ ಸದಸ್ಯರನ್ನು ...ಹಿರವಾಗಿ ನೇಮಕ ಮಾಡಿಕೊಂಡಿದ್ದ. ...ಕ್ರಮಗಳನ್ನು ಪ್ರಶ್ನಿಸಿ ರಾಮಾನಾಯ್ಕರು ... 249/2004 ಕೇಸಿನಡಿ ದಾಖಲು ... ಮೆಟ್ಟಿಲೇರಿದ್ದರು. ತನ್ನ ಜಾಗಕ್ಕೆ ಇನ್ನೂ ... ವರ್ಷ ತುಂಬಿರದ ಮಗಳು ಅಶ್ವಿನಿ ...ನೇಮಕ ಮಾಡಿಕೊಂಡಿದ್ದನ್ನು ಆಕೆಯ ...ಕ ಸಹಿತ ನ್ಯಾಯಾಲಯದ ಮುಂದಿಟ್ಟ ...ತ್ತವರ ಡೆತ್ ಸರ್ಟಿಫಿಕೇಟ್‌ಗಳೂ, ಡಾ|| ...ಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಆ ... ಮಾಡಿದ್ದ ದಾಖಲಾತಿ ಎಲ್ಲವನ್ನೂ ...ಮುಕ್ಕೆ ಸಲ್ಲಿಸಿದ್ದರು.

...ಲ್ಲಾ ಪರಿಶೀಲಿಸಿದ ನ್ಯಾಯಾಲಯ ...15ರಂದು ತೀರ್ಪು ಪ್ರಕಟಿಸಿ ಶಿವಮೂರ್ತಿ ...ತವನ್ನೇ ಅಕ್ರಮ ಮತ್ತು ಕಾನೂನು ...ದು ವಜಾ ಮಾಡಿತ್ತು. ಹೈಕೋರ್ಟ್‌ಗೆ ... ಸಲ್ಲಿಸುವ ಅವಕಾಶ ಇಲ್ಲದೇ ಇದ್ದರೂ ...ನ್ನು ಪ್ರಶ್ನಿಸಿ ಶಿವಮೂರ್ತಿ ನಾಯ್ಕ ... ಬಾಗಿಲು ತಟ್ಟಿದ್ದ. ಆತನ ಮೇಲ್ಮನವಿ ...ಖ್ಯೆ 1026, 2015) ಅಡ್ಮಿಟ್ ಮಾಡಿ ... ಕೋರ್ಟ್ 19.8.2015ರ ಉಲ್ಲೇಖದಲ್ಲಿ ... ಏಕೆ ಕ್ರಮ ಜರುಗಿಸಬಾರದು' ಎಂದು ...ಡಾದ ನಂತರವೇ ನ್ಯಾಯಾಲಯದ ... ಕ್ಷಮೆ ಕೇಳಿ ತನ್ನ ಮೇಲ್ಮನವಿಯನ್ನು ... ವಾಪಾಸ್ ಪಡೆದದ್ದು.

...ಲಯದ ಆದೇಶದಂತೆ ಇತ್ತೀಚೆಗೆ ಸಂಘದ ... ಅಸ್ತಿತ್ವಕ್ಕೆ ಬಂದಿದೆ. ಶಿವಮೂರ್ತಿಯ ...ಸಂಘಕ್ಕೆ ಮುಕ್ತಿ ಲಭಿಸಿದಂತಾಗಿದೆ. 'ದುರಂತ ...ರು 1996-97 ರಲ್ಲಿ ...ವನ್ನು ವಜಾಮಾಡಿ ನಂತರ ಅದೇ ...ಜೊಂದಿಗೆ ರಾಜಿ ಮಾಡಿಕೊಂಡು ...ಅಧ್ಯಕ್ಷನನ್ನಾಗಿ ಪ್ರತಿಷ್ಠಾಪಿಸಿದ್ದರೋ ಅದೇ ... ರಾಘವೇಂದ್ರನಾಯ್ಕ ...ಯುದೇ ಹೊಸ ಬಾಡಿಯ ...ವಾಗಿ ಆಯ್ಕೆಯಾಗಿಕೊಂಡಿದ್ದಾರೆ. ಆದರೆ ...ದ್ಧಾರಕ್ಕಾಗಿ ಶಿವಮೂರ್ತಿ ಎಂಬ ...ತೊಲಗಿಸಲು ಶ್ರಮಪಟ್ಟ ರಾಮಾನಾಯ್ಕರು ...ಯ ಕಾರ್ಯದರ್ಶಿಯಾಗಿರೋದು ...ಸ್ಥಿಯ ಸಂಗತಿ. ಇನ್ನಾದರು ಬಣಜಾರ ... ಮತ್ತು ಅದರ ಶಿಕ್ಷಣ ಸಂಸ್ಥೆಗಳು ... ಹಾದಿ ಹಿಡಿಯುವಂತಾದರೆ ಚೆನ್ನ ... ತನ್ನ ಬಳಿಯಿರುವ ಎಂಎಲ್‌ಎ ...ದುರುಪಯೋಗಪಡಿಸಿಕೊಂಡು ಶಿವಮೂರ್ತಿ ... ಹಾಕುವುದಿಲ್ಲ ಎನ್ನುವುದಕ್ಕೆ ಯಾವ ... ಇಲ್ಲ. ಹಾಗಾಗಿ ಬಂಜಾರ ... ಕಾಪಾಡುವುದಕ್ಕೂ ಜಾಗೃತವಾಗಿರುವುದು

■ ಟಿ.ಎನ್. ಷಣ್ಮುಖ

ಅಸಹಿಷ್ಣುತೆ ಹೆಚ್ಚುತ್ತಿಲ್ಲವಂತೆ!

"ಅಭಿವೃದ್ಧಿ"ಯ ಹೆಸರಲ್ಲಿ ಮತ ಯಾಚಿಸಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಕಳೆದ ಸುಮಾರು ಒಂದೂವರೆ ವರ್ಷಗಳ ಅವಧಿಯಲ್ಲಿ ಕೈಗೆತ್ತಿಕೊಂಡಂಥಾ ಒಂದು ವಿಶೇಷ "ಅಭಿವೃದ್ಧಿ" ಕಾರ್ಯಕ್ರಮದ ಬಗ್ಗೆ ಹೇಳಲೇಬೇಕು. ಅದೇನೆಂದರೆ ದೇಶದ ಅಲ್ಪಸಂಖ್ಯಾತರು, ದಲಿತರು, ಸತ್ಯಶೋಧಕರು, ಮಾನವ ಹಕ್ಕು ಹಾಗೂ ಪರಿಸರ ಹೋರಾಟಗಾರರು ಮೊದಲಾದವರ ವಿರುದ್ಧ ಅಸಹಿಷ್ಣುತೆಯ ಮಾತು ಮತ್ತು ಕೃತಿಗಳ ತೀವ್ರತೆಯನ್ನು ಹಿಂದೆಂದೂ ಇಲ್ಲದ ಮಟ್ಟಕ್ಕೆ ಏರಿಸಲಾಗಿದೆ. ಪರಿಣಾಮವಾಗಿ ಸುಪ್ರಸಿದ್ಧ ಬರಹಗಾರರು, ಇತಿಹಾಸತಜ್ಞರು, ಕಲಾಕಾರರನ್ನು ಒಳಗೊಂಡಂತೆ ನಾಡಿನ ಪ್ರಜ್ಞಾವಂತರೆಲ್ಲಾ ಹೆಚ್ಚುತ್ತಿರುವ ಅಸಹಿಷ್ಣುತೆಯ ವಾತಾವರಣದ ವಿರುದ್ಧ ಸಿಡಿದೆದ್ದಿದ್ದಾರೆ. ಪ್ರಶಸ್ತಿ ಮರಳಿಸುವಿಕೆಯಿಂದ ಹನಿಹನಿಯಾಗಿ ಪ್ರಾರಂಭವಾದ ಈ ಚಳವಳಿ ಇಂದು ತೊರೆಯ ಗಾತ್ರಕ್ಕೆ ತಲುಪಿದೆ, ಇನ್ನೂ ವಿಸ್ತರಿಸುತ್ತಲೇ ಇದೆ. ಅಂತಾರಾಷ್ಟ್ರೀಯ ಮಾಧ್ಯಮಗಳು ಸಹಿತ ಭಾರತದಲ್ಲಿ ಅಸಹಿಷ್ಣುತೆ ಹೆಚ್ಚುತ್ತಿರುವುದನ್ನು ಗುರುತಿಸಿ ಸಂಪಾದಕೀಯ ಲೇಖನಗಳನ್ನು ಪ್ರಕಟಿಸಿವೆ. ಬಹುಶಃ ಇವೆಲ್ಲದರ ಪರಿಣಾಮವಾಗಿ ತಮಗರಿವಿಲ್ಲದಂತೆ ಹುಟ್ಟಿಕೊಂಡ ಪಾಪಪ್ರಜ್ಞೆಯಿಂದ ನರಳುತ್ತಿರುವ ಸಂಘಿಗಳು ಆಕ್ರಮಣವೆ ಸಂರಕ್ಷಣೆಗೆ ಅತ್ಯುತ್ತಮ ಮಾರ್ಗ ಎನ್ನುವಂತೆ ಪ್ರಗತಿಪರರ ಮೇಲೆ ಎಗರಾಡುತ್ತಿದ್ದಾರೆ. ಬಾಯಿಗೆ ಬಂದಂತೆ ಒದರಾಡುತ್ತಿದ್ದಾರೆ. ತಮ್ಮದು ತಪ್ಪೆಂದು ತಿಳಿದಿದ್ದರೂ ಕೆಲವೊಮ್ಮೆ ಜಾಣಮೌನ ವಹಿಸುತ್ತ ಕೆಲವೊಮ್ಮೆ ಎದುರಾಳಿ ಮೇಲೆ ಮುಗಿಬೀಳುತ್ತ ಕಪ್ಪನ್ನು ಬಿಳುಪೆಂದು ಸಾಧಿಸಲೆತ್ನಿಸುತ್ತಿದ್ದಾರೆ. ಇದಕ್ಕೆ ಇತ್ತೀಚಿನ ನಿದರ್ಶನವೆಂದರೆ ಖ್ಯಾತ ಬಾಲಿವುಡ್ ನಟ ಅನುಪಮ್ ಖೇರ್. ಸಿನಿಮಾಪ್ರೇಮಿಗಳೆಲ್ಲರಿಗೂ ಸುಪರಿಚಿತ ವ್ಯಕ್ತಿಯಾದ ಈತ ಬಹಳ ಹಿಂದಿನಿಂದಲೂ ದೊಡ್ಡ ನಮೋ ಭಕ್ತ. ಈತನ ಹೆಂಡತಿ ಕಿರಣ್ ಬಿಜೆಪಿ ಟಿಕೆಟಿನಿಂದ ಸ್ಪರ್ಧಿಸಿ ಸಂಸದೆ ಆಗಿದ್ದಾಳೆ. ಖೇರ್‌ನ ಭಕ್ತಿ ಸಾರ್ವಜನಿಕವಾಗಿ ಪ್ರದರ್ಶನಗೊಳ್ಳ ತೊಡಗಿದ್ದುದು 2014ರ ಚುನಾವಣೆಗಳಿಗೂ ಸ್ವಲ್ಪ ಮುಂಚೆ. ಅಂದಿನಿಂದ ಇಂದಿನತನಕ ಈತ ಆಡಿರುವಂಥ ಕೆಲವೊಂದು ಮಾತುಗಳು, ನೀಡಿರುವಂಥ ಕೆಲವೊಂದು ಪ್ರತಿಕ್ರಿಯೆಗಳು ಮತ್ತು ಮೌನವ್ರತಗಳು ಈತನ ಅಂತರಂಗವನ್ನು ಸಂಪೂರ್ಣವಾಗಿ ಬಿಚ್ಚಿಡುತ್ತವೆ:

ಚುನಾವಣಾಪೂರ್ವದಲ್ಲಿ ಮೋದಿ ಮಂತ್ರ: ಗುಲಾಬಿ ಕ್ರಾಂತಿ, ಗುಲಾಬಿ ಕ್ರಾಂತಿ.

ಖೇರ್ ಭಜನೆ: ಮೋದಿಗೆ ಮತ ಹಾಕಿ, ಮೋದಿಗೆ ಮತ ಹಾಕಿ.

ಚುನಾವಣೆಗಳ ನಂತರ ಮೋದಿ: ಚೀನಾ, ಐರ್‌ಲ್ಯಾಂಡ್ ಮುಂತಾದೆಡೆಗಳಿಗೆ ಅಭೂತಪೂರ್ವ ವಿದೇಶ ಸಂಚಾರ ಕೈಗೊಳ್ಳುವ ಮೋದಿ ತಾನು ಸಂದರ್ಶಿಸಿದ ದೇಶಗಳ ಪೈಕಿ ಹೆಚ್ಚುಕಮ್ಮಿ ಅರೆವಾಸಿಯಷ್ಟು ದೇಶಗಳಲ್ಲಿ ಭಾರತದ ಜಾತ್ಯತೀತತೆಯನ್ನು ಲೇವಡಿ ಮಾಡುತ್ತಾನೆ. ಭಾರತದ ಪ್ರಧಾನಿ ತನ್ನದೆ ದೇಶದ ಸಂವಿಧಾನದ ಮೂಲತತ್ವಗಳಲ್ಲೊಂದಾದ ಜಾತ್ಯತೀತತೆಯನ್ನು ಹೀಗೆ ಗೇಲಿ ಮಾಡುತ್ತಿರುವುದನ್ನು ಕಂಡು ಅಂತಾರಾಷ್ಟ್ರೀಯ ಮಾಧ್ಯಮಗಳು ನಿಬ್ಬೆರಗಾಗಿವೆ.

ಖೇರ್: ಮೌನ... ಮೌನ... ಮೌನ......

ಸೆಪ್ಟಂಬರ್ 28, 2015ರಂದು ಖೇರ್: "ಇಂದು ಬೆಳಗ್ಗೆ ಸ್ಯಾನ್ ಜೋಸ್‌ನಲ್ಲಿ ನರೇಂದ್ರ ಮೋದಿಯನ್ನು ಕಂಡಾಗ ಭಾರತೀಯನಾಗಿರುವ ಬಗ್ಗೆ ಹೆಮ್ಮೆ ಎನಿಸಿತು. ಇತರ ಯಾವುದೇ ರಾಜಕಾರಣಿಗೂ ಈ ರೀತಿಯ ದೇಶಭಕ್ತಿಯ ಭಾವನೆಯನ್ನು ಬಡಿದೆಬ್ಬಿಸಲು ಸಾಧ್ಯವಾಗಿಲ್ಲ."

ಅದೇ ದಿನ ಉತ್ತರ ಪ್ರದೇಶದ ದಾದ್ರಿಯಲ್ಲಿ ಚೆಡ್ಡಿಗಳ ಒಂದು ಗುಂಪು ಇಖ್ಲಾಕ್ ಎಂಬ ಮುಸಲ್ಮಾನನ ಮನೆಗೆ ನುಗ್ಗಿ ಆತನ ಮೇಲೆ ಗೋಹತ್ಯೆಯ ಆರೋಪ ಹೊರಿಸಿ ಜಜ್ಜಿ ಜಜ್ಜಿ ಕೊಂದುಹಾಕಿದೆ. ಈ ಪ್ರಕರಣ ಅಂತಾರಾಷ್ಟ್ರೀಯ ಮಟ್ಟದಲ್ಲೂ ಭಾರಿ ಸುದ್ದಿಯಾಗಿ ವ್ಯಾಪಕ ಚರ್ಚೆಗಳಿಗೆ ಗ್ರಾಸವಾಗಿದೆ. ಅನೇಕ ಭಾರತೀಯರು ನಿರ್ಭಯಾ ಅತ್ಯಾಚಾರಕ್ಕೆ ಸ್ಪಂದಿಸಿದ ರೀತಿಯಲ್ಲೇ ಇದಕ್ಕೂ ಪ್ರತಿಕ್ರಿಯಿಸಿದ್ದಾರೆ.

ಸೆಪ್ಟಂಬರ್ 29ರಿಂದ ಅಕ್ಟೋಬರ್ 1: ದಾದ್ರಿ ದುರ್ಘಟನೆ ವಿಚಾರ ಮಾಧ್ಯಮಗಳಲ್ಲಿ ಮುಖಪುಟದ ಸುದ್ದಿಯಾಗಿ ಪ್ರಕಟವಾಗಿದೆ.

ಖೇರ್: ಮೌನ... ಮೌನ... ಮೌನ......

ಅಕ್ಟೋಬರ್ 3: ಹಲವಾರು ಮಾಧ್ಯಮಗಳು ಇದನ್ನೊಂದು ಪೂರ್ವಯೋಜಿತ ಕೋಮುವಾರು ಘಟನೆ ಎಂದು ವರದಿ ಮಾಡಿವೆ. ಬಂಧಿತರಾದ ಹತ್ಯೆಗಾರರಲ್ಲಿ ಒಬ್ಬ ಸ್ಥಳೀಯ ಬಿಜೆಪಿ ಮುಖಂಡನ ಮಗ, ಮತ್ತೊಬ್ಬ ಆತನ ಸಂಬಂಧಿ ಎಂಬುದು ಖಚಿತಪಟ್ಟಿದೆ. ಸದರಿ ಬಿಜೆಪಿ ಮುಖಂಡ ಕೇಂದ್ರ ಸಚಿವ ಮಹೇಶ್ ಶರ್ಮನೊಂದಿಗೆ ಆತ್ಮೀಯ ಭಂಗಿಯಲ್ಲಿ ನಿಂತಿರುವ ಚಿತ್ರವೊಂದನ್ನು ಆತನ ಫೇಸ್‌ಬುಕ್ ಖಾತೆಯಲ್ಲಿ ಕಾಣಬಹುದು.


ಅಕ್ಟೋಬರ್ 2, 3, 4: ದಾದ್ರಿ ದುರ್ಘಟನೆಗೆ ದೇಶದ ಉದ್ದಗಲಕ್ಕೂ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಬಾಲಿವುಡ್‌ನ ಅನೇಕ ಮಂದಿ ಬಿಜೆಪಿ ಮುಖಂಡರ ವರ್ತನೆಯನ್ನು ಟೀಕಿಸಿದ್ದಾರೆ.

ಖೇರ್: ಮೌನ... ಮೌನ... ಮೌನ......

ಸಂಘಿಗಳ ಪ್ರತಿಕ್ರಿಯೆ: ದಾದ್ರಿ ದುರ್ಘಟನೆ ನಡೆದು ಒಂದು ವಾರದ ತನಕವೂ ಕೇಂದ್ರ ಮಂತ್ರಿ ಮಹೇಶ್ ಶರ್ಮ "17ರ ಹರೆಯದ ಯುವತಿಯನ್ನು ಮುಟ್ಟಲಾಗಿಲ್ಲ" ಎಂಬಿತ್ಯಾದಿ ಹೇಳಿಕೆಗಳನ್ನು ಕೊಡುತ್ತಲೆ ಇರುತ್ತಾನೆ. ಬಿಜೆಪಿ ಎಂಎಲ್‌ಎ ಸಂಗೀತ ಸೋಮ ತಾನು ಆರೋಪಿಗಳಿಗೆ ಸಹಾಯ ಮಾಡುವೆನೆಂದು ಹೇಳುತ್ತಾನೆ. ಸಾಕ್ಷಿ ಮಹಾರಾಜ ಮತ್ತು ಯೋಗಿ ಆದಿತ್ಯನಾಥರು ಆರೋಪಿಗಳಿಗೆ ಬಹಿರಂಗವಾಗಿ ಬೆಂಬಲ ಘೋಷಿಸುತ್ತಾರೆ.

ಖೇರ್: ಮೌನ... ಮೌನ... ಮೌನ......

ಅಕ್ಟೋಬರ್ 5: ದಾದ್ರಿಯ ದುರ್ಘಟನೆ ಪೂರ್ವ ಯೋಜಿತವಾಗಿತ್ತು, ಗೋಹತ್ಯೆಯ ವದಂತಿಯನ್ನು ಮಂದಿರವೊಂದರ ಧ್ವನಿವರ್ಧಕಗಳ ಮೂಲಕ ಹರಡಿಸಲಾಗಿತ್ತು ಎಂಬ ಮಾಧ್ಯಮ ವರದಿಗಳ ಹೊರತಾಗಿಯೂ ಚೇತನ್ ಭಗತ್‌ನ ಒಂದು ಬುದ್ಧಿಹೀನ ಟ್ವೀಟ್‌ಅನ್ನು (ದಾದ್ರಿಯ ಹತ್ಯೆ ದೊಡ್ಡ ಸಂಗತಿಯಲ್ಲ ಎಂದು ಬಿಂಬಿಸುವಂತಿರುವ



ಭಗತ್‌ನ ಈ ಹೇಳಿಕೆ ನಿರೀಕ್ಷಿತವಾಗಿತ್ತು) ಅನುಪಮ್ ಖೇರ್ ಮರುಟ್ವೀಟ್ ಮಾಡುತ್ತಾನೆ - "ಒಂದು ಲಂಗುಲಗಾಮಿಲ್ಲದ ಗುಂಪು ಓರ್ವ ಅಮಾಯಕ ಭಾರತೀಯನನ್ನು ಕೊಂದುಹಾಕಿದೆ. ದಾದ್ರಿಯಲ್ಲಿ ನಡೆದುದು ಇದು. ಇದು ಬೀಫ್ ಕುರಿತೂ ಅಲ್ಲ, ಹಿಂದೂ, ಮುಸ್ಲಿಂ ಕುರಿತೂ ಅಲ್ಲ, ಯಾರು ಶ್ರೇಷ್ಠರು ಎಂಬುದರ ಕುರಿತೂ ಅಲ್ಲ."


ಅಕ್ಟೋಬರ್ 5: ನಯನತಾರಾ ಸೆಹಗಾಲ್ ಪ್ರಶಸ್ತಿ ಹಿಂದಿರುಗಿಸುತ್ತಾರೆ. ತಕ್ಷಣ ಟ್ವಿಟರ್‌ನಲ್ಲಿ ಪ್ರತಿಕ್ರಿಯೆಗಳ ಮಹಾಪೂರವೇ ಹರಿದುಬರುತ್ತದೆ.

ಅಕ್ಟೋಬರ್ 5: ಖೇರ್ ದಾದ್ರಿ ದುರ್ಘಟನೆಯನ್ನು ನೇರವಾಗಿ ಖಂಡಿಸದೆ ಕಾಶ್ಮೀರ ಪಂಡಿತರ ವಿಚಾರ ಎಳೆತರುತ್ತಾನೆ. "ದಾದ್ರಿ ಘಟನೆ ನಮ್ಮ ಪ್ರಜಾಪ್ರಭುತ್ವಕ್ಕೊಂದು ಕಪ್ಪುಚುಕ್ಕೆ. ಕಾಶ್ಮೀರದ ಪಂಡಿತರ ಹೊರವಲಸೆ ಕೂಡ. ಆಗ ಯಾವ ಸಾಹಿತಿಯೂ ಪ್ರಶಸ್ತಿ ವಾಪಸ್ ಮಾಡಿರುವುದು ನೆನಪಾಗುತ್ತಿಲ್ಲ; ದುಃಖವಾಗುತ್ತಿದೆ...." ಎಂದು ಪ್ರತಿಕ್ರಿಯಿಸುತ್ತಾನೆ.

ಇತ್ತೀಚಿನ 'ಟೈಮ್ಸ್ ಆಫ್ ಇಂಡಿಯಾ' ವರದಿಯ ಪ್ರಕಾರ ಕಳೆದ 25 ವರ್ಷಗಳಲ್ಲಿ ಕೇವಲ 1 ಪಂಡಿತ ಕುಟುಂಬವಷ್ಟೆ ತನ್ನೂರಿಗೆ ಮರಳಿದೆ. ಬಿಜೆಪಿಯ ಪ್ರತಿಯೊಂದು ಚುನಾವಣಾ ಪ್ರಣಾಳಿಕೆಯಲ್ಲಿ ಪಂಡಿತರ ವಾಪಸಾತಿ ಕುರಿತ ಭರವಸೆ ತಪ್ಪದೆ ಮುದ್ರಿತವಾಗುತ್ತದೆ. ಆದರೆ ವಾಸ್ತವ ಏನು? ವಾಜಪೇಯಿ ಸರ್ಕಾರದ 6 ವರ್ಷಗಳ ಅವಧಿಯಲ್ಲಿ ಎಷ್ಟು ಜನ ವಾಪಸಾಗಿದ್ದಾರೆ? ಕಳೆದ ಒಂದೂವರೆ ವರ್ಷಗಳಲ್ಲಿ ಮೋದಿ ಏನು ಮಾಡಿದ್ದಾನೆ? ಕಾಶ್ಮೀರದ ನೂತನ ಬಿಜೆಪಿ-ಪಿಡಿಪಿ ಸಮ್ಮಿಶ್ರ ಸರ್ಕಾರ ಏನು ಮಾಡಿದೆ?

ವಾಸ್ತವ ಏನೆಂದರೆ ಪ್ರಶಸ್ತಿ ಮರಳಿಸುವಿಕೆಗಳು ಹೆಚ್ಚಿದಂತೆ

ಬೂಸಿ ಬಸ್ಯ... ಮೋದಿ! 86



ಖೇರ್‌ನ ಸಂಕಟ ಜಾಸ್ತಿಯಾಗಿದೆ. ಆತನಿಗೆ ಏಕಾಏಕಿ ಭಾರತದ ಇಮೇಜ್ ಬಗ್ಗೆ ಆತಂಕ ಶುರುವಾಗಿದೆ. ಆರಂಭದಲ್ಲಿ ಮೌನಕ್ಕೆ ಶರಣಾಗಿದ್ದ ಈತ ಮೊದಲು ಟ್ವಿಟರ್‌ನಲ್ಲಿ ನಂತರ ಸುದ್ದಿ ವಾಹಿನಿಗಳಲ್ಲಿಯೂ ಕಿಡಿಕಾರಲಾರಂಭಿಸಿದ್ದಾನೆ. ಈತನ ಪ್ರತಿಕ್ರಿಯೆಗಳ ಮಟ್ಟ ಹೇಗಿದೆ ಎಂಬುದಕ್ಕೆ ಕೆಲವು ಉದಾಹರಣೆಗಳು: "ಅರುಂಧತಿ ರಾಯ್ ಭಾರತೀಯಳೆಂಬ ಬಗ್ಗೆ ನನಗೆ ಅನುಮಾನ", "ನಮ್ಮನ್ನು ಅಸಹಿಷ್ಣು ದೇಶ ಎಂದು ಕರೆಯುವ ಹಕ್ಕು ಯಾರಿಗೂ ಇಲ್ಲ", "ಭಿನ್ನಮತೀಯರು ರಾಷ್ಟ್ರದ ವೈರಿಗಳು."

ಕೊನೆಗೆ ಸಂಕಟ ತಡೆಯಲಾರದ ಖೇರ್, ಎಸ್.ಎಲ್ ಭೈರಪ್ಪನಂತಹ ಕೆಲವು ಸಮಾನಮನಸ್ಕರನ್ನು ಸೇರಿಸಿಕೊಂಡು ಮೊನ್ನೆ ದೆಹಲಿಯಲ್ಲಿ ಒಂದು ಪಾದಯಾತ್ರೆ ನಡೆಸಿ 'ಅಸಹಿಷ್ಣುತೆಯೆಂಬುದು ಅಸತ್ಯ' ಎನ್ನುತ್ತಾ ಅಸಹಿಷ್ಣುತೆಯನ್ನು ಪ್ರತಿಭಟಿಸುತ್ತಿರುವವರ ವಿರುದ್ಧ ರಾಷ್ಟ್ರಪತಿಯವರಿಗೆ ದೂರು ಸಲ್ಲಿಸಿದ್ದಾನೆ. ವ್ಯಂಗ್ಯ ಏನೆಂದರೆ ಜಾಥಾದಲ್ಲಿ ಭಾಗವಹಿಸಿದವರಲ್ಲಿ ಕೆಲವರು ತಮ್ಮ ಅಸಹಿಷ್ಣುತೆಯ ಸಂಸ್ಕೃತಿಯನ್ನು ತಾವಾಗಿಯೆ ಜಗಜ್ಜಾಹೀರುಗೊಳಿಸಿದ್ದಾರೆ! ಇಬ್ಬರು ಮಹಿಳಾ ವರದಿಗಾರ್ತಿಯರ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರನ್ನು ಅವಾಚ್ಯವಾಗಿ ನಿಂದಿಸಿದ್ದಾರೆ. ಬಳಿಕ ಖೇರ್ ಇದರ ಬಗ್ಗೆ ಕ್ಷಮೆ ಕೋರಿದನಾದರೂ ಆಗಲೆ ಸಾಕಷ್ಟು ಅನಾಹುತ ಆಗಿಹೋಗಿದೆ. ಪಾದಯಾತ್ರೆಯ ವೇಳೆ ಮೋದಿಯನ್ನು ಸಮರ್ಥಿಸಿಕೊಂಡ ಖೇರ್, ಜಾತ್ಯತೀತತೆ ಕುರಿತು ಮೋದಿ ಮಾಡಿದ ಟೀಕೆಗಳು ಭಾರತದ ಮಾನವನ್ನು ಕಳೆದಿಲ್ಲ ಎಂದೂ ಘೋಷಿಸಿದ್ದಾನೆ! ಈ ಸಂದರ್ಭದಲ್ಲಿ ಅನುಪಮ್ ಖೇರ್ ಜೊತೆ ನಡೆಸಿದ ಒಂದು ಕಾಲ್ಪನಿಕ ಸಂಭಾಷಣೆ:

ಪ್ರಶ್ನೆ: ಖೇರ್‌ಜೀ, ಜಾಥಾದಲ್ಲಿ ನಿಮ್ಮ ಜೊತೆಗಿದ್ದ ಇದೇ ಅಶೋಕ್ ಪಂಡಿತ್ ಹಿಂದೊಮ್ಮೆ ಕರಣ್ ಜೋಹರ್ ತನ್ನ ಅಮ್ಮನೊಂದಿಗೆ ಲೈಂಗಿಕ ಕ್ರಿಯೆ ನಡೆಸಬೇಕೆಂದು ಹೇಳಿದನಲ್ಲವೇ?

ಖೇರ್: ಅದೂ......

ಪ್ರಶ್ನೆ: ಖೇರ್‌ಜೀ, ಜಾಥಾದಲ್ಲಿದ್ದ ಅಭಿಜಿತ್ ಎಂಬಾತ ಕಾರು ಅಪಘಾತ ಪ್ರಕರಣದಲ್ಲಿ ಸಲ್ಮಾನ್ ಖಾನ್ ನೆರವಿಗೆ ಧಾವಿಸಿ ಬೀದಿಯಲ್ಲಿ ಮಲಗುವವರು ಸಾಯಲು ಅರ್ಹರು ಎಂದವನಲ್ಲವೇ? ಪಾಕಿಸ್ತಾನಿ ಗಾಯಕ ಗುಲಾಮ್ ಅಲಿಯನ್ನು "ಡೆಂಗಿ ಆರ್ಟಿಸ್ಟ್" ಎಂದು ಕರೆದವನಲ್ಲವೇ?

ಖೇರ್: ಅದೂ... ಅದೂ......

ಪ್ರಶ್ನೆ: ಖೇರ್‌ಜೀ, ನೀವು ಹೆಚ್ಚುತ್ತಿರುವ ಅಸಹಿಷ್ಣುತೆ ಕುರಿತ ಶಾರುಖ್ ಖಾನ್‌ನ ಹೇಳಿಕೆಯನ್ನು ಬೆಂಬಲಿಸಿರುವಿರಿ. ಹಾಗಾದರೆ ಅದನ್ನೇ ಹೇಳಿರುವ ಇತರರ ವಿರುದ್ಧ ರ್‍ಯಾಲಿ ಯಾಕೆ?

ಖೇರ್: ಅವರ ಪ್ರಶಸ್ತಿ ಮರಳಿಸುವಿಕೆಯ ಹಿಂದೆ ರಾಜಕೀಯ ಉದ್ದೇಶಗಳಿವೆ.

ಪ್ರಶ್ನೆ: ಖೇರ್‌ಜೀ, ನೀವು?

ಖೇರ್: ನಾನು ರಾಜಕೀಯರಹಿತ ವ್ಯಕ್ತಿ, ನಾನು ಸಹನಾಶೀಲ ವ್ಯಕ್ತಿ.

ಕೊನೆ ಪ್ರಶ್ನೆ: ಖೇರ್‌ಜೀ, ನಿಮ್ಮ 'ಅಸಹಿಷ್ಣುತೆಯೆಂಬುದು ಅಸತ್ಯ' ಜಾಥಾದಲ್ಲಿದ್ದ ನೂರಾರು ಮಂದಿ ಮಾಧ್ಯಮದವರ ವಿರುದ್ಧ ಅಸಹಿಷ್ಣುತೆ ಪ್ರದರ್ಶಿಸಿದುದಷ್ಟೆ ಅಲ್ಲ, ಓರ್ವ ಮಹಿಳಾ ಪತ್ರಕರ್ತೆಯನ್ನು ವೇಶ್ಯೆ ಎಂದು ಬೈದವರಲ್ಲವೇ? ಚಪ್ಪಲಿಯಲ್ಲಿ ಹೊಡೆಯಿರಿ ಅಂತ ಕೂಗಿದವರಲ್ಲವೇ?

ಖೇರ್: ಅದೂ... ಅದೂ... ಅದೂ.....

(ಆಧಾರ: www.truthofgujarat.com)

ಉತ್ತರ ಕನ್ನಡ: ಎಮ್ಮೆಲ್ಸಿ ಟಿಕೆಟ್‌ಗೆ ರವಿನಾಯ್ಕನ ರಂಗ ತಾಲೀಮ

ಉತ್ತರ ಕನ್ನಡದ ರಾಜಕೀಯ ರಂಗಕ್ಕೆ ರಂಗೇರುತ್ತಿದೆ. ಎರಡೇ ಎರಡು ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯುವ ಸಾಧ್ಯತೆ ಪಕ್ಕಾ ಆಗುತ್ತಿದ್ದಂತೆಯೇ ಅರಣ್ಯ ಅತಿಕ್ರಮಣದಾರರಂಥ ಅಸಹಾಯಕ ಹಳ್ಳಿಗರ ನೆಲ-ನೆಲೆ ಸಮಸ್ಯೆಯೂ ರಾಜಕೀಯಕರಣ ಆಗುತ್ತಿದೆ. ರ‍್ಯಾಲಿ-ಅಭಿಯಾನ-ಜಾತ್ರೆ-ಶೋ ಸಂಘಟಿಸುವುದರಲ್ಲಿ ನಿಸ್ಸೀಮನಾದ ವ್ಯಕ್ತಿ 'ಹುಟ್ಟು ಹಾರಾಟಗಾರ' ಎ. ರವೀಂದ್ರ ನಾಯ್ಕ್ ಅಲಿಯಾಸ್ ರವೀಂದ್ರನಾಥ ನಾಯ್ಕ್ ಕಾಂಗ್ರೆಸ್ ಟಿಕೆಟ್ ಮೇಲೆ ಕಣ್ಣಿಟ್ಟು ಅರಣ್ಯ ಸಾಗುವಳಿದಾರರ ಭರ್ಜರಿ ಸಮಾವೇಶ ನಡೆಸಿ ಆವೇಶ ಪ್ರದರ್ಶಿಸಿದ್ದಾರೆ. ರವಿಯ ಈ ಸರ್ಕಸ್ ಮತ್ತೊಂದು ಅವಧಿ ಪರಿಷತ್‌ನಲ್ಲಿ ನಿದ್ದೆ ಹೊಡೆಯುವ ಕನಸು ಕಾಣುತ್ತಿರುವ ಹಾಲಿ ಎಮ್ಮೆಲ್ಸಿ ಎಸ್.ಎಲ್.ಘೋಟನೇಕರ್ ಮತ್ತಿತರ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಅಂಡಿಗೆ ಕೆಂಡ ಸುರಿದ ಸಂಕಟ ಸೃಷ್ಟಿಸಿಬಿಟ್ಟಿದೆ!

ಜಿಲ್ಲೆಯ ಕರಾವಳಿ ಮೂಲದ ಶಿರಸಿ ರಹವಾಸಿ ರವೀಂದ್ರನಾಯ್ಕ್ ಕಳೆದ ಮೂರು ದಶಕದಿಂದ ಒಂದಿಲ್ಲೊಂದು ಸುದ್ದಿ-ಸದ್ದು ಮಾಡುತ್ತಲೇ ಬಂದಿರುವ ವ್ಯಕ್ತಿ. ಅರಣ್ಯ ಅತಿಕ್ರಮಣ ಸಕ್ರಮ, ಬುಡಕಟ್ಟು ಜನರಿಗೆ ಮೀಸಲಾತಿ, ಹೆಂಡದ ವಿರುದ್ಧ ಬಂಡಾಯ, ರವಿಕೆ ಕ್ರಾಂತಿಯಂಥ ಜನಪರ ಹೋರಾಟ ಕಟ್ಟಿದ ರವಿ ನಾಯ್ಕ ದೋಖಾ ಬ್ಯಾಂಕ್, ಶಿರಸಿ ಹಬ್ಬದಂಥ ಹುಚ್ಚಾಟಗಳನ್ನೂ ಮಾಡಿದ್ದಾರೆ. ಆತನ ವೈಶಿಷ್ಟ್ಯ ವೈರುಧ್ಯಗಳೆರಡಲ್ಲೂ ಎಂಪಿ, ಎಮ್ಮೆಲ್ಲೆ ಎಮ್ಮೆಲ್ಸಿಯಾಗುವ ಹಿಡನ್ ಅಜೆಂಡಾವೊಂದು ಸದಾ ಇದ್ದೇ ಇರುತ್ತದೆ. ತನ್ನ ಸಾಮಾಜಿಕ ಶೋಗಳ ಮೂಲಕ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಈ ಮಹತ್ವಾಕಾಂಕ್ಷಿ ಪುಢಾರಿ ಮೂವ್ವತ್ತು ತುಂಬುವ ಮೊದಲೇ ಕುಮಟೆಯಿಂದ ಎಮ್ಮೆಲ್ಲೆ ಆಗಲು ಟಿಕೆಟ್‌ಗೆ ಕಟಿಪಿಟಿ ನಡೆಸಿ ವಿಫಲನಾಗಿದ್ದ. ಮೂವತ್ತು ತುಂಬಿದಾಕ್ಷಣ ಬಂದಿದ್ದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಪರಿಷತ್ ಎಲೆಕ್ಷನ್‌ಗೆ ಸ್ಪರ್ಧಿಸಲು ಹವಣಿಸಿದ್ದ ರವಿನಾಯ್ಕ್ ಟಿಕೆಟ್ ಸಿಗದ ಸಿಟ್ಟಿಂದ ಪಕ್ಷೇತರನಾಗಿ ಅಖಾಡಕ್ಕೆ ಧುಮುಕಿ ಕವುಚಿ ಬಿದ್ದಿದ್ದ.


ಕೆಪಿಸಿಸಿ ಅಧ್ಯಕ್ಷರಾಗಿದ್ದ ಜನಾರ್ದನ ಪೂಜಾರಿಯಂಥ ಈಡಿಗರ ಲೀಡರ್‌ಗಳ ಸಖ್ಯ ಬೆಳೆಸಿಕೊಂಡಿದ್ದ ರವಿಯನ್ನು 'ಬಂ' ಮಾತ್ರ ಎಂದೂ ಹತ್ತಿರ ಸೇರಿಸಿಕೊಂಡಿರಲಿಲ್ಲ. ಇದಕ್ಕೆ ಕಾರಣ 'ಬಂ'ಗೆ ಹತ್ತಿರವಾಗಿದ್ದ ಕಳ್ಳ ಕೃಷಿ ಅಧಿಕಾರಿ ಎಂದೇ ಕುಖ್ಯಾತನಾಗಿದ್ದ ರವಿಯ ಸೋದರ ಮಾವನ ಕಿತಾಪತಿಯೇ ಕಾರಣ ಎನ್ನುವವರೂ ಇದ್ದಾರೆ. ಜನಾರ್ದನ ಪೂಜಾರಿಯಂಥ ಹಿರಿಯ ಅನುಭವಿಗಳ ಹಿತವಚನವೂ ಕೇಳದೆ ಬಂಡಾಯ ಅಭ್ಯರ್ಥಿಯಾಗಿ ಎಮ್ಮೆಲ್ಸಿಗಿರಿಗೆ ನಿಂತು ಸೋತ ರವಿ ನಂತರ ಹೋಗಿನಿಂತಿದ್ದು ಜಿಲ್ಲೆಯಲ್ಲಿ ನೆಲೆಯೇ ಇಲ್ಲದ ಜೆಡಿಎಸ್ ಅಂಗಳಕ್ಕೆ. ಒಮ್ಮೆ ಅಂಕೋಲೆಯಿಂದ ಜೆಡಿಎಸ್ ಅಭ್ಯರ್ಥಿಯೂ ಆಗಿದ್ದ ರವಿಗೆ ಠೇವಣಿಯೇ ಸಿಗಲಿಲ್ಲ. ಈತನಿಗಿಂತ 'ಬಂ' ಪಕ್ಷದ ಅಭ್ಯರ್ಥಿಯಾಗಿದ್ದ ಮಾವ ಎಸ್.ಎಂ. ನಾಯ್ಕರೇ ಹೆಚ್ಚು ಓಟು ಅಂದು ಪಡೆದಿದ್ದರು.

ಕಾಂಗ್ರೆಸ್ ಬಿಟ್ಟಿದ್ದ ರವಿ ಒಂಥರಾ ಅಂತರ್‌ಪಿಶಾಚಿ ಯಂತಾಗಿದ್ದರೂ ತನ್ನ ಸಂಘಟಿತ ಶೋ, ಸರ್ಕಸ್ ಮಾತ್ರ ನಿಲ್ಲಿಸಿರಲಿಲ್ಲ. ಜಿಲ್ಲಾ ಕಾಂಗ್ರೆಸ್‌ನಲ್ಲಿ ಮ್ಯಾಗಿಯ ಪರ್ವ ಶುರುವಾದಾಗ ನಿಧಾನ ಆಕೆಯ ಸೆರಗು ಹಿಡಿದುಕೊಂಡ ರವಿ ತಾನೊಬ್ಬ ಜನಸಮೂಹದ ನಾಯಕನೆಂದು ತೋರಿಸಿಕೊಳ್ಳಲು ಯಶಸ್ವಿಯಾದ. 'ಬಂ' ಮತ್ತು ದೇಶಪಾಂಡೆಯಂಥ ದೊಡ್ಡವರಿಗೇ ಧಿಕ್ಕಾರ ಹಾಕಬಲ್ಲ ಧೀರ ತಾನೆಂದು ಮ್ಯಾಗಿಗೆ ಮನವರಿಕೆ ಮಾಡಿಕೊಟ್ಟ ಚಾಲಾಕಿ ರವಿಯನ್ನು 2008ರಲ್ಲಿ ಶಿರಸಿ ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿದ್ದರು ಮ್ಯಾಗಿ. 25 ಸಾವಿರ ಓಟು ಪಡೆಯುವಷ್ಟರಲ್ಲೇ ಸುಸ್ತು ಹೊಡೆದು ಹೋದ ರವಿಯನ್ನು ಮತ್ತೆ ಮ್ಯಾಗಿ ನಂಬಲೇ ಇಲ್ಲ. ಹರಿಪ್ರಸಾದ್‌ರಂಥ ಈಡಿಗರ ಲೀಡರ್‌ಗಳಿಗೆ ರಹಸ್ಯವಾಗಿ ಜೋತು ಬಿದ್ದಿದ್ದ ರವಿಯನ್ನು ಮ್ಯಾಗಿ ದೂರ ಮಾಡಿ ರೌಡಿ ರಂಗಣ್ಣನೆಂದೇ ಪ್ರಸಿದ್ಧನಾಗಿದ್ದ ದೀಪಕ್ ಹೊನ್ನಾವರನಂಥವರ ಬೆಳೆಸಿದರು.

ಮ್ಯಾಗಿಯಜ್ಜಿ ಜಿಲ್ಲೆಯ ಜನರಿಂದ ತಿರಸ್ಕೃತರಾಗಿ ರಾಜ್ಯಪಾಲಗಿರಿಗೆ ಆಸೆ ಪಟ್ಟು ತೊಲಗಿದ ನಂತರ ರವಿ ನಾಯ್ಕಗೆ ಆಶ್ರಯ ಕೊಟ್ಟಿದ್ದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಮತ್ತು ಸ್ಪೀಕರ್ ಕಾಗೋಡು ತಿಮ್ಮರಂಥ ಸ್ವಜಾತಿ ಬಂಧುಗಳಷ್ಟೇ. ದೇಶಪಾಂಡೆಗಂತೂ ರವಿ ಹೆಸರೆತ್ತಿದ್ದರೇ ಬಿಪಿ ಏರುಪೇರಾಗುತ್ತಿತ್ತು. ರವಿನಾಯ್ಕನ ಹಾರಾಟಗಳು ಏನೇ ಇರಲಿ, ಆತ ಹಿಂದುಳಿದವರ ಧ್ವನಿ ಎಂಬುದರಲ್ಲಿ ಎರಡು ಮಾತಿರಲಿಲ್ಲ. ಇದೇ ಪಾಳೇಗಾರಿ ದೇಶಪಾಂಡೆಗೆ ಅಪಥ್ಯವಾಗಿತ್ತು. ಹೀಗಾಗಿ ರವಿ ಮೇಲೆ ಬರದಂತೆ ನಿಗಾ ವಹಿಸಿದ್ದ ದೇಶಪಾಂಡೆ ತನ್ನ ಮಗ ಎಂಪಿಗಿರಿಗೆ ನಿಂತಾಗ ಅನಿವಾರ್ಯವಾಗಿ ಆತನನ್ನು ಹತ್ತಿರ ಸೇರಿಸಿಕೊಳ್ಳಬೇಕಾಗಿ ಬಂತು. ಮ್ಯಾಗಿ ಗ್ಯಾಂಗಿನಿಂದ ಹೊರದಬ್ಬಲ್ಪಟ್ಟಿದ್ದ ರವಿಗೂ ಜಿಲ್ಲೆಯಲ್ಲಿ ದೇಶಪಾಂಡೆ ಎದುರುಹಾಕಿಕೊಂಡು ರಾಜಕಾರಣ ಮಾಡುವ ತಾಕತ್ತೂ ಇರಲಿಲ್ಲ. ಹಾಗಂತ ಸದಾ ಜನರ ನಡುವೆ ಓಡಾಡುವ ರವಿನಾಯ್ಕನನ್ನು ಸಂಪೂರ್ಣ ನಂಬುವ ಸ್ಥಿತಿಯಲ್ಲೂ ದೇಶಪಾಂಡೆ ಇಲ್ಲ. ಹಿಂದುಳಿದವರ ಹಿತಶತ್ರು ಈ ಜಾತಿವಾದಿ ದೇಶಪಾಂಡೆ ಎಂದು ಗೊತ್ತಿದ್ದೂ ಆತನ ನೆಚ್ಚಬೇಕಾದ ದುರಂತ ರವಿನಾಯ್ಕರದು!

ಚುನಾವಣೆಗಳು ಎದುರಾದಾಗ ಸ್ವ-ಪಕ್ಷದ ಟಿಕೆಟ್‌ದಾತರ ಸೆಳೆಯುವ ಸಭೆ-ಸಮಾವೇಶ ಮಾಡುವ ಕಲೆ ಕರತಲಾಮಲಕವಾಗಿ ಹೋಗಿದೆ ರವಿ ನಾಯ್ಕರಿಗೆ. 2008ರ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ಈತ ಎಐಸಿಸಿಯಲ್ಲಿ ಪ್ರಭಾವಿಯಾದ 'ಮ್ಯಾಗಿಯನ್ನು ಕರೆಸಿ ಬುಡಕಟ್ಟು ಜನರ ದೊಡ್ಡ ಶೋ ಶಿರಸಿಯಲ್ಲಿ ಮಾಡಿದ್ದರು. ಅದಕ್ಕೆ ಇನಾಮಾಗಿ ಮ್ಯಾಗಿ ಆತನಿಗೆ ಶಿರಸಿ ಕ್ಷೇತ್ರದ ಟಿಕೆಟ್ ಕೊಡಿಸಿದ್ದರು. ಈಗ ವಿಧಾನ ಪರಿಷತ್ ಎಲೆಕ್ಷನ್ ಬಂದಿದೆ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ರವಿನಾಯ್ಕ ಅರಣ್ಯ ಅತಿಕ್ರಮಣದಾರರ ರಾಜ್ಯ ಮಟ್ಟದ ಸಮಾವೇಶ ಕಳೆದ ವಾರ ತನ್ನ 'ಕರ್ಮ ಭೂಮಿ' ಶಿರಸಿಯಲ್ಲಿ ನಡೆಸಿದ್ದಾರೆ. ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಅತಿಕ್ರಮಣದಾರರ ಪರ ಗಟ್ಟಿ ಧ್ವನಿ ಮೊಳಗಿಸುವ ಸ್ಪೀಕರ್ ಕಾಗೋಡು ತಿಮ್ಮಪ್ಪ ಈ ಶೋಧ ಮುಖ್ಯ ಮಾತುಗಾರರಾದರೂ ಇದರ ಮೂಲ ಉದ್ದೇಶ ದೇಶಪಾಂಡೆಯನ್ನು ಸೆಳೆದು ಕೃಪಾಕಟಾಕ್ಷ ಪಡೆಯುವುದಾಗಿತ್ತು.

ಸಮಾವೇಶಕ್ಕೆ ಜಿಲ್ಲೆಯ ಎಲ್ಲ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಸಹಶಾಸಕರನ್ನು ಕರೆದಿದ್ದ ರವಿ ನಾಯ್ಕ್ ವಿಶೇಷವಾಗಿ ದೇಶಪಾಂಡೆಯ ಉತ್ತರಾಧಿಕಾರಿ ಎಂದೇ ಬಿಂಬಿತವಾಗಿರುವ ಪ್ರಶಾಂತ್ ದೇಶಪಾಂಡೆಯನ್ನು ಆಹ್ವಾನಿಸಿದರು. ದೇಶಪಾಂಡೆಯನ್ನು ಸಂಪ್ರೀತಗೊಳಿಸಿ ಆತ ಎಮ್ಮೆಲ್ಸಿ ಟಿಕೆಟ್ ಪಡೆವ ತನ್ನ ದಾರಿಗೆ ಅಡ್ಡಗಾಲು


ಎ. ರವೀಂದ್ರ ನಾಯ್ಕ್

ಹಾಕದಿರಲೆಂಬುದೇ ರವಿಯ ಒಳ ಉದ್ದೇಶವಾಗಿತ್ತು. ಆದರೆ ಪ್ರಶಾಂತ ರ‍್ಯಾಲಿ-ಸಮಾವೇಶದಲ್ಲಿ ಕಾಣಿಸಿಕೊಳ್ಳಲಿಲ್ಲ. ದೇಶಪಾಂಡೆ ಸಾಹೇಬರು ದೂರದಿಂದಲೇ ಹರಸಿದರು. ಅಂದರೆ, ಶುಭ ಸಂದೇಶ ಕಳಿಸಿದ್ದರು ಮತ್ತು ಸಮಾವೇಶದ ಲೋಗೋ ಯಲ್ಲಾಪುರದಲ್ಲಿ ಬಿಡುಗಡೆ ಮಾಡಿದ್ದರು. ಸಭೆಗೆ ಬಂದಿದ್ದ ಅರಣ್ಯ ಅತಿಕ್ರಮಣದಾರರ ಪಿತಾಮಹ ಕಾಗೋಡು ತಿಮ್ಮಪ್ಪ ಮಾತ್ರ ಜಾತಿಪ್ರೋರನ ತಾರೀಫು ಮಾಡಿದ್ದೇ ಮಾಡಿದ್ದು! ಕಾಗೋಡರ ಈ ಮೆಚ್ಚುಗೆ ಮಾತು ರವಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸೀತಾ ಎಂಬ ಚರ್ಚೆ ಈಗ ಕಾಂಗ್ರೆಸ್ ಪಡಸಾಲೆಯಲ್ಲಿ ಜೋರಾಗೇ ನಡೆದಿದೆ.


ಒಂದು ಕಡೆಯಿಂದ ಕಾಗೋಡು ತಿಮ್ಮಪ್ಪ ಮತ್ತೊಂದು ಕಡೆಯಿಂದ ಹರಿಪ್ರಸಾದ್ ಈ ಬಾರಿ ಉತ್ತರ ಕನ್ನಡ ಕ್ಷೇತ್ರದ ಪರಿಷತ್ ಟಿಕೆಟ್ ಕೊಡಿಸಲೇಬೇಕೆಂಬ ಹಠದಲ್ಲಿದ್ದಾರೆ. ಆದರೆ ಮ್ಯಾಗಿ ಮುಳ್ಳಾಗಿದ್ದಾರೆ. ಆಕೆಯ ಮಗ- ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಿವೇದಿತ್ ಆಳ್ವ ಏನೇ ಆಗಲಿ ರವಿಗೆ ಚಾನ್ಸ್ ಸಿಗಲೇಬಾರದೆಂಬ ಹಠ ತೊಟ್ಟಿದ್ದಾರೆಂಬ ಗುಲ್ಲು ಜಿಲ್ಲೆಯಲ್ಲಿದೆ. ದೇಶಪಾಂಡೆಗೆ ಮೊದಲಿನ ಸಿಟ್ಟು ರವಿ ಮೇಲಿಲ್ಲ. ಆತ ಮ್ಯಾಗಿ ಮೇಳದಲ್ಲಿ ಇಲ್ಲವೆಂಬುದೇ ಆತನಿಗೆ ಸಮಾಧಾನದ ಸಂಗತಿ. ಆದರೆ ಹಳಿಯಾಳದಲ್ಲಿರುವ ಬಹುಸಂಖ್ಯಾತ ಮರಾಠ ಸಮುದಾಯದ ಘೋಟನೇಕರ್‌ಗೆ ಟಿಕೆಟ್ ತಪ್ಪಿಸಿದರೆ ಮುಂದೆ ತನಗದು ಗಂಡಾಂತರಕಾರಿ ಆದೀತೆಂಬ ಭಯ ದೇಶಪಾಂಡೆಗೆ.


ಎತ್ತಿಂದೆತ್ತ ಕಾಂಗ್ರೆಸ್ ರಾಜಕೀಯ ಒಳಸುಳಿಯ ಲೆಕ್ಕಾಚಾರ ಹಾಕಿದರೂ ದೇಶಪಾಂಡೆಗೆ ಮತ್ತೆ ಘೋಟನೇಕರ್ ಎಮ್ಮೆಲ್ಸಿ ಆಗುವುದು ಒಂಚೂರು ಇಷ್ಟವಿಲ್ಲ. ತನ್ನನ್ನು ಧಿಕ್ಕರಿಸಿ ಹೊರಟಿರುವ ಘೋಟನೇಕರ್ ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷನಾದಾಗಲೇ ದೇಶಪಾಂಡೆ ಹೊಟ್ಟೆಯಲ್ಲಿ ಕಿಚ್ಚು ಎದ್ದಿದೆ. ಜಿಲ್ಲೆಯ ಶಾಸಕರನ್ನೆಲ್ಲ ಸೇರಿಸಿಕೊಂಡು ತನ್ನ ವಿರುದ್ಧ ಆಟ ಆಡುವ ಘೋಟನೇಕರ್‌ನ ಮನೆಯಲ್ಲಿ ಕೂರಿಸುವ ಪ್ಲಾನ್ ಆತನದು. ಇದು ಗೊತ್ತಾಗಿಯೇ ಘೋಟನೇಕರ್ ಜಿಲ್ಲಾ ಮಟ್ಟದ ಒಂದು ಹುದ್ದೆ ತನ್ನ ಕೈಲಿರಲೆಂದೇ ದೇಶಪಾಂಡೆ ವಿರುದ್ಧ ಬಂಡೆದ್ದು ಗೆದ್ದಿದ್ದೂ ಆಗಿತ್ತು. ಆದರೆ ಆ ವಿಜಯವೇ ಈಗ ಮತ್ತೆ ದೇಶಪಾಂಡೆಗೆ ಬ್ಲಾಕ್‌ಮೇಲ್‌ಗೆ ಅಸ್ತ್ರವಾಗಿದೆ ಘೋಟನೇಕರ್‌ಗೆ. ಆದರೆ ಇಡೀ ಜಿಲ್ಲೆಯಲ್ಲಿ ಘೋಟನೇಕರ್ ನಾಲಾಯಕ್ ಎಮ್ಮೆಲ್ಸಿ ಎಂಬ ಬೇಸರವಿದೆ. ಕಾಂಗ್ರೆಸ್‌ನಲ್ಲಿ ಆತನ ವಿರುದ್ಧ ದೊಡ್ಡ ಮಟ್ಟದ ಆಕ್ರೋಶವಿದೆ. ಪೋಲೀಸ್ ಗುಪ್ತಚರ ವರದಿಯೂ ಈ ಘೋಟನೇಕರ್ ಮತ್ತೆ ನಿಂತರೆ ಕಾಂಗ್ರೆಸ್ ಗೊಟಕ್ ಎಂದೇ ಹೇಳುತ್ತಿದೆ!

ತಾನೇ ಕ್ಯಾಂಡಿಡೇಟ್ ಎಂದು ಗ್ರಾಪಂಗಳಿಗೆ ಸುತ್ತು ಹೊಡೆಯಲು ಶುರು ಮಾಡಿರುವ ಘೋಟನೇಕರ್‌ಗೆ ಕಾಂಗ್ರೆಸ್ ಮತದಾರರಾದ ಸ್ಥಳೀಯ ಸಂಸ್ಥೆ ಸದಸ್ಯರೇ ಕ್ಯಾಕರಿಸಿ ಉಗಿಯುತ್ತಿದ್ದಾರೆ. "ಎಮ್ಮೆಲ್ಸಿಯಾಗಿದ್ದಾಗ ಒಮ್ಮೆಯೂ ಬಾರದ ನೀನು ಈಗೇಕೆ ಬಂದಿರುವೆ?.... ನಿಂಗೆ ಮಾನ-ಮರ್ಯಾದೆ ಇಲ್ವಾ..." ಎಂದು ಬೆವರಿಳಿಸುತ್ತಿದ್ದಾರೆ. ಆದರೂ ಈತನಿಗೆ ಮತ್ತೆ ಎಮ್ಮೆಲ್ಸಿಯಾಗುವ ಚಟ. ಮಾಜಿ ಶಾಸಕ ಜೆ.ಡಿ.ನಾಯ್ಕ, ಅಂಕೋಲಾ ಮುನ್ಸಿಪಾಲ್ಟಿ ಮೆಂಬರ್ ರಾಜೇಂದ್ರ ನಾಯ್ಕ್, ಯಾನೆ ಕರಿ ರಾಜು, ಮ್ಯಾಗಿ ಶಿಷ್ಯ ಸಾಯಿ ಗಾಂವ್ಕರ್ ಟಿಕೆಟ್‌ಗೆ ಅರ್ಜಿ ಗುಜರಾಯಿಸಿದ್ದಾರೆ. ಭಟ್ಕಳದ ಲೋಕಲ್ ರಾಜಕಾರಣದಿಂದಾಗಿ ಕಾಂಗ್ರೆಸ್‌ನಲ್ಲಿ ಮೂಲೆಗುಂಪಾಗಿರುವ ಜೆ.ಡಿ. ನಾಯ್ಕ ಒಂ[...] ಈಗಾಗಲೇ ಬಿಜೆಪಿಯಲ್ಲಿಟ್ಟಿದ್ದಾರೆ. ಬಿಜೆಪಿ [...] ಸಂಸ್ಕೃತಿಗೆ ಬಲಿಯಾಗಿರುವ ಮಾಜಿ ಮಂತ್ರಿ [...] ನಾಯ್ಕರ ರಾಜಕೀಯ ಹೆಚ್ಚೂಕಮ್ಮಿ ಮುಗಿದಿರು[...] ಬಿಜೆಪಿಗೆ ಜೇಡಿಯೇ ಫೇವರಿಟ್ ಆಗಿ ಕಾಣ[...] ಕಾಂಗ್ರೆಸ್‌ನಿಂದ ಮೀನುಗಾರ ಕುಲದ ಮಂ[...] ನಿಂತರೆ ಆತನ ಎದುರಾಗಿ ಏಕೈಕ ನಾಮಧಾರಿ ಕ[...] ಇಳಿಸುವ ನಿರ್ಧಾರಕ್ಕೆ ದೀವರು ಈಗಾಗಲೇ [...] ವೈದ್ಯನ ಆ್ಯಂಟಿ ನಾಮಧಾರಿ ರಾಜಕಾರಣ [...] ದೀವರು ಒಂದಾಗಿದ್ದಾರೆ. ಈ ಹಿನ್ನೆಲೆಯ[...] ಕಾಂಗ್ರೆಸ್‌ನಿಂದ ಹೊರಬೀಳಲು ಸಮಯ ಸಾಧ[...] ಎಮ್ಮೆಲ್ಸಿ ಟಿಕೆಟ್ ತನಗೆ ಸಿಗಲಾರದೆಂಬುದ[...] ಗೊತ್ತಿದೆ. ಆದರೂ ಪಕ್ಷ ಬಿಡುವ ನೆಪಕ್ಕೆ ಆತನ[...] ನಿರಾಕರಣೆ ಬೇಕಾಗಿದೆ.

ಈಗ ತೀವ್ರ ತುರುಸು ಇರುವುದು ರವಿನಾ[...] ಘೋಟನೇಕರ್ ನಡುವೆಯಷ್ಟೇ. ದೇಶ[...] ತೀರ್ಮಾನವೇ ಈಗ ಅಂತಿಮ. ದೇ[...] ಹಳಿಯಾಳದಲ್ಲಿನ ತನ್ನ ಅಸ್ತಿತ್ವಕ್ಕೆ ತೊಂದರೆ [...] ಎಮ್ಮೆಲ್ಸಿ ಟಿಕೆಟ್ ವಿಲೇವಾರಿ ಮಾಡಬ[...] ಘೋಟನೇಕರ್‌ಗೆ ಸಮಾಧಾನಪಡಿಸಲು ಆತ ಯ[...] ರವಿನಾಯ್ಕ ಪರ ನಿಲ್ಲುತ್ತಾರೆ. ಘೋಟನೇಕರ[...] ನಿಂತರೆ ರವಿಗೆ ಚಾನ್ಸ್ ಸಿಗಲಾರದೆಂಬುದು [...] ಒಳಗಿನ ಕೆಮಿಸ್ಟ್ರಿಯ ಸಮೀಕರಣ. ಒಟ್ಟು [...] ಜನಪ್ರತಿನಿಧಿಗಳಲ್ಲಿ 1500 ಕಾಂಗ್ರೆಸ್‌ನವರಿದ್ದಾರೆ. [...] ಕಾಂಗ್ರೆಸ್ ಬೆಂಬಲಿತರಿದ್ದಾರೆ. ಹೀಗಾಗಿ [...] ಕ್ಯಾಂಡಿಡೇಟ್ ಇಲ್ಲಿ ಗೆಲ್ತಾರೆಂಬುದು ಸರಳ [...] ದೇಶಪಾಂಡೆಗೂ ಇದು ಪ್ರತಿಷ್ಠೆಯ ಪ್ರಶ್ನೆ[...]


ಮ್ಯಾಗಿ


ಕಾಗೋಡು ತಿಮ್ಮಪ್ಪ




ಎಸ್.ಎಲ್. ಘೋಟನೇಕರ್


ದೇಶಪಾಂಡೆ

ಕಾಂಗ್ರೆಸ್ ಗೆಲುವು ಸುಲಭ ಎನ್ನಲಾಗಿದೆ. ಆ[...] ಜಿಲ್ಲೆಯ ತಿರಸ್ಕಾರಕ್ಕೆ ತುತ್ತಾಗಿರುವ ಘೋ[...] ಮತ್ತೆ ಅಭ್ಯರ್ಥಿಯಾದರೆ ದೇಶಪಾಂಡೆ ತಿಪ್ಪರಲಾಗ[...] ಆತ ಗೆಲ್ಲೋದು ಕಷ್ಟ!!

ಘೋಟನೇಕರ್‌ಗೇ ಕಾಂಗ್ರೆಸ್ ಅವಕಾ[...] ರವಿನಾಯ್ಕ್ ಬಂಡೇಳುವ ತಯಾರಿ ನಡೆಸಿದ[...] ಅತಿಕ್ರಮಣದಾರ ಮೂಲಕ ಗ್ರಾಮ ಪಂಚಾಯತ[...] ತನಗಿರುವ ಸಂಪರ್ಕದಿಂದ ಸ್ವತಂತ್ರವಾ[...] ಗೆಲ್ಲಬಹುದೆಂಬ ಯೋಚನೆ ರವಿನಾಯ್ಕರದ[...] ಮತದಾರರಲ್ಲಿ 1217 ಮಂದಿ ಅತಿಕ್ರಮ[...] ಇವರೆಲ್ಲ ತನ್ನ ಕೈಬಿಡಲಾರರೆಂಬ ಭಾವನೆ ರವಿ [...] ಉಳಿದ ಮತ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಹಂ[...] ತನ್ನದೇ ದಿಗ್ವಿಜಯ ಎಂದು ರವಿ ಕನಸು ಕಾ[...] "ನನ್ನ ತಾಕತ್ತು ತೋರಿಸಿದ್ದೇನೆ.... ಕಾಂಗ್ರೆಸ್ [...] ಕರೆದು ಟಿಕೆಟ್ ಕೊಡೋ ಹಾಂಗೆ ಮಾಡ್ತೇನೆ[...] ತನ್ನ ಆಪ್ತರ ಬಳಿ ಪೌರುಷ ತೋರಿಸುತ್ತಿರ[...] ಸಮಾವೇಶ ಹೋರಾಟ ಮತ್ತು ಚುನಾವಣೆ[...] ತೆಳುವಾದ ಅಂತರವಿರುವುದು ಕಾಣಿಸುತ್ತಿಲ್ಲ. [...] ಲಾಲಸೆಯ ಅಸಲೀ ಗುಣವೇ ಭ್ರಮೆ ತಾನೆ[...] ಮೂರು ಸೋಲಿನ ಪಾಠ ಈ ಬಾರಿ ರವಿಯನ್ನು[...]

ಕಾಂಗ್ರೆಸ್ ರಾಜಕಾರಣದ ಗುದುಮುರಿಗೆ [...] ಜಿಲ್ಲಾ ಕಾಂಗ್ರೆಸ್‌ನಲ್ಲಿ ರವಿನಾಯ್ಕನಷ್ಟು ಯೋಗ್ಯ [...] ಯಾರೂ ಇಲ್ಲ. ಅಧಿಕಾರದ ಮೋಹದ ಜತೆ[...] ಜನಪರ ಧೋರಣೆ ಮೈಗೂಡಿಸಿಕೊಂಡಿರುವ ಚ[...] ರಾಜಕಾರಣಿ ಎಂಬುದು ದಿಟ. ಯಾವುದೇ [...] ಬದ್ಧತೆ, ಜನಪರ ಕಳಕಳಿ ಇಲ್ಲದ ಹೊಲಸು [...] ಘೋಟನೇಕರ್‌ಗಿಂತ ಸಂಭಾವಿತ ರವಿ ನಾಯ[...] ಕ್ಯಾಂಡಿಡೇಟ್. ಆತ ಎಮ್ಮೆಲ್ಸಿಯಾದರೆ[...] ದ್ರೋಹವಂತೂ ಆಗದು. ಕ್ರಿಯಾಶೀಲ ಗು[...] ರವಿನಾಯ್ಕನ ಹೋರಾಟಕ್ಕೆ ಹರಿದುಬರುವ ತ[...] ಇವತ್ತಿಗೂ ನಿಗೂಢ; ಆದರೆ ಆತನ [...] ಹಿಂದುಳಿದವರ ಪರ ಬದ್ಧತೆ, ಶೋಷಿತರ [...] ಬಗೆಗಿನ ಕಾಳಜಿ ಮಾತ್ರ ತೆರೆದ ಪುಸ್ತಕ.

ದೇಶಪಾಂಡೆ ಏನೇ ಹೇಳಲಿ; ಕಾಂಗ್ರೆ[...] ಕಮಿಟಿ ಸ್ಥಳೀಯ ಪರಿಸ್ಥಿತಿ ಅರಿತು ಟಿಕೆಟ್ ಹಂ[...] ಇಲ್ಲದಿದ್ದರೆ ಸುಲಭವಾಗಿ ಗೆಲ್ಲುವ ಒಂ[...] ಕಳೆದುಕೊಳ್ಳೋದು ಖಂಡಿತ!!

ಬಿಜೆಪಿ ಗೋಳು

ಉತ್ತರ ಕನ್ನಡದ ಬಿಜೆಪಿ ಸತ್ತು ಮಲಗಿದೆ. ಎರಡೆರಡು ಮಂತ್ರಿಗಳನ್ನಿಟ್ಟುಕೊಂಡು ಐದು ವರ್ಷ ದರ್ಬಾರು ನಡೆಸಿದ ಬಿಜೆಪಿಗೆ ಇವತ್ತು ಒಬ್ಬ ಎಮ್ಮೆಲ್ಸಿ ಕ್ಯಾಂಡಿಡೇಟು ಸಿಗುತ್ತಿಲ್ಲ. ಬಿಜೆಪಿಯ ಗಟ್ಟಿಗರು, ಜೊಳ್ಳುಗಳು, ಬೇರೆ ಪಕ್ಷದ ಹಣವಂತರು... ಹೀಗೆ ಯಾರನ್ನೇ ಕೇಳಿದರೂ 'ನಾನೊಲ್ಲೆ' ಎನ್ನುತ್ತಿದ್ದಾರೆ. ಬಿಜೆಪಿ ಕ್ಯಾಂಡಿಡೇಟಾಗಿ ಅವಮಾನಿತ




ಕಾಗೇರಿ

ರಾಗೋದು ಯಾರಿಗೂ ಬೇಡವಾಗಿದೆ. ರಾಜ್ಯ ಬಿಜೆಪಿ, ಸಂಘ ಪರಿವಾರದಲ್ಲಿ ತೂಕವಿರುವ ಮಾಜಿ ಮಂತ್ರಿ ಕಾಗೇರಿಗೆ ಜಿಲ್ಲಾ ಬಿಜೆಪಿಯಲ್ಲಿ ದಮ್ಮಡಿ ಕಿಮ್ಮತ್ತಿಲ್ಲ. ಈತನಿಂದ ಕ್ಯಾಂಡಿಡೇಟ್ ತಯಾರು ಮಾಡಲು ಸಾಧ್ಯವೇ ಇಲ್ಲ. ಆತನ ಎದುರಾಳಿ ಎಂಪಿ ಅನಂತ್ಕಾಣಿ ಎಲ್ಲಿದ್ದಾನೆಂಬುದು ಯಾರಿಗೂ ಗೊತ್ತಿಲ್ಲ. ಆತ ಆರೋಗ್ಯ, ಅಂತಸ್ತು, ಅಧಿಕಾರದ ಕಾಳಜಿಯಲ್ಲಿ ಜಿಲ್ಲೆ ಮರೆತು ಅದ್ಯಾವುದೋ ಕಾಲವಾಗಿದೆ. ಜನದ್ರೋಹಿ ಎಂಪಿಗೆ ಅನಂತ್ಕಾಣಿ ಅಪ್ಪಟ ಉದಾಹರಣೆ!! ಈತನಿಗೂ ಪಾರ್ಟಿಯಲ್ಲಿ ಕಿಮ್ಮತ್ತಿಲ್ಲ. ಈತನ ಮಾತು ಕೇಳಿ ಎಮ್ಮೆಲ್ಸಿ ಎಲೆಕ್ಷನ್ ಇಳಿವ ಹಿಂಬಾಲಕರೂ ಇಲ್ಲ.

ಮೋದಿವಾದ-ಕೋಮುವಾದದ ರಾಜಕಾರಣ ನಡೆಸುವ ಜಿಲ್ಲಾ ಬಿಜೆಪಿಗೆ ಸ್ಥಳೀಯ ಸಮಸ್ಯೆ-ಅಭಿವೃದ್ಧಿಯ ಪರಿವೇ ಇಲ್ಲ. ಕೂದಲೆಳೆ ಅಂತರದಿಂದ ಗೆದ್ದಿರುವ ಕಾಗೇರಿಯ ಮಿತಿ ಶಿರಸಿ-ಸಿದ್ದಾಪುರಕ್ಕಷ್ಟೇ ಸೀಮಿತವಾಗಿದೆ. ಖಾಲಿ ಬುರುಡೆ ಎಂಪಿ ಅನಂತ್ಕಾಣಿಗೂ ಜಿಲ್ಲಾ ಮಟ್ಟದ ನಾಯಕತ್ವ ಬೆಳೆಸಿಕೊಳ್ಳಲಾಗಿಲ್ಲ. ಈ ಗತಿಗೇಡಿ ಬಿಜೆಪಿಯಲ್ಲಿ ಎಮ್ಮೆಲ್ಸಿ ಟಿಕೆಟ್‌ಗೆ ಕೇಳಿ ಬರುತ್ತಿರುವ ಒಂದೇ ಒಂದು ಹೆಸರೆಂದರೆ ಹಳಿಯಾಳದ ರಾಜೂ ಧೂಳಿ! ಒಂಥರಾ ಅಡ್ನಾಡಿ ಯಂತಿರುವ ಧೂಳಿ ದಿಕ್ಕು ತಪ್ಪಿದ ಜಿಲ್ಲಾ ಬಿಜೆಪಿಯ ಜೀವಂತ ಸಂಕೇತ!!

ಯೋಗೇಶ್ ಮಾಸ್ಟರ್


ಸುರಾಣದ ಹೂರಣ

ಎಚ್ಚರದಲ್ಲಿ ಅಚ್ಚರಿಗಳು

ರೋಚಕ ಸಂಗತಿಗಳನ್ನು ಕಾಲ್ಪನಿಕ ಕಥೆಗಳಲ್ಲಿ ...ತ್ತೇವೆ. ಕಥೆ, ಕಾದಂಬರಿ, ಕಾವ್ಯ ಮತ್ತು ಸಿನಿಮಾಗಳಲ್ಲಿ ...ಅಸಂಭವನೀಯ ಘಟನೆಗಳು ನಡೆದಾಗ ಅವುಗಳನ್ನು ...ವಾಗಿ ಸ್ವೀಕರಿಸುತ್ತೇವೆ. ಕೆಲವೊಮ್ಮೆ ನಿಜಜೀವನದಲ್ಲಿ ...ದಾಗ ಕಾಕತಾಳೀಯ ಎಂದು ಪರಿಗಣಿಸುತ್ತೇವೆ. ...ಅತೀಂದ್ರಿಯ ಶಕ್ತಿಗಳಲ್ಲಿ ನಂಬುಗೆ ಇರುವವರು ...ತೀತ ಶಕ್ತಿಗಳ ಕುರಿತು ಮಾತಾಡುತ್ತಾರೆ. ಕೆಲವು ...ಗಳನ್ನು ಮುಂದೆ ಉಲ್ಲೇಖಿಸುತ್ತೇನೆ. ಅವುಗಳನ್ನು ...ಸುವ ಮೂಲಕ ಕೆಲವು ಒಳನೋಟಗಳನ್ನು ಮತ್ತು ...ಗಳಿಗೆ ಸುಳುಹುಗಳನ್ನು ಪಡೆಯಬಹುದು ಎಂದು ...ತ್ತೇನೆ.


ಕಸ್ತೂರಿ

...92ರ ಮಾರ್ಚ್ ತಿಂಗಳ ಅವಧಿ. ಚಿಕ್ಕಬಳ್ಳಾಪುರದ ... ಸುಮಾರು ಐದಾರು ಕಿಲೋಮೀಟರ್‌ಗಳು ...ಲ್ಲಿ ಸೂಸೆಪಾಳ್ಯವೆಂಬ ಕ್ರೈಸ್ತಮತಸ್ಥರ ಹಳ್ಳಿಯೂ, ...ಂತಪುರವೆಂಬ ಹಳ್ಳಿಯೂ ಇದೆ. ಅಲ್ಲಿಂದ ಸ್ವಲ್ಪ ...ಕ್ಕೆ ಹೋದರೆ ನರಸಿಂಹಸ್ವಾಮಿ ಬೆಟ್ಟವೆಂಬುದಿದ್ದು ...ಸಮೀಪದಲ್ಲಿ ಮೇಜರ್ ಮಹಾದೇವನ್ ಎಂಬುವರು ...ದೊಡ್ಡ ಎಸ್ಟೇಟನ್ನು ಹೊಂದಿದ್ದರು. ಅದರ ಸುತ್ತಲೂ ...ದ್ದವು. ಅಲ್ಲಿ ಅದೊಂದೇ ಎಸ್ಟೇಟಿನ ಮನೆಯಿದ್ದು ...ಎಸ್ಟೇಟನ್ನು ಒಬ್ಬ ನೇಪಾಳಿ ಘೂರ್ಖ ನೋಡಿ...ದ್ದ. ಅವನ ಹೆಸರು ಲೋಗ್ ಬಹಾದ್ದೂರ್ ಥಾಪ. ...ಮಹಾದೇವನ್‌ರವರಿಗೆ ಪರಿಚಯವಾಗಿದ್ದು ಅವರಿಗೆ ...ಬ್ಬ ಕಥೆಗಾರ ಮತ್ತು ಕವಿ ಎಂದು ತಿಳಿದಿತ್ತು. ...ಎಸ್ಟೇಟ್‌ನಲ್ಲಿ ಪ್ರಶಾಂತತೆಯನ್ನು ಅನುಭವಿಸುತ್ತಾ ...ಗುವ ಪ್ರೇರಣೆಯಿಂದ ಏನಾದರೂ ಕೃತಿ ರಚನೆ ... ಸಾಧ್ಯವೇನೋ ಎಂದು ಒಂದು ಆಹ್ವಾನವಿತ್ತಿದ್ದರು. ...ತೆ ನಾನು ಅಲ್ಲಿಗೆ ನನ್ನ ಬರವಣಿಗೆಯ ...ಳೊಡನೆ ಹೋಗಿ ನೆಲಸಿದೆ.



...ಸ್ತವವಾಗಿ 1984ರಲ್ಲಿ ನನ್ನ ಹತ್ತನೇ ತರಗತಿ ...ದ ಮೇಲೆ ನನ್ನ ಬರವಣಿಗೆಗಳು ಜೀವನಾನು...ವ ಕೂಡಿರಬೇಕೆಂದು ಕಾಲೇಜಿಗೆ ಹೋಗುವ ...ವಿವಿಧ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದೆ. ಜನದಟ್ಟಣೆ...ಸ ಅವಿನ್ಯೂರಸ್ತೆಯಲ್ಲಿ ಲಾಟರಿ ಟಿಕೆಟ್ ಮಾರುತ್ತಾ ... ಮಂಡಲಿಯಲ್ಲಿ ಕೂಲಿಕಾರನಾಗಿ, ಕೊರಿಯರ್ ...ನಾಗಿ, ಪೇಪರ್ ಮತ್ತು ಹಾಲು ಹಾಕುವವನಾಗಿ, ...ದರಲ್ಲಿ ಭೂಮಾಲಿಕನೊಬ್ಬನ ಆಶ್ರಯದಲ್ಲಿ ಕೆಲಸ ...ದ ದಲಿತರ ಯುವಕನಾಗಿ, ಪತ್ರಿಕಾಲಯದಲ್ಲಿ ...ಪಾದಕನಾಗಿ, ಪ್ರಕಾಶನಾಲಯದಲ್ಲಿ ಪಾರ್ಸೆಲ್ ...ಕ ಗುಡಿಸುವ, ಕಾಫಿ, ತಿಂಡಿ ತರುವ ಅಟೆಂಡರ್ ...ಸ್ಥಾನವೊಂದರಲ್ಲಿ ಅರ್ಚಕನಾಗಿ ಮೂರುಮೂರು ... ಅಥವಾ ನಾಲ್ಕು ತಿಂಗಳೋ ಕೆಲಸ ಮಾಡಿ ಆ ...ಗಳನ್ನು ಬರವಣಿಗೆಯ ರೂಪದಲ್ಲಿ ತರುವಂತಹ ...ಸುವ ಭಾಗವಾಗಿಯೇ ಈ ಕಸ್ತೂರಿಯ ಪ್ರಕರಣವು ...ದಲ್ಲಿ ಆದ ನಂತರವೇ ಉಪಾಧ್ಯಾಯನಾಗಿ ವೃತ್ತಿ...

...ಬಹಾದ್ದೂರ್ ನನ್ನನ್ನು ಚೋಟಾ ಸಾಬ್ ...ಕರೆಯುತ್ತಿದ್ದು ಬಹಳ ಚೆನ್ನಾಗಿ ನೋಡಿಕೊಂಡ. ...ಪ್ರೇಮಿಗಳಾಗಿದ್ದ ನನಗೆ ಜೀವನದಲ್ಲೇ ಮೊಟ್ಟ ...ದಲಿಗೆ ಅಷ್ಟು ದೀರ್ಘಕಾಲ ಪ್ರಕೃತಿಯ ಮಡಿಲಲ್ಲಿ ...ಅವಕಾಶ ದೊರಕಿತ್ತು. ನಿತ್ಯವೂ ಹೆಣ್ಣಾಳುಗಳು ...ಗಂಡಾಳುಗಳು ಅಲ್ಲಿ ಬೆಳೆದಿದ್ದ ಸಿಟ್ರನೆಲ್ಲಾ,



ಸಿಟ್ರುಡೋರಾ, ಲಿಮನ್ ಗ್ರಾಸ್‌ಗಳ ಕೃಷಿಗೆ ಬರುತ್ತಿದ್ದರು. ಅವರೊಂದಿಗಿನ ಒಡನಾಟ ಎಂದಿಗೂ ಮರೆಯಲಾಗದ್ದು. ವೆಂಕಟಮ್ಮ, ಲಚ್ಚಮ್ಮ, ಅಕ್ಕಾಯಮ್ಮ, ಗಂಗಮ್ಮ, ಮುನಿತಾಯಿ; ಹೀಗೆ ಹಲವಾರು ಮಹಿಳೆಯರು ಪಟ್ಟಣಿಗರ ಮೌಢ್ಯ ಮತ್ತು ಮುಗ್ಧತೆಯ ಪ್ರತಿರೂಪವಾಗಿದ್ದ ನನಗೆ ದೇಸೀ ವಿಷಯಗಳ ತಿಳಿವಳಿಕೆಗಳನ್ನು ನೀಡುತ್ತಿದ್ದರು. ನನಗೆ ಅಲ್ಲೊಂದು ಅಚ್ಚರಿಯ ಲೋಕವೇ ಅನಾವರಣವಾಗಿತ್ತು. ಅಲ್ಲಿನ ಪ್ರತಿದಿನದ ಅನುಭವವನ್ನೂ ಕಸ್ತೂರಿ ಎಂಬ ಕಾದಂಬರಿಯಲ್ಲಿ ದಾಖಲಿಸಿದ್ದೇನೆ.


ಅಲ್ಲಿ ನಾನು ಯಾವುದರ ಬಗ್ಗೆಯೇ ಕವನ ಬರೆಯಲಿ ಅದಕ್ಕೆ ಸಂಬಂಧಪಟ್ಟಂತಹ ಅಲ್ಲಿನ ಜನಪದರ ಸಾಹಿತ್ಯವನ್ನು, ವಿಷಯವನ್ನು ಸಂಗ್ರಹಿಸುತ್ತಿದ್ದೆ. ಹಾಗೆಯೇ ಬಹಾದ್ದೂರನಿಂದಲೂ ನೇಪಾಳಿ ಕಾವ್ಯಗಳನ್ನು ಬಯಸುತ್ತಿದ್ದೆ. ನಾನು ಯಾವುದೇ ಬರೆಯಲಿ ಆತನೂ ಒಂದು ಹೇಳುತ್ತಿದ್ದ. ಅದನ್ನೆಲ್ಲಾ ನಾನು ದಾಖಲಿಸಿಕೊಳ್ಳುತ್ತಿದ್ದೆ. ನೇಪಾಳಿ ಭಾಷೆ ಅರ್ಥವಾಗುತ್ತಿರಲಿಲ್ಲ. ಆದರೂ ಬರೆದಿಟ್ಟುಕೊಳ್ಳುತ್ತಿದ್ದೆ ಮತ್ತು ಅವರ ಶೈಲಿಯಲ್ಲಿ ಹಾಡು ಕಲಿತುಕೊಳ್ಳುತ್ತಿದ್ದೆ. ಅಲ್ಲಿ ಮೂರು ತಿಂಗಳ ಕಾಲವಿರುವಾಗ ನನಗೂ ಮತ್ತು ನನ್ನನ್ನು ಕರೆದುಕೊಂಡು ಹೋದ ಭೂಮಾಲಿಕರಿಗೆ ಸಂಘರ್ಷ ವಾಯಿತು. ಕೆಲಸಗಾರರಾದ ಹೆಣ್ಣಾಳು ಮತ್ತು ಗಂಡಾಳುಗಳಲ್ಲಿ ಇದ್ದ ವೇತನ ತಾರತಮ್ಯದ ಬಗ್ಗೆ ಅವರನ್ನು ನಡೆಸಿಕೊಳ್ಳುತ್ತಿದ್ದ ಬಗ್ಗೆ ತಕರಾರು ಎತ್ತಿದ್ದೆ. ಅವರಿಗೆ ಕೂಲಿ ಕೊಡುವ, ಲೆಕ್ಕಪತ್ರದ ವ್ಯವಹಾರವನ್ನು ಇಡುವ ರೈಟರ್ ಆಗಿ ಪಾತ್ರವಹಿಸುತ್ತಿದ್ದ ನಾನು ಅವರ ಪರವಾಗಿರಬೇಕೆಂಬ ಅವರ ನಿರೀಕ್ಷೆಯನ್ನು ಹುಸಿ ಮಾಡಿ ಅವರಲ್ಲಿ ಒಂದು ಬಂಡಾಯದ ಧ್ವನಿಯನ್ನು ಎಬ್ಬಿಸಿದ್ದರ ಕಾರಣದಿಂದ ಮಹಾದೇವನ್ ಮತ್ತು ನನ್ನ ನಡುವೆ ತೀವ್ರ ವೈಮನಸ್ಯ ಉಂಟಾಗಿ ಕಡೆಗೆ ನಾನು ಬಂದುಬಿಟ್ಟೆ.

ಅಲ್ಲಿನ ಅನುಭವಗಳನ್ನು ಕಥನ ರೂಪದಲ್ಲಿ ಬೆಂಗಳೂರಿನ ನನ್ನ ಗೆಳೆಯರಿಗೆ ವಿವರಿಸುವಾಗ ಕಾಲ್ಪನಿಕ ಕಥಾಹಂದರವನ್ನು ಹೆಣೆದಿದ್ದೆ. ನೇಪಾಳದಿಂದ ಬಂದಿರುವ ಒಬ್ಬ ಬಹಾದ್ದೂರ್ ತನ್ನ ಊರಿನಲ್ಲಿ ಕ್ಯಾನ್ಸರ್ ಪೀಡಿತವಾಗಿರುವ ಮಗಳಿಗಾಗಿ ಇಲ್ಲಿ ದುಡಿಯುತ್ತಿದ್ದು, ಆ ಗಳಿಕೆಯ ಹಣವನ್ನು ಅವಳ ಉನ್ನತ ಚಿಕಿತ್ಸೆಗಾಗಿ ಉಳಿಸಲು ಯತ್ನಿಸುತ್ತಿದ್ದು, ಕೊನೆಗೆ ಅವಳು ಅಲ್ಲಿಯೇ ಸತ್ತು ಹೋಗಿ, ಅವನ ಗಳಿಕೆಯನ್ನು ಉಳಿತಾಯ ಮಾಡುತ್ತಿದ್ದ ಪೋಸ್ಟ್ ಆಫೀಸ್‌ಗಳಲ್ಲೇ ಬಿಟ್ಟು ಮನಸ್ಸಿನ ಸ್ವಾಸ್ಥ್ಯ ಕಳೆದುಕೊಂಡು ಎಲ್ಲಿಯೋ ಹೊರಟುಹೋಗಿ ಬಿಡುತ್ತಾನೆಂಬ ದುರಂತದ ಕಥೆಯಾಗಿ ರೂಪಿಸಿದ್ದೆ. ಸ್ಥಳದ ಬಗ್ಗೆ ವಿವರಣೆಗಳನ್ನು ಕೇಳುತ್ತಿದ್ದ ನನ್ನ ಸ್ನೇಹಿತರು ಅಲ್ಲಿಗೆ ಹೋಗಿ ಬರಲೇಬೇಕೆಂದು ಒತ್ತಾಯಿಸುತ್ತಾ ಸುಮಾರು ಒಂದು ವರ್ಷದ ನಂತರ ಅಲ್ಲಿಗೆ ಹೋದೆವು. ಆಗ ನನ್ನ ಪ್ರತಿನಿತ್ಯ ಸಂಗಾತಿಯಾಗಿದ್ದ ಚೋಟಾಸಾಬ್ ಎಂದು ಕರೆಯುತ್ತಿದ್ದ ಬಹಾದ್ದೂರ್ ಇರಲಿಲ್ಲ. ಬದಲಿಗೆ ಇದ್ದ ಮತ್ಯಾರೋ ಹೇಳಿದ ವಿಷಯವೇನೆಂದರೆ, ಆತನ ಮಗಳು ನೇಪಾಳದಲ್ಲಿ ತೀರಿಹೋಗಿ, ಅಂತ್ಯಸಂಸ್ಕಾರವಾದ ಬಳಿಕ ಎಷ್ಟೋ ದಿನಗಳ ನಂತರ ಪತ್ರ ತಲುಪಿತ್ತು. ಇದರಿಂದ ದುಃಖಿತನಾಗಿ ಒಳಗಾದ ಬಹಾದ್ದೂರ್ ಯಾರಿಗೂ ಹೇಳದೇಕೇಳದೇ ಎಲ್ಲಿಗೋ ಹೊರಟುಹೋಗಿಬಿಟ್ಟ ಎಂದು. ನನಗೆ ಆಘಾತವಾಯಿತು. ಎಂದಿಗೂ ನನಗೆ ಹೇಳದೆಯೇ ಇದ್ದ ಅವನ ಸಂಗತಿಯನ್ನು ದೂರದಲ್ಲೆಲ್ಲೋ ಕುಳಿತುಕೊಂಡು ನಾನು ಹೇಗೆ ಬರೆದೆ? ನಂತರ ತಿಳಿದ ಮತ್ತೊಂದು ವಿಷಯವೆಂದರೆ ಆತ ನನಗೆ ತಮ್ಮ ಊರಿನ ಹಾಡುಗಳೆಂದು ನನಗೆ ಸಂತೋಷದ ರಾಗಗಳಲ್ಲಿ ಹೇಳಿಕೊಟ್ಟವೆಲ್ಲಾ ಆತನ ವಿಷಾದದ ಗೀತೆಗಳಾಗಿದ್ದವು. ಪರವೂರಿನಲ್ಲಿ ಯಾರಿಗೂ ಹೇಳಿ ಕೊಳ್ಳಲಾಗದ ಅವನ ದುಃಖನೋವುಗಳನ್ನು ಹೊಂದಿದ್ದ ಆ ಹಾಡುಗಳು ಸಂತೋಷದ ರಾಗದಲ್ಲಿ ನನಗೆ ಹಾಡಲಾಗಿದ್ದವು.

ನನಗೆ ಅರ್ಥವಾಗುವಂತೆ ಏನೂ ನೇರವಾಗಿ ಹೇಳಿರದಿದ್ದ ವಿಷಯಗಳನ್ನು ನಾನು ಕಾದಂಬರಿಯಲ್ಲಿ ಬರೆದಿದ್ದೇ ಅಲ್ಲದೇ ದುರಂತದ ಅಂತ್ಯವನ್ನು ಎಲ್ಲಿಯೋ ಕುಳಿತುಕೊಂಡು ಹೇಳುತ್ತಿದ್ದೆ. ಇದು ಹೇಗಾಯಿತು?

ಪ್ರಳಯ ತಾಂಡವ

ನನ್ನ ಧುಂಧಿ ಕಾದಂಬರಿಯಲ್ಲಿ ಶಿವನು ಪ್ರಯಾಗದ ಬಂಡೆಯ ಮೇಲೆ ಧ್ಯಾನಾಸಕ್ತನಾಗಿ ಕುಳಿತಿದ್ದಾಗ ನಡು ಮಧ್ಯಾಹ್ನದಲ್ಲೇ ಮೋಡಗಳು ದಟ್ಟವಾಗಿ ಸಂಜೆಗಿಂತಲೂ ಕಪ್ಪಾಗಿ, ಗಾಢವಾಗುತ್ತಾ ಬಂದ ಮೋಡಗಳು ಸ್ಫೋಟಗೊಂಡು ಮಳೆ ಸುರಿಯತೊಡಗುತ್ತದೆ. ಸುರಿಯುವ ಮಳೆಗೆ ತನ್ನನ್ನು ತಾನು ಒಪ್ಪಿಸಿಕೊಂಡು ತಾಂಡವವಾಡುತ್ತಾನೆ ಶಿವ. ಸುರಿಯುವ ಘೋರ ಮಳೆಗೆ ನದಿಯ ಮಟ್ಟ ಹೆಚ್ಚುತ್ತಾ



ಇದನ್ನೆಲ್ಲಾ ಸಾಕ್ಷೀಕರಿಸುವ ಅವನ ಭದ್ರ ಎಂಬ ಗಣಾಚಾರಿ ಶಿವ ಲಯವಾಗುವುದನ್ನು ಕಾಣುತ್ತಾನೆ. ಇದು ಸುದೀರ್ಘ ವಿವರಣೆಯಲ್ಲಿ ಮೂಡಿಬರುವಾಗ ನಾನು ಅವನ್ನು ಸ್ವಯಂ ನೋಡುತ್ತಿರುವಂತೆ ಭಾವಪರವಶತೆಯಲ್ಲಿ ಟೈಪ್ ಮಾಡುತ್ತಿದ್ದೆ. ಆ ಅಧ್ಯಾಯ ಬರೆದು ಮುಗಿಸುವ ವೇಳೆಗೆ ನಾನು ನಿತ್ರಾಣಗೊಂಡಿದ್ದು ಉರುಳಿ ಹೋಗುವಂತಾಗಿಬಿಟ್ಟಿದ್ದೆ. (ಯಾವುದೇ ಭಾವುಕ ದೃಶ್ಯಗಳನ್ನು ಬರೆಯುವಾಗ ಆ ಚಿತ್ರಣಗಳನ್ನು ಕಟ್ಟಿಕೊಳ್ಳುತ್ತಾ ಹೋಗುವಾಗ ದುಃಖದ ದೃಶ್ಯಗಳಾಗಿದ್ದರೆ ಅಳುತ್ತಲೇ ಬರೆಯುವುದು ನನ್ನ ವಿಷಯದಲ್ಲಿ ಸಾಮಾನ್ಯವೇ. ಪಾತ್ರದ ಪರಿಸ್ಥಿತಿಗೆ ಸ್ಪಂದಿಸುವಾಗ ಆ ಬಗೆಯ ಭಾವತೀವ್ರತೆ ಉಂಟಾಗುತ್ತದೆ. ಸಾವುನೋವಿನ ಸಂಗತಿಗಳನ್ನು ಅಳುಅಳುತ್ತಾ ಬರೆಯುವ ನನ್ನನ್ನು ನೋಡಿ ಜೊತೆಗಿರುವವರು ನಗುತ್ತಿರುತ್ತಾರೆ. ಕಾಲ್ಪನಿಕ ಪಾತ್ರಗಳ ಬದುಕು ಬವಣೆಗಳಿಗೆ ಇಷ್ಟು ಪರವಶವಾಗುವ ಹುಚ್ಚುತನವೇಕೆ ಎಂದು ಕೇಳುತ್ತಾರೆ.)

ಇರಲಿ, ಈ ಪ್ರಳಯ ತಾಂಡವದ ಅಧ್ಯಾಯವನ್ನು ಬರೆದು ಮುಗಿಸಿದ ಮೂರ್‍ನಾಲ್ಕು ದಿನಗಳಲ್ಲಿ ನಮಗೆ ರುದ್ರಪ್ರಯಾಗದಲ್ಲಿ ಜಲಪ್ರವಾಹ ಉಂಟಾಗಿದ್ದ ಸುದ್ದಿ ತಲುಪಿತು. ಪತ್ರಿಕೆಯೊಂದನ್ನು ತೆರೆದ ಕೂಡಲೇ ಕಂಡಿದ್ದೇ ಶಿವನ ಬೃಹತ್ ಎತ್ತರದ ವಿಗ್ರಹದ ಎದೆ ಮಟ್ಟಕ್ಕೆ ನೀರು ಅಪ್ಪಳಿಸುತ್ತಿದ್ದ ಚಿತ್ರ. ವರದಿಯಲ್ಲಿ ಕ್ಲೌಡ್ ಬರ್ಸ್ಟ್ (ಮೇಘ ಸ್ಫೋಟದ) ಬಗ್ಗೆ ಉಲ್ಲೇಖವಿತ್ತು. ಪ್ರತಿದಿನವೂ ಬಂದು ಆಗಿಂದಾಗ್ಗೆ ಬರೆದ ಧುಂಧಿಯ ಕಾದಂಬರಿಯ ಅಧ್ಯಾಯಗಳನ್ನು ಕೇಳುತ್ತಿದ್ದ ನನ್ನ ಮಿತ್ರವೃಂದಕ್ಕೆ ಅತ್ಯಾಶ್ಚರ್ಯವಾಗಿತ್ತು. ಅಲ್ಲಿ ಪ್ರವಾಹ ಉಂಟಾಗಿರುವುದೇನೋ ಸರಿ. ಆದರೆ ಕೆಲವು ದಿನಗಳ ಹಿಂದೆಯೇ ನಾನು ನಡುರಾತ್ರಿಯಲ್ಲಿ ಕುಳಿತುಕೊಂಡು ಅದಕ್ಕೆ ತೀರಾ ಸಮೀಪವಾಗಿರುವಂತಹ ಚಿತ್ರಣವನ್ನು ಬರವಣಿಗೆಯ ರೂಪದಲ್ಲಿ ಇಳಿಸಿದ್ದು ಹೇಗೆ?

ಕೇಳುವ ಹಾಡುಗಳು

ಒಮ್ಮೊಮ್ಮೆ ನಮ್ಮ ಪಾಡಿಗೆ ನಾವು ನಡೆದುಕೊಂಡು ಹೋಗುತ್ತಿರುತ್ತೇವೆ. ಇದ್ದಕ್ಕಿದ್ದಂತೆ ಒಂದು ಹಾಡು ಮನಸ್ಸಿಗೆ ಬಂದು ಗುನುಗುಟ್ಟುತ್ತಾ ಹಾಡಿಕೊಂಡು ಹೋಗುತ್ತೇವೆ. ಸ್ವಲ್ಪ ದೂರ ಕ್ರಮಿಸುತ್ತಿದ್ದಂತೆ ರೇಡಿಯೋದಲ್ಲಿಯೋ ಅಥವಾ ಇನ್ನಾವುದೇ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿಯೋ, ನಾವು ಗುನುಗುಟ್ಟಿಕೊಳ್ಳುತ್ತಿರುವ ಹಾಡಿನ ಮುಂದುವರಿದ ಭಾಗವನ್ನು ಕೇಳುತ್ತೇವೆ. ಅದು ಹೇಗೆ ಇದೇ ಹಾಡನ್ನು ನಾನು ಗುನುಗುಟ್ಟಿಕೊಳ್ಳುತ್ತಿದ್ದೆ ಎಂದು ಆಶ್ಚರ್ಯ ಕ್ಕೊಳಗಾಗುತ್ತೇವೆ.

ಒಂದೇ ಹಾಡು

ಕೆಲವು ವರ್ಷಗಳ ಹಿಂದೆ ಒಂದು ಆಯುರ್ವೇದದ ಚಿಕಿತ್ಸಾಲಯದಲ್ಲಿ ಹಂಸಲೇಖ ಚಿಕಿತ್ಸೆ ಪಡೆಯುತ್ತಿದ್ದರು. ಆಗ ನಾನೂ ಅವರ ಜೊತೆ ಇದ್ದೆ. ಒಂದು ಬೆಳಗ್ಗೆ ಹಂಸಲೇಖ ತಾವು ಯಾವುದೋ ಗೀತ ರಚನೆ ಮಾಡಲು ಕುಳಿತಿದ್ದರು. ನಾನು ನನ್ನ ಪಾಡಿಗೆ ಸ್ನಾನ ಮಾಡಿಕೊಂಡು ಮನಸ್ಸಿಗೆ ಬಂದ ಯಾವುದೋ ಹಳೆಯ ಹಿಂದಿ ಚಲನಚಿತ್ರಗೀತೆಯನ್ನು ಗಟ್ಟಿಯಾಗಿಯೇ ಹಾಡಿಕೊಳ್ಳುತ್ತಿದ್ದೆ. ಹೊರಗೆ ಕುಳಿತಿದ್ದ ಹಂಸಲೇಖ ಜೋರಾಗಿ ನಕ್ಕು ನನ್ನ ಗಮನ ಸೆಳೆದರು. ನಾನು ಜೋರಾಗಿ ಹಾಡುವ ಮೂಲಕ ಅವರ ಸಾಹಿತ್ಯ ರಚನೆಗೆ ಭಂಗ ತಂದನೇನೋ ಎಂದುಕೊಂಡೆ. ಆದರೆ ಹಂಸಲೇಖ ಹೇಳಿದ್ದೇ ಬೇರೆ, "ನಾನು ಮನಸ್ಸಿನಲ್ಲಿ ಅದೇ ಹಾಡನ್ನು ನೆನೆಸಿಕೊಳ್ಳುತ್ತಿದ್ದೆ. ನೀವು ಅದೇ ಸಾಲನ್ನೇ ಹಾಡಿದಿರಿ" ಎಂದು. ಇಬ್ಬರಲ್ಲೂ ಒಂದೇ ಹಾಡು ಹೇಗೆ ಪ್ರವೇಶಿಸಿತ್ತು?

ಕಾಡುಕುರುಬರ ರಿಮೋಟ್ ವ್ಯೂ

ಹಂಪಿ ಯೂನಿವರ್ಸಿಟಿಯ ಡಾ.ಎ.ಎಸ್.ಪ್ರಭಾಕರ್ ಕ್ಷೇತ್ರಕಾರ್ಯದಲ್ಲಿ ಗ್ರಹಿಸಿದ ಅನೇಕ ಸೂಕ್ಷ್ಮ ಸಂಗತಿಗಳಲ್ಲಿ ಇದೂ ಒಂದು. ಮೈಸೂರು ಸುತ್ತಮುತ್ತಲಿರುವ ಕಾಡುಕುರುಬ, ಸೋಲಿಗರಂತಹ ಬುಡಕಟ್ಟು ಸಮುದಾಯದವರು ಓಡಾಡುವಾಗ ಬಹಳಷ್ಟು ದೂರದಲ್ಲಿಯೇ ನಿಂತು, ಕಣ್ಣಿಗೆ ಏನೂ ಕಾಣದಿದ್ದರೂ ಮುಂದೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಆನೆಗಳ ಹಿಂಡಿದೆ ಎಂದು ತಿಳಿಸುತ್ತಾರೆ. ಅಷ್ಟೇ ಏಕೆ ಜೇನುಕುರುಬರಲ್ಲಿ ಹಲವರು ಹಾರುತ್ತಿರುವ ಜೇನುಹುಳುವನ್ನು ನೋಡಿ ಈ ಹುಳುವು ಜೇನನ್ನು ಒಯ್ಯುತ್ತಿದೆಯೋ ಅಥವಾ ಜೇನನ್ನು ಗೂಡಿನಲ್ಲಿ ಸಂಗ್ರಹಿಸಿಟ್ಟು ಖಾಲಿಯಾಗಿ ಹಿಂದಕ್ಕೆ ಮರಳುತ್ತಿದೆಯೋ ಎಂದು ಹೇಳುತ್ತಾರಂತೆ. ಇಂತಹ ಸೂಕ್ಷ್ಮತೆಗಳು ಈ ಬುಡಕಟ್ಟು ಮಂದಿಗೆ ಹೇಗೆ ಲಭಿಸುತ್ತದೆ?

ಸುಳಿವು ಪಡೆವ ಪ್ರಾಣಿಗಳು

ಸಮುದ್ರದಲ್ಲಿ ಬಿರುಗಾಳಿ, ಭೂಕಂಪನ ಇತ್ಯಾದಿಗಳಾಗುವ ಮುನ್ನವೇ ಅರಿಯುವ ಮೀನು ಮತ್ತು ಇತರ ಜಲಚರಗಳು ಮತ್ತೊಂದು ಕಡೆಗೆ ತಂಡೋಪತಂಡವಾಗಿ ವಲಸೆ ಹೋಗಿಬಿಡುತ್ತವೆ. ಅದೇರೀತಿ ಭೂಚರ ಪ್ರಾಣಿಗಳೂ, ಹಕ್ಕಿಗಳೂ ಭೂಕಂಪ, ಅಗ್ನಿಪರ್ವತದ ಸ್ಫೋಟ, ಬಿರುಗಾಳಿ, ಸುನಾಮಿಗಳಂತಹ ಪ್ರವಾಹಗಳನ್ನು ಬರುವ ಮುನ್ನವೇ ಮುನ್ಸೂಚನೆಗಳನ್ನು ಪಡೆದು ಅಲ್ಲಿಂದ ಸುರಕ್ಷಿತ ಸ್ಥಳಗಳಿಗೆ ವಲಸೆ ಹೋಗುತ್ತವೆ. ಇದು ಹೇಗೆ?



ದೇವರು ಮತ್ತು ದೆವ್ವಗಳನ್ನು, ಯಂತ್ರತಂತ್ರ ಮಾಟಮಂತ್ರಗಳನ್ನು, ಅತೀಂದ್ರಿಯ ಶಕ್ತಿಗಳ ಪ್ರಭಾವಗಳನ್ನು ನೂರಕ್ಕೆ ನೂರು ನಿರಾಕರಿಸುವ ನನಗೆ ಅನ್ನಿಸುವುದು ಇವೆಲ್ಲವೂ ಕಾಕತಾಳೀಯವೇ ಎಂದು.

"ಇಲ್ಲ" ಎನ್ನುತ್ತಾರೆ ಮೂಡಬಿದಿಯ ಭಾಸ್ಕರ್ ಬಂಗೇರಾ. ಏಕೆ ಮತ್ತು ಹೇಗೆ ಎಂದು ಮುಂದೆ ನೋಡುವ. ■

ಅಸಹಿಷ್ಣುತಾ ವೈರಸ್ ದಾಳಿಗೆ ಬಿಹಾರದಲ್ಲಿ ಇಲಾಜ್

ಹೊಗಳಿಕೆ ತೆಗಳಿಕೆ

ಬಾಲ್ಯದಲ್ಲಿ ಓದಿದ್ದ ನೆನಪಿನಂತೆ ಪಂಚತಂತ್ರದಲ್ಲೊಂದು ಸಾಂಕೇತಿಕ ಕಥೆಯಿದೆ- ಒಂದು ಇಲಿ ಒಬ್ಬಾತನಿಗೆ ಬಹಳ ತೊಂದರೆ ಕೊಡುತ್ತಿತ್ತಂತೆ. ಏನು ಮಾಡಿದರೂ ಅದನ್ನು ಹತೋಟಿಗೆ ತರಲಾಗಲಿಲ್ಲವಂತೆ. ಕೊನೆಗೆ ಗೆಳೆಯನೊಬ್ಬ ಆತನಿಗೆ 'ಅದರ ಬಲ ಅಗೆದು ನೋಡು. ಅಲ್ಲಿ ಸಂಪತ್ತಿರಬಹುದು. ಆ ಹಿನ್ನೆಲೆಯಿಂದಲೇ ಅದರ ಈ ಆಟ ಆರ್ಭಟಗಳೆಲ್ಲ' ಎಂದನಂತೆ. ಕೊನೆಗದು ಸತ್ಯವೂ ಆಗಿ ಸಂಪತ್ತು ತೆಗೆದ ಮೇಲೆ ಅದರ ಆಟ ನಿಂತಿತಂತೆ.

ಸಾಂಕೇತಿಕ ಕಥೆಯಾದರೂ ಇದರಲ್ಲಿ ಒಳಾರ್ಥವಿದೆ. ಯಾವುದೋ ಒಂದು ದೊಡ್ಡ ಹಿನ್ನೆಲೆಯ ಬಲ ನಮ್ಮ ಹಿಂದೆ ಇದೆ ಎಂದಾಕ್ಷಣ ಇಂತಹ ಆರ್ಭಟಗಳೆಲ್ಲ ಜಾಸ್ತಿ. ಈಗ ಹೆಚ್ಚುತ್ತಿರುವ ಅಸಹಿಷ್ಣುತೆಯ ಆರ್ಭಟಗಳ ಹಿಂದೆಯೂ ಇಂತಾದ್ದೇ ಹಿನ್ನೆಲೆಯಿರುವುದು ಸ್ಪಷ್ಟ. ಅದನ್ನು ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ.

ಉತ್ತರದ ದಾದ್ರಿ ಪ್ರಕರಣ ಕೊಲೆಯಾದರೂ ಮನುಷ್ಯತ್ವವಿಲ್ಲದಾತನೊಬ್ಬ ಅತ್ಯಾಚಾರವಾಗಿಲ್ಲವಲ್ಲ ಎನ್ನುತ್ತಾನೆ. ಅಮಾಯಕ ದಲಿತ ಮಕ್ಕಳನ್ನು ಸುಟ್ಟ ಪ್ರಕರಣಕ್ಕೆ ಒಬ್ಬ ನಾಯಿಯ ಹೋಲಿಕೆ ಮಾಡುತ್ತಾನೆ. ಸೂಲಿಬೆಲೆಯ ಅಪ್ಪನ ವಯಸ್ಸಿನ ಭಗವಾನರನ್ನು ಏಕವಚನದಲ್ಲಿ ಸಂಬೋಧಿಸುತ್ತಾನೆ. ಕಲ್ಬುರ್ಗಿಯಂತಹ ಹಿರಿ ಜೀವದ ಕೊಲೆಯನ್ನು ಸಾತ್ವಿಕ ರೀತಿಯಲ್ಲಿ ಖಂಡಿಸುವುದನ್ನೂ ಕೂಡ ಕೀಳು ಭಾಷೆಯಲ್ಲಿ ಜರೆಯಲಾಗುತ್ತದೆ. ಇವೆಲ್ಲ ಅಸಹಿಷ್ಣುತೆಯ ಕೆಲ ಪ್ರತಿರೂಪಗಳಷ್ಟೆ.

ಬಿಹಾರ ಫಲಿತಾಂಶದ ಬಳಿಕ ಈಗ ಈ 'ಲೂಸ್ ಟಾಕರ್ಸ್'ಗಳ ಬಗ್ಗೆ ಬಿಜೆಪಿ ಪಕ್ಷದೊಳಗೆ ಭಾರೀ ಚರ್ಚೆಯಾಗತೊಡಗಿದೆ. ಕೇಂದ್ರದಲ್ಲಿ ಹೊಸ ಸರ್ಕಾರ ಬಂದ ಬಳಿಕ ಇಂತಹ ಪ್ರಚೋದನಾತ್ಮಕ ಅಪದ್ಧದ ಮಾತುಗಳು ಆಗಾಗ ಬರುತ್ತಲೇ ಇದ್ದವು. ಇಂತವುಗಳ ಬಗ್ಗೆ ನಿಜಕ್ಕೂ ಇವರಲ್ಲಿ ಸಮ್ಮತವಿಲ್ಲದಿದ್ದರೆ ಆರಂಭದಲ್ಲೇ ಇವರ ಬಾಯಿ ಮುಚ್ಚಿಸಬಹುದಿತ್ತು. ಆದರೆ ಇಂತವುಗಳಿಗೆಲ್ಲ ಬೇಕೆಂತಲೇ ಜಾಣಕಿವುಡುತನ ಪ್ರದರ್ಶಿಸಿದ ಪಕ್ಷದ ನಾಯಕರುಗಳು ಈ ಮೂಲಕ ಅಂತವರಿಗೆ ಮತ್ತಷ್ಟು ಉತ್ತೇಜನ ಕೊಡುವಂತಾದರು. ಈ ಎಲ್ಲಾ ಕಾರಣಕ್ಕೆ ಬಿಜೆಪಿ ಹೀನಾಯ ರೀತಿಯಲ್ಲಿ ಪತನದ ಹಾದಿ ತಲುಪುವಂತಾಯ್ತು.

- ಆರ್‌ಎಸ್‌ಪಿ, ಮಂಗಳೂರು

ಬಿಹಾರದ ರೈತರೇ ಬಿಜೆಪಿಯನ್ನು ಖೈಮಾ ಮಾಡಿಬಿಟ್ಟರು

ಗೋವಿನ ದೇಹದಲ್ಲಿ ಮುವತ್ಮೂರು ಕೋಟಿ ದೇವರಿದ್ದಾರೆ ಎಂದು ಹೇಳುತ್ತಾರೆ ವೈದಿಕರು. ಸಂಘ ಪರಿವಾರದವರು ಈ ಮುವತ್ಮೂರು ಕೋಟಿ ದೇವರನ್ನು ಬಡವರ ಮಾಂಸಾಹಾರದ ವಿರುದ್ಧ ರಾಜಕಾರಣಕ್ಕೆ ಬಳಸಿದ್ದರಿಂದ ಕೋಪಗೊಂಡ ಈ ಎಲ್ಲ ದೇವರುಗಳು ಬಿಹಾರದಲ್ಲಿ ಬಿಜೆಪಿಯನ್ನು ದಾರುಣವಾಗಿ ಸೋಲಿಸಿರಬೇಕು. ಮುವತ್ಮೂರು ಕೋಟಿ ದೇವರುಗಳಲ್ಲಿ ಕೇವಲ ಒಂದೊಂದು ಕೋಟಿ ದೇವರು ಒಟ್ಟಾಗಿ ಬಿಜೆಪಿಗೆ ಕೇವಲ ನಾಲ್ಕು-ನಾಲ್ಕು ಸೀಟು ಗೆಲ್ಲಿಸಿ ಕೊಟ್ಟಿದ್ದರೂ ಸಾಕಿತ್ತು, ಬಿಜೆಪಿ 132 ಸೀಟು ಗೆದ್ದು ಅಧಿಕಾರ ಹಿಡಿಯಲು ಸಾಧ್ಯವಾಗುತ್ತಿತ್ತು. ಆದರೆ ಬಿಜೆಪಿಯವರು ಗೋಮಾತೆಯ ಹೆಸರಲ್ಲಿ ಎಷ್ಟೇ ರಾಜಕಾರಣ ಮಾಡಿದರೂ ಈ ಗೋಮಾತೆಯ ಒಳಗಿರುವ ಕೋಟಿ-ಕೋಟಿ ದೇವರುಗಳು ಅವರಿಗೆ ಒಲಿಯಲೇ ಇಲ್ಲ, ಕಾರಣ ಬಡವರ ಹೊಟ್ಟೆಗೆ ಹೊಡೆಯುವ ಮಾಂಸದ ರಾಜಕಾರಣ ದೇವರಿಗೂ ಇಷ್ಟವಾಗಲಿಲ್ಲ, ಬಿಹಾರದ ಯಾದವ ಜಾತಿಯವರು ಯದುವಂಶಿಗಳು, ಶ್ರೀಕೃಷ್ಣನ ವಂಶದವರು, ಅವರು ಎಂದೂ ಗೋಮಾಂಸ ಸೇವಿಸಲಾರರು ಎಂದು ಮೋದಿ ತನ್ನ ಭೀಕರ ಭಾಷಣದಲ್ಲಿ ಹೇಳಿ ಬಿಹಾರದ ಯಾದವ ಜಾತಿಯವರನ್ನು ಕೃಷ್ಣ ಮತ್ತು ಗೋಮಾತೆಯ ಹೆಸರಲ್ಲಿ ಕೆರಳಿಸಿ ತನ್ನ ಕಡೆ ಸೆಳೆಯಲು ನೋಡಿದರೂ ಅದು ಫಲ ಕೊಡಲಿಲ್ಲ, ಕೇವಲ ಸೆಗಣಿ ಮಾತ್ರ ಕೊಟ್ಟಿತು. ಯಾಕೆಂದರೆ ಬಿಜೆಪಿಯ ಗೋಮಾಂಸ ರಾಜಕಾರಣದಿಂದಾಗಿ ಬಿಹಾರದ ಬಡ ಹಿಂದೂ ರೈತರು ಸಹ ತಮ್ಮ ಮುದಿ ಗೊಡ್ಡು ದನಗಳನ್ನು ಮಾರಲಾಗದೇ ಕೈಗೆ ಸಿಗುತ್ತಿದ್ದ ನಾಲ್ಕು ಕಾಸು ಸಹ ಕೈತಪ್ಪಿ ಹೋಗುತ್ತಿದ್ದುದರಿಂದ ಸಿಡಿದೆದ್ದು ಬಿಜೆಪಿ ವಿರುದ್ಧ ತಮ್ಮ ಮತ ಚಲಾಯಿಸಿ ಮಾಂಸದ ರಾಜಕಾರಣದಿಂದ ತಮ್ಮ ಮಕ್ಕಳ ಹೊಟ್ಟೆಗೆ ಹೊಡೆದ ಬಿಜೆಪಿಯನ್ನು ರೈತ ಮತದಾರರೇ ಕೊಚ್ಚಿ ಕೊಚ್ಚಿ ಖೈಮಾ ಮಾಡಿಬಿಟ್ಟರು. ಜೀವನದಲ್ಲೆಂದೂ ಗೋವು ಸಾಕಿ ಗೊತ್ತಿಲ್ಲದವರೇ ಗೋಪತ್ಯೆ ರಾಜಕಾರಣ ಮಾಡುತ್ತಿರುವುದನ್ನು ಹಿಂದೂ ರೈತರೇ ಸಹಿಸುತ್ತಿಲ್ಲ, ಈಗಲಾದರೂ ಬಿಜೆಪಿಯು ರೈತರನ್ನು ಅರ್ಥಮಾಡಿಕೊಳ್ಳುವುದೇ?

- ಆರ್.ಬಿ.ಶೇಣಾವ, ಮಂಗಳೂರು


ಸಮಸ್ಯೆಗೆ ಸರಿಯಾದ ಪರಿಹಾರ ಕೊಟ್ಟ ಬಿಹಾರಿಗಳು

ಅದೊಂದು ಹಳೆಯ ಗಾದೆಮಾತು 'ಅಲ್ಪನಿಗೆ ಐಶ್ವರ್ಯ ಬಂದರೆ ಆತ ಮಧ್ಯರಾತ್ರಿಯಲ್ಲೂ ಕೊಡೆಹಿಡಿದು ತಿರುಗುತ್ತಾನೆ' ಎಂದು. ಒಬ್ಬ ನಿಜ ಜನನಾಯಕ ಅಂದರೆ ಆತ ಏಕಾಏಕಿ ಒಂದೇ ದಿನದಲ್ಲಿ ಹುಟ್ಟಿ ಬರೋದಿಲ್ಲ, ಆತನ ಸ್ಥಾನದ ಹಿಂದೆ ದೊಡ್ಡದೊಂದು ಪರಿಶ್ರಮದ ಹಿನ್ನೆಲೆಯೇ ಇರುತ್ತದೆ. ಆದರೆ ಬಿಜೆಪಿ ಪೂರ್ತಿ ಐದು ವರ್ಷ ದೇಶವನ್ನಾಳಿದುದಿನಿಂದ ಹಿಡಿದು ಮೊನ್ನೆ ಮೊನ್ನೆವರೆಗೆ ಮೂರ್ಖರಲ್ಲ ಎಂಬುವುದನ್ನ ಎತ್ತಿ ತೋರಿಸುತ್ತಿದೆ.

ಫಲಿತಾಂಶದ ದಿನ ಟಿವಿ ಚರ್ಚೆಯಲ್ಲಿ ಆರಂಭದಲ್ಲಿ ಬಿಜೆಪಿಯೇ ಬಹುತೇಕ ಲೀಡ್‌ನಲ್ಲಿತ್ತು, ಚರ್ಚೆಗೆ ಬಂದ ಮೋದಿಭಜಕರು ಚೆಡ್ಡಿಗಳೇ ಗೆಲ್ಲುತ್ತಾರೆಂಬ ಭ್ರಮೆಯಲ್ಲಿ ಮೋದಿ ಅಲೆಯನ್ನು ಹೊಗಳಿದ್ದೇ ಹೊಗಳಿದ್ದು. (ಕಿರಣ್ ಬೇಡಿಯಂತಹ ಊಸರವಳ್ಳಿಯ ಹೇಳಿಕೆಯಾದ ಅಭಿವೃದ್ಧಿ ಪರ ಮೋದಿಗೆ ಬೆಂಬಲ ಎನ್ನುವುದು ಬಳಿಕ ಅದು ಬರೀ "ಪರಪರ" ಎಂದು ನಗೆಪಾಟಲಿಗೀಡಾಯಿತು). ಇಂತಹ ಹೊಗಳು ಭಟ್ಟರ ಮುಖದಲ್ಲಿ ನಿಜ ಫಲಿತಾಂಶ ಹೊರಬೀಳುತ್ತಾ ಹೋದಂತೆ ಪ್ರೇತ ಕಳೆ ತುಂಬುತ್ತಾ ಹೋಗಿದ್ದು ನೋಡುಗರಿಗೆ ಮಜಾ ತರಿಸಿತ್ತು.

ಟಿವಿಯಲ್ಲಿ ಈ ಫಲಿತಾಂಶದ ಬಗ್ಗೆ ರಾಜ್ಯದ ಬಿಜೆಪಿ ಅಧ್ಯಕ್ಷ ಪ್ರಹ್ಲಾದ್ ಜೋಷಿ ನಡುಮಧ್ಯರಾತ್ರಿಯಲ್ಲಿ ನಿದ್ದೆಯಿಂದ ಎದ್ದವನಂತೆ ಕಣ್ಣು ಪಿಳಿಪಿಳಿ ಮಾಡುತ್ತಾ ಗರಬಡಿದವನಂತೆ ಉತ್ತರಿಸುತ್ತಿರುವುದನ್ನ ನೋಡಿದಾಗ ನಗು ಬರುತ್ತಿತ್ತು, ಹೇಗಿದ್ದರೂ ಈ ಚುನಾವಣಾ ಉಸ್ತುವಾರಿಯನ್ನು ಹೊತ್ತವನು ಆತನ ದೋಸ್ತ್ ಅನಂತ್ ಕುಮಾರ್ ಅಲ್ಲವೇ. ಅದ್ದರಿಂದ ಜೋಷಿಗೆ ದಂಗಾಗದೆ ಇರುತ್ತದೆಯೇ?

ಬಿಜೆಪಿ ಅಧಿಕಾರದಲ್ಲಿಲ್ಲದ ರಾಜ್ಯದಲ್ಲಿ ಗಲಾಟೆ ನಡೆದರೆ ಮೋದಿಯ ತಪ್ಪೇನು? ಎಂದು ಕೇಳುವವರಿದ್ದಾರೆ. ಅದು ದಾದ್ರಿ ಪ್ರಕರಣವಾಗಿರಬಹುದು ಕಲ್ಬುರ್ಗಿಯವರ ಹತ್ಯೆಯೂ ಆಗಿರಬಹುದು. ವಿಕೆ ಸಿಂಗನಂತವರು ನಾಯಿಗೆ ಕಲ್ಲು ಹೊಡೆದರೆ? ಎಂದು ಇಂತದಕ್ಕೆ ಸಂಬಂಧಿಸಿದ ವಿಕೃತ ಡೈಲಾಗ್‌ಗಳೂ ಆಗಿರಬಹುದು. ಅವುಗಳಿಗೂ, ಮೋದಿಗೂ ಸಂಬಂಧ ಇದ್ದೇ ಇದೆ. ಮೊನ್ನೆ ಶಿವಸೇನೆಯವರೇ ಅಂದಂತೆ: "ಗೋದ್ರಾ ಘಟನೆಯಿಂದಲೇ ನೀವು ಕಣ್ಮಣಿಯಾದ ದ್ದೆಂಬುದನ್ನ ಮರೆತೀರಾ?" ಮತಾಂಧನೊಬ್ಬ ಉನ್ನತ ಅಧಿಕಾರಕ್ಕೇರಿದಾಗ ಎಲ್ಲೆಲ್ಲೋ ಇರುವ ಎಲ್ಲಾ ರೀತಿಯ ಮತಾಂಧ ಶಕ್ತಿಗಳು ಬಲ ಪಡೆದುಕೊಳ್ಳುತ್ತವೆ. ಅವೈಗೆ (ಅ)ನೈತಿಕ ಬೆಂಬಲ ದೊರೆತದ್ದರಿಂದಲೇ ಹಲವಾರು



ಈ ಮೋದಿ ಎಂಬಾತ ಯಾರೆಂಬುವುದೇ ಗುಜರಾತಿಗರನ್ನ ಬಿಟ್ಟರೆ ಗೊತ್ತಿದ್ದಿರಲಿಲ್ಲ, ಅಂತವನು ಏಕಾಏಕಿ (ಕು)ಪ್ರಸಿದ್ಧಿಗೆ ಬಂದು ಕೆಲ ಮೂರ್ಖಜನಗಳ ಕಣ್ಮಣಿಯಾದದ್ದು ಆತನ ಕುಖ್ಯಾತ ಗೋದ್ರಾ ನರಮೇಧ ಹಾಗು ಹಿಟ್ಲರನ್ನು ನೆನಪಿಸುವ ಆತನ ಉದ್ರೇಕಕಾರಿ ಭಾಷಣಗಳಿಂದಾಗಿಯೇ ಹೊರತು ಬೇರೇನಕ್ಕಲ್ಲ.

ಕಳ್ಳನಿಗೆ ಸುಳ್ಳ ಸಾಕ್ಷಿ ಎಂಬಂತೆ ಇನ್ನೊಬ್ಬ ಕ್ರಿಮಿನಲ್ ಅಮಿತ್ ಷಾ ಆತನ ಕುಕಾರ್ಯಗಳಿಗೆಲ್ಲ ಶಕ್ತಿ ನೀಡುವ ಬಲಗೈ ಜೋಡಿ. ಇಂತಹ ಒಮ್ಮೆಲೆ ಹುಟ್ಟಿಕೊಂಡ ಅಲ್ಪ ಜನರು ದೊಡ್ಡ ಐತಿಹಾಸಿಕ ಚರಿತ್ರೆಯಿರುವಂತಹ ದೇಶವನ್ನೇ ಅಲ್ಲೋಲಕಲ್ಲೋಲ ಮಾಡಹೊರಟಿರುವುದನ್ನು ಜನ ಎಷ್ಟೊಂತ ನೋಡಿಕೊಂಡಿರಲು ಸಾಧ್ಯ? ಆರಂಭದಲ್ಲಿ ಇವರ ವ್ಯವಸ್ಥಿತ ಬಣ್ಣದ ಮಾತುಗಳಿಗೆ ಬಲಿಬಿದ್ದ ಜನತೆ ತಮ್ಮಿಂದ ತಪ್ಪಾಗಿದೆ ಎಂಬುವುದನ್ನ ಕಳೆದ ದೆಹಲಿ ಚುನಾವಣೆಯಲ್ಲೇ ಮುಖಕ್ಕೆ ಹೊಡೆದಂತೆ ತೋರಿಸಿಕೊಟ್ಟಿದ್ದರು. ಅದರ ಮುಂದುವರೆದ ಭಾಗವೇ ಈ ಬಿಹಾರ ಫಲಿತಾಂಶ.

ನಿಮ್ಮ "ಬಂಡಲ್ ರಾಜ್" (ವ್ಯಾಪಮ್ಮಾಗದ ಕಪ್ಪುಹಣ, ಕಾರ್ಪೊರೇಟ್ ಕುಳಗಳ ಓಲೈಕೆ, ಅಸಹಿಷ್ಣುತೆ ಇತ್ಯಾದಿ)ಗಿಂತ ಲಾಲುನಂತವರ "ಜಂಗಲ್ ರಾಜ್ಯ"ವೇ ನಮಗೆ ಎಷ್ಟೋ ವಾಸಿ ಎಂದು ಮೋದಿಯ ಮುಸುಡಿಗೆ ದೊಡ್ಡ ಮಂಗಳಾರತಿಯನ್ನೇ ಬಿಹಾರಿಗರು ಮಾಡಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ಅಲೆಯೆಂಬ ಹುಸಿ ಉನ್ಮಾದವನ್ನು ಜನರಲ್ಲಿ ಹಬ್ಬಿಸಲಾಗಿತ್ತು, ಆದರೆ ಅಂದಿನ ಮೋದಿ ಅಲೆ ಇಂದು "ಅಲೆ"ಯಾಗಿ ಉಳಿಯದೇ ತೊಲಗಿಸಲೇಬೇಕಾದಂತಹ "ಕೊಳೆ"ಯಾಗಿ ಬದಲಾಗಿರುವುದನ್ನ ಜನರು ಇಷ್ಟು ಬೇಗನೆ ಅರ್ಥಮಾಡಿಕೊಂಡದ್ದು ಜನರು ರಾಜಕಾರಣಿಗಳು ತಿಳಿದಂತೆ ಅನಾಹುತಗಳು ಸಂಭವಿಸಿರುವುದು. ಯಾಕೆಂದರೆ, ಆದಿತ್ಯನಾಥ, ಸಾಕ್ಷಿ ಮಹಾರಾಜ್, ವಿಕೆ ಸಿಂಗ್‌ನಂತವರು ಅರಚಾಡುವುದು ಗೋದ್ರಾ ಹೀರೋ ಮೋದಿ ನಮ್ಮ ಹಿಂದೆ ಇದ್ದಾನೆ ಎಂಬ ಧೈರ್ಯದ ಹಿನ್ನೆಲೆಯಿಂದಲೇ ತಾನೆ?

ಈ ಕಟುವಾಸ್ತವವನ್ನೇ ಹಿಂದೆ ಮೋದಿಯ ಬೆಂಬಲಿಗರಾಗಿದ್ದ ಅರುಣ್ ಶೌರಿ ಹೇಳಿದ್ದು: "ತಮ್ಮಿಂದಾದ ತಪ್ಪುಗಳನ್ನು ತಿದ್ದಿಕೊಳ್ಳಲು ಇವರುಗಳು ತಯಾರಿಲ್ಲ ಎಂಬುದೇ ಇವರ ಸಮಸ್ಯೆ" ಈ 'ಸಮಸ್ಯೆ'ಗೆ ಜನರೇ ತಕ್ಕ ಉತ್ತರ ನೀಡಿದ್ದಾರೆ. ಭೇಷ್ ಬಿಹಾರಿಗರೇ!

-ಅವಿನಾಶ್ ಎಮ್.ಎಸ್, ನೆಲ್ಲಿಕಾರ್

ಬಿಜೆಪಿಗೆ ಮತ ಹಾಕದ 68% ಜನರು ರಾಷ್ಟ್ರ ವಿರೋಧಿಗಳಾ?

ಬಿಜೆಪಿ ಪಾರ್ಟಿಯ ವಿರುದ್ಧ ಅಥವಾ ಗೋಹತ್ಯೆ ನಿಷೇಧದ ವಿರುದ್ಧ ಮಾತನಾಡುವ ಹಿಂದೂಗಳು ರಾಷ್ಟ್ರ ವಿರೋಧಿಗಳು ಹಾಗೂ ಹಿಂದೂ ಧರ್ಮದ್ರೋಹಿಗಳು ಎಂಬ ಅಭಿಪ್ರಾಯವನ್ನು ಚೆಡ್ಡಿಗಳು ಸೋಷಿಯಲ್ ಮೀಡಿಯಾದಲ್ಲಿ ಹರಡುತ್ತಿದ್ದಾರೆ. ಆದರೆ ಈಗ ಬಿಹಾರದಲ್ಲಿ ಕೇವಲ 32% ಜನರು ಮಾತ್ರ ಬಿಜೆಪಿಗೆ ವೋಟು ಕೊಟ್ಟಿದ್ದಾರೆ. ಇದರ ಅರ್ಥ ಉಳಿದ 68% ಜನರು ರಾಷ್ಟ್ರ ವಿರೋಧಿಗಳು ಅಥವಾ ಧರ್ಮದ್ರೋಹಿಗಳು ಎಂದು ಅರ್ಥ ತಾನೇ? ಇಷ್ಟೊಂದು ದೊಡ್ಡ ಸಂಖ್ಯೆಯ ಜನರು ರಾಷ್ಟ್ರದ್ರೋಹಿಗಳು ಮತ್ತು ಧರ್ಮ ವಿರೋಧಿಗಳು ಎಂದು ಪರೋಕ್ಷವಾಗಿ ಆರೋಪಿಸುವ ಚೆಡ್ಡಿಗಳೇ ನಿಜವಾದ ರಾಷ್ಟ್ರದ್ರೋಹಿಗಳು ಹಾಗೂ ಮಾನವತೆ ವಿರೋಧಿಗಳು ಎನ್ನುವುದೇ ಸರಿ. ಬಿಜೆಪಿಯ ವಿರುದ್ಧ ವೋಟು ಕೊಟ್ಟ 68% ಮತದಾರರಲ್ಲಿ 18% ಮತದಾರರು ಅಲ್ಪಸಂಖ್ಯಾತರಾದರೆ ಉಳಿದ 50% ಮತದಾರರು ಹಿಂದೂಗಳೇ ಆಗಿದ್ದಾರೆ. ಅಂದರೆ ಬಿಜೆಪಿಗೆ ಕೇವಲ ...ಗಿಂತಲೂ ಕಡಿಮೆ ಹಿಂದೂ ಮತದಾರರು ... ಕೊಟ್ಟಿದ್ದರೆ ಬಿಜೆಪಿಯ ವಿರುದ್ಧ 50% ಹಿಂ... ವೋಟ್ ಕೊಟ್ಟಿದ್ದಾರೆ. ಇದರ ಅರ್ಥ ಬಿ... ಪರವಾಗಿರುವ ಹಿಂದೂಗಳಿಗಿಂತ ಬಿ... ವಿರುದ್ಧವಾಗಿರುವ ಹಿಂದೂಗಳ ಸಂಖ್ಯೆ ಒಂದೂವ... ಹೆಚ್ಚು! (2014 ರ ಲೋಕಸಭೆ ಚುನಾವಣೆಗ... ಅಂಕಿಸಂಖ್ಯೆ ಅನ್ವಯ). ಹಾಗಾದರೆ ಬಹು... ಹಿಂದೂಗಳನ್ನು ತಾನು ಪ್ರತಿನಿಧಿಸುವುದಾಗಿ ... ಕೊಚ್ಚಿಕೊಳ್ಳುವುದು ಯಾವ ಆಧಾರದಲ್ಲಿ? ಗೋಹ... ಬಹುಸಂಖ್ಯಾತರ ಭಾವನೆಗಳಿಗೆ ಘಾಸಿಯಾ... ನಿಜವಾಗಿದ್ದರೆ ಬಹುಸಂಖ್ಯಾತ ಹಿಂದೂ ಮ... ಬಿಜೆಪಿಯ ವಿರುದ್ಧ ಯಾಕೆ ಮತ ಚಲಾಯಿಸು... ಹಾಗಾಗಿ ಇನ್ನು ಮುಂದೆ ಸಂಘ ಪರಿವಾ... ಬಿಜೆಪಿಯವರು ಹಾಗೂ ಕಾವಿ ವೇಷಧಾರಿ ರಾಜಕ... ತಾವು ಸಮಸ್ತ ಹಿಂದೂ ಸಮಾಜದ ಭಾ... ಪ್ರತಿನಿಧಿಗಳು ಎಂದು ಕ್ಲೇಮ್ ಮಾಡುತ್ತಾ ... ನಾತ್ಮಕವಾಗಿ ಭಾಷಣ ಮಾಡುವ ಮೊದಲು ... ಸಮಾಜದೊಳಗೆಯೇ ತಮ್ಮ ಪರವಾಗಿ ಹಾಗು ... ವಿರುದ್ಧವಾಗಿ ಇರುವ ಹಿಂದೂಗಳ ಅನುಪಾತ... ಎಂದು ನೈಜ ಅಂಕಿ-ಸಂಖ್ಯೆ ಮೂಲಕ ತಿಳಿದು... ಒಮ್ಮೆ ತಮ್ಮ ಆತ್ಮವಿಮರ್ಶೆ ಮಾಡಿಕೊಳ್ಳಲಿ.

- ಪ್ರವೀಣ್ ಎಸ್ ಶೆಟ್ಟಿ, ಮಂ...

ಪುರಾಣಗಳೆಲ್ಲಾ ತರ್ಕವಿಹೀ... ಅಡಗೋಲಜ್ಜಿ ಕತೆಗಳು!

ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾ... ಚತುರ್ದಶಿಯ ದುರಂತ ನಾಯಕ ಭೂಮಿಪು... ಪ್ರವೀಣ್ ಎಸ್ ಶೆಟ್ಟರ ಲೇಖನ ನರಕ ... ಹಬ್ಬದ ಸಂದರ್ಭಕ್ಕೆ ಪ್ರಶಸ್ತವಾಗಿತ್ತು, ನರಕನು ... ವಿಷ್ಣುವಿನ ಮಗ. ವಿಷ್ಣು ವರಾಹರೂಪದಲ್ಲಿ ಸಮ... ಹೋಗಿ ಹಿರಣ್ಯಾಕ್ಷ ರಾಕ್ಷಸನನ್ನು ಕೊಂದು ಭೂದ... ರಕ್ಷಿಸಿದ ಮೇಲೆ ಎಲ್ಲಾ ವೈದಿಕ ಕತೆಗಳಲ್ಲಿರುವಂ... ದೇವರ ರಸಿಕ ಬುದ್ಧಿ ಹೊರಬಂದು ಭೂದೇವಿ... ಮಿಲನವಾದಾಗ ಭೂದೇವಿಗೆ ನರಕಾಸುರ ಹು...

ಭೂಮಿತಾಯಿ ಮಹಾ ಸಾತ್ವಿಕ ಶಕ್ತಿ ಎಂದು ... ಗೊತ್ತಿದೆ. ಪುರಾಣಗಳ ಪ್ರಕಾರ ವರಾಹ (ವಿ... ಮಹಾಸಾತ್ವಿಕ ಗುಣವುಳ್ಳ ದೇವರಂತೆ... ತಾಯಿಗಳಿಬ್ಬರೂ ಸಾತ್ವಿಕ ದೇವರಾಗಿರುವಾಗ... ದುಷ್ಟ ರಾಕ್ಷಸನಾಗಲು ಹೇಗೆ ಸಾಧ್ಯ? ಆಂದರೆ ... ವಿಷ್ಣುವಿನ ಜೀನ್ಸ್‌ನಲ್ಲಿಯೇ ಏನಾದರೂ ... ಗುಣವಿದ್ದು ಅದು ಮಗನಿಗೆ ಹೋಗಿರಬಹುದ... ತಾಯಿಗಳ ಗುಣಾವಗುಣಗಳು ಮಕ್ಕಳಿ... ಪಾರಂಪರ್ಯವಾಗಿ ಬರುವುದು ನಿಜ ಎಂದು... ವಿಜ್ಞಾನಿಗಳು ಹೇಳುತ್ತಾರೆ.

ಇನ್ನು ಹಿರಣ್ಯಾಕ್ಷ ಭೂದೇವಿಯನ್ನು ಅಪಹ... ಹೋಗಿ ಸಮುದ್ರದ ಅಡಿ ಬಂಧಿಸಿ ಇಡುತ್ತಾನ... ಪುರಾಣ. ಇದು ಹೇಗೆ ಸಾಧ್ಯ? ಸಮುದ್ರ ... ಪೃಥ್ವಿಯ ಮೇಲೆಯೇ ಹೊರತು ಸಮುದ್ರ ... ಬೇರೆ ಅಲ್ಲ, ಹಾಗಿರುವಾಗಿ ಸಮುದ್ರಸಹಿ... ಪೃಥ್ವಿಯನ್ನು ಹಿರಣ್ಯಾಕ್ಷ ಎತ್ತಿಕೊಂಡು ಹೋಗಿ ... ಇಡಲು ಹೇಗೆ ಸಾಧ್ಯ? ಒಂದು ಸಮು... ಇನ್ನೊಂದು ಸಮುದ್ರವನ್ನು ಬಂಧಿಸಿಡಲು ... ನೀರಿನಲ್ಲಿ ನೀರು ಸೇರಿ ಸಮುದ್ರಗಳೆಲ್ಲಾ ... ದಿಲ್ಲವೇ? ಬಹುಶಃ ಆಗ ಆದ ಜಗತ್ಪ್ರಳಯ... ಭೂ ಪ್ರದೇಶ ನೀರಡಿ ಮುಳುಗಿರಬಹುದು... ಆಗಿನ ಮಾನವರು ತಮ್ಮ ಪ್ರಯತ್ನದಿಂದ ... ನೀರನ್ನು ಹೊರಹಾಕಿರಬಹುದು ಮತ್ತ... ಸಂಕೇತಿಸಲು ಈ ವರಾಹವತಾರದ ಕಥೆ ಹೆಣೆ... ಎಂದು ವೈದಿಕರು ವಾದಿಸಬಹುದು.

ಆದರೆ ಕ್ರಿ.ಶ. 4 ನೇ ಶತಮಾನದಿಂದ ... ಶತಮಾನದವರೆಗೆ ಭಾರತದ ವಿವಿಧೆಡೆ ... ದೇವಸ್ಥಾನದ ಶಿಲ್ಪಗಳಲ್ಲಿ ವರಾಹ ದೇವರು ಭೂ... ತನ್ನ ಕೊರೆಯ ಮೇಲೆ ಹೊತ್ತಿರುವಂತೆ ತೋರಿ... ಮೂರ್ತಿಗಳಲ್ಲಿ ಎಲ್ಲಿಡೆ ಭೂದೇವಿ ಬುಟ್ಟಿಯ ... ಅದರಲ್ಲಿ ಮನೆದೇವಳ ಮರ ಇತ್ಯಾದಿ ... ಚಿತ್ರಿಸಲಾಗಿತ್ತು, ಆದರೆ ಹಿಂದಿನ ನೂರೈವತ್ತು ... ರಚಿಸಲಾದ ಚಿತ್ರಗಳಲ್ಲಿ ವರಾಹನು ತನ್ನ ... ಸಮುದ್ರವೂ ಇರುವ ಪೃಥ್ವಿಯ ಗೋಲ...

...ಉತ್ತರ ಕರ್ನಾಟಕದವರೂ ನಾಯಕರಾಗಬೇಕು'

ಉತ್ತರ ಕರ್ನಾಟಕದಲ್ಲೊಂದು ಫಿಲ್ಮ್ ಚೇಂಬರ್ ಆಗಿದೆ. ಅಲ್ಲಿಯೂ ಅನೇಕ ಚಿತ್ರಗಳು ನಿರ್ಮಾಣಗೊಳ್ಳುತ್ತಿವೆ. ಆ ಚಿತ್ರಗಳು ಈಗ ಸರದಿಯಲ್ಲಿ ಬಿಡುಗಡೆಗೆ ಸಿದ್ಧವಾಗಿದೆ. ಕಳೆದ ವಾರ ತೆರೆ ಕಂಡ 'ಮನಮೆಚ್ಚಿದ ಬಂಗಾರು' ಚಿತ್ರದ ನಾಯಕ 'ಹನುಮಂತು' ಈ ಕುರಿತು ಹೇಳುವುದು ಹೀಗೆ.



** ಉತ್ತರ ಕರ್ನಾಟಕದ ಹೀರೋ ಎಂದು ...ತಿಸಿಕೊಳ್ಳುತ್ತೀರಾ?*

...ನಾನು ಹೀರೋ ಅಂತ ಹೇಳುತ್ತಿಲ್ಲ, ಅಲ್ಲಿನ ಕಲಾವಿದ. ...ವಿದರಿಗೆ ಯಾವುದೇ ಜಾತಿ, ವ್ಯಾಪ್ತಿ ಎನ್ನುವುದು ... ಆದರೆ, ನಮ್ಮ ಭಾಗದ ಕಲಾವಿದರಿಗೆ ಸಿಗಬೇಕಾದ ... ಸಿಗುತ್ತಿಲ್ಲ. ಹೀಗಾಗಿ ನಾವು ಆ ಭಾಗದ ನಾಯಕರು ... ಹೇಳಿಕೊಳ್ಳುವ ಅನಿವಾರ್ಯತೆ ಎದುರಾಗಿದೆ. ...ವಿದರು ಯಾವುದೇ ಭಾಗದವರಿದ್ದರೂ ಅವರಿಗೆ ...ನ್ನತೆ ನೀಡಬೇಕು.

** ಹಾಗಾದರೆ, ನಿಮ್ಮ ಚಿತ್ರಗಳನ್ನು ಉತ್ತರ ...ಟಕದಲ್ಲಿ ಮಾತ್ರ ರಿಲೀಸ್ ಮಾಡುತ್ತೀರಾ? -*

ಆಗಲೇ ನಾನು ಹೇಳಿದೆ, ಎಲ್ಲರಿಗೂ ನ್ಯಾಯ ಸಿಗಬೇಕು ಅಂತ. ಸಿನಿಮಾ ರಂಗಕ್ಕೆ ವಿಭಾಗದ ಗೋಡವೇ ಬೇಕಾಗಿಲ್ಲ. ಎಲ್ಲ ಕಲಾವಿದರ, ನಿರ್ದೇಶಕರ ಚಿತ್ರಗಳು ಎಲ್ಲಾ ಕಡೆಯೂ ಬಿಡುಗಡೆ ಆಗಬೇಕು. ಬ್ಯುಸಿನೆಸ್ ವಿಷಯವನ್ನು ಬೆರೆಸುವುದಕ್ಕಿಂತ, ಸಿಗಬೇಕಾದ ಗೌರವ ಸಿಗಲಿ.

** ನೀವು ಸಿನಿಮಾರಂಗಕ್ಕೆ ಬಂದಿದ್ದು ಹೇಗೆ?*

ಸಿನಿಮಾಗಳ ಬಗ್ಗೆ ನನಗೆ ಅಪಾರ ಒಲವಿದೆ. ಆದರೆ ಸಿನಿಮಾರಂಗದಲ್ಲಿ ಗುರುತಿಸಿಕೊಳ್ಳುತ್ತೇನೆ ಅನ್ನುವ ಕನಸೂ ಕೂಡ ನನಗೆ ಇರಲಿಲ್ಲ. ನನ್ನೂರಿನಲ್ಲಿ ಕೆಲಸ ಮಾಡಿಕೊಂಡಿದ್ದೆ. ನನ್ನ ಸ್ನೇಹಿತರಿಗೆ ಸಿನಿಮಾ ನಟರ ಕ್ರೇಜ್. ಅವರನ್ನು ನೋಡಲು ಬೆಂಗಳೂರಿಗೆ ಬಂದಾಗ ಅವಮಾನ ಮಾಡಿಸಿಕೊಂಡರು. ಅದನ್ನು ನನ್ನ ಮುಂದೆ ಹೇಳಿದರು. ಅಲ್ಲದೇ ನೀನೂ ಸುಂದರವಾಗಿದ್ದೀಯಾ, ಟ್ಯಾಲೆಂಟ್ ಇದೆ, ಯಾಕೆ ನಾಯಕ ಆಗಬಾರದು ಅಂತ ಹೇಳಿದರು. ಅವರ ಒತ್ತಾಸೆಗೆ ನಾನು ನಾಯಕ ಆಗಬೇಕಾಯಿತು.

** ಒತ್ತಾಸೆ ಇದ್ದರೆ ನಾಯಕ ಆಗಬಹುದಾ? ಅದಕ್ಕೆ ಅರ್ಹತೆ ಬೇಡವಾ?*


ಇಂತಹ ಪ್ರಶ್ನೆ ಮೂಡದಿರಲೆಂದೇ ಸಿನಿಮಾಗೆ ಬೇಕಾದ ತರಬೇತಿಯನ್ನು ಪಡೆದಿದ್ದೇನೆ. ಅದು ನುರಿತ ತರಬೇತುದಾರರಿಂದ. ಮುಂದೆಯೂ ಸಿನಿಮಾ ಮಾಡುವ ಆಸೆ ಇದೆ. ಅಲ್ಲದೇ ಮತ್ತೊಂದು ಚಿತ್ರದ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೂ ಸಹಾಯ ಆಗಲಿ ಅನ್ನುವ ಕಾರಣಕ್ಕೆ ಬಾಡಿಬಿಲ್ಡ್ ಮಾಡುತ್ತಿದ್ದೇನೆ. ಕತೆಯನ್ನು ಅರ್ಥಮಾಡಿಕೊಳ್ಳುವ, ಪಾತ್ರವನ್ನು ಪೋಷಿಸುವ ಶಕ್ತಿ ನನ್ನಲ್ಲಿದೆ.

** ನಿಮ್ಮ ಚೊಚ್ಚಲು ಸಿನಿಮಾದಲ್ಲಿ ಎಂತಹ ಪಾತ್ರ ನಿರ್ವಹಿಸುತ್ತಿದ್ದೀರಿ?*

ಬಿಜಿನೆಸ್ ಮಾಡುವುದಕ್ಕಾಗಿ ನಾನು ಸಿನಿಮಾರಂಗಕ್ಕೆ ಬಂದಿಲ್ಲ. ನನ್ನ ಚಿತ್ರಗಳಿಂದ ಸಮಾಜಕ್ಕೆ ಏನಾದರೂ ಉಪಯೋಗ ಆಗಬೇಕು. ಅಲ್ಲದೇ ಈ ಹೊತ್ತಿನ ಯುವಕರಿಗೆ ಮಾದರಿ ಆಗಬೇಕು. ಹೀಗಾಗಿ ಅವರಿಗೆ ಇಷ್ಟವಾಗುವ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಅದರಲ್ಲೂ ಗ್ರಾಮೀಣ ಯುವಕರಿಗೆ ಉತ್ತೇಜಿಸುವ ಸ್ಟೋರಿ ಇಲ್ಲಿದೆ. ಅವರ ಪ್ರತಿನಿಧಿಯಾಗಿ ನಾನು ಪಾತ್ರ ಮಾಡಿದ್ದೇನೆ.

** ಸಿನಿಮಾದಿಂದ ಸಮಾಜ ಬದಲಾಗುತ್ತೆ ಅಂತ ನಿಮಗೆ ಅನಿಸಿದೆಯಾ?*

ಯಾವಾಗಲೂ ನಾನು ಪಾಸಿಟಿವ್ ಯೋಚನೆ ಮಾಡುತ್ತೇನೆ. ಈ ವಿಷಯದಲ್ಲೂ ನನ್ನದು ಅಂಥದ್ದೇ ನಿಲುವು. ನಾವು ಸಿನಿಮಾ ನೋಡಿಯೇ



ಬದಲಾದವರು. ಡಾ.ರಾಜ್‌ಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಈ ಸಮಾಜದ ಮೇಲೆ ಬೀರಿದ ಪರಿಣಾಮ ದೊಡ್ಡದು. ಹೀಗಾಗಿ ನನ್ನ ಚಿತ್ರಕ್ಕೆ 'ಮನಮೆಚ್ಚಿದ ಬಂಗಾರು' ಅಂತ ಟೈಟಲ್ ಇಟ್ಟಿದ್ದು.

** ನಿರ್ದೇಶಕರ ಜತೆಗಿನ ಕೆಲಸ ಹೇಗಿತ್ತು?*

ಈ ಚಿತ್ರಕ್ಕೆ ಓಂ ಸಾಯಿಪ್ರಕಾಶ್ ನಿರ್ದೇಶಕರು. 98 ಚಿತ್ರಗಳನ್ನು ಈವರೆಗೂ ಮಾಡಿದ್ದಾರೆ. ಬಹುತೇಕವಾಗಿ ಅವರು ಕೌಟುಂಬಿಕ ಹಿನ್ನೆಲೆಯ ಕತೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಸಿನಿಮಾದಲ್ಲೂ ಅದೇ ಇದೆ. ಸಮರ್ಥವಾಗಿ ಕತೆಯನ್ನು ತೆರೆಗೆ ತಂದಿದ್ದಾರೆ. ಪ್ರೇಕ್ಷಕರು ಚಿತ್ರವನ್ನು ಒಪ್ಪುತ್ತಾರೆ ಅನ್ನುವ ನಂಬಿಕೆ ನನಗಿದೆ.

** ನಿರ್ಮಾಣದ ಜವಾಬ್ದಾರಿಯನ್ನು ನೀವೇ ಹೊತ್ತಿದ್ದೀರಿ. ಕಷ್ಟ ಅಂತ ಅನಿಸಲಿಲ್ಲವಾ?*

ನಾವು ಅಂದುಕೊಂಡಿದ್ದು ಸಾಧಿಸಬೇಕಾದರೆ ಕಷ್ಟದ ಹಾದಿಯಲ್ಲಿ ನಡೆಯಲೇಬೇಕು. ಅನಿವಾರ್ಯವಾಗಿಯೇ ನಾನು ಈ ಜವಾಬ್ದಾರಿ ಹೊತ್ತಿದ್ದೇನೆ. ಅದರಲ್ಲಿ ಗೆಲುವು ಸಾಧಿಸುವ ನಂಬಿಕೆ ನನ್ನದು. ■

...ದಿರುವಂತೆ ಚಿತ್ರಿಸಲಾಗಿದೆ. ಹರೇಕೃಷ್ಣ ಪಂಥದವರು ... ಇತ್ತೀಚೆಗೆ ಹೊರತಂದಿರುವ ಪುಸ್ತಕದಲ್ಲೂ ಇಂತಹದ್ದೇ ...ಇರುವುದು ಆಶ್ಚರ್ಯ. ಹದಿಮೂರನೇ ಶತಮಾನದವರೆಗೆ ...ತೀಯ ಶಿಲ್ಪಕಾರರು ಪೃಥ್ವಿ ಕಾವಲಿಯಂತೆ ಚಪ್ಪಟೆ ...ಗಿದೆ ಎಂದೇ ತಿಳಿದಿದ್ದರು ಎಂಬುದಕ್ಕೆ ಪುರಾತನ ...ಮೂ ದೇವಸ್ಥಾನಗಳಲ್ಲಿಯ ಈ ವರಾಹ-ಭೂದೇವಿ ...ಗಳೇ ಸಾಕ್ಷಿ. ಈಗಿನ ಆಧುನಿಕ ಚಿತ್ರಕಾರರಿಗೆ ಪೃಥ್ವಿ ...ವಾಗಿದೆ ಎಂದು ಗೊತ್ತಿದ್ದರೂ ಪೃಥ್ವಿಯ ಮೇಲೆಯೇ ...ಮುದ್ರ ಇರುವಾಗ ಪೃಥ್ವಿ-ಗೋಲವನ್ನು ಸಮುದ್ರದೊಳಗೆ ...ಮುಳುಗಿಸಲು ಹೇಗೆ ಸಾಧ್ಯ ಎಂದು ವಿವೇಚನೆ ಮಾಡದಷ್ಟೂ ...ಮೆಂಬ ಮಂಕು ಕವಿದಿದೆ.

...ನರಕಾಸುರನು ಅಪಹರಿಸಿದ್ದ ಹದಿನಾರು ಸಾವಿರ ...ಕುಮಾರಿಯರನ್ನು ಕೃಷ್ಣ ಮದುವೆಯಾಗಿ ಅವರೊಂದಿಗೆ ...ಸಾರ ಮಾಡಿದಾಗ ಈ ಪತ್ನಿಯರಿಗೆ ಹದಿನಾರು ಸಾವಿರ ...ಣ್ಣುಮಕ್ಕಳು ಹುಟ್ಟುತ್ತವೆ. ಕೃಷ್ಣನಂತಹ ದೇವರ ...ರ್ಯದಿಂದ ಈ ಸಾವಿರಾರು ಹೆಣ್ಣು ಮಕ್ಕಳು ಹುಟ್ಟಿದ್ದರೂ ...ರಕೆ ಮುಳುಗಿದಾಗ ಕೃಷ್ಣನ ಈ ಸಾವಿರಾರು ಹೆಣ್ಣು ...ಳನ್ನು ದುಷ್ಟ ದರೋಡೆಕೋರರು ಬಲಾತ್ಕಾರದಿಂದ ...ಕೊಂಡು ಹೋಗಿ ಅತ್ಯಾಚಾರ ಎಸಗುತ್ತಾರೆ. ನರಕಾಸುರ ... ಕೊಂದ ಸತ್ಯಭಾಮೆ ಸಹಿತ ಕೃಷ್ಣನ ಪ್ರಮುಖ ...ಟು ರಾಣಿಯರಿಗೆ ಹುಟ್ಟಿದ ಎಂಟು ಹೆಣ್ಣು ಮಕ್ಕಳಿಗೂ ... ದುರ್ಗತಿಯಾಗುತ್ತದೆ. ಸ್ವತಃ ಲಕ್ಷ್ಮಿ ದೇವಿಯ ...ತಾರವಾದ ರುಕ್ಮಿಣಿಯ ಮಗಳೂ ದರೋಡೆಕೋರರ ...ಚಾರಕ್ಕೆ ತುತ್ತಾಗಿ ದುಷ್ಟರ ದಾಸಿಯಾಗುತ್ತಾಳೆ.. ಈ ... ಪವಿತ್ರ ದೇವರ ಜೀನ್ಸ್‌ನಿಂದ ಹುಟ್ಟಿದ ಪವಿತ್ರ ... ಮಕ್ಕಳೂ ಕೊನೆಗೆ ದುಷ್ಟ ಗಂಡಸರ ಭೋಗದ ...ಗಿ ದುಷ್ಟರ ಮಕ್ಕಳ ತಾಯಿಯಾಗಿ ದುಷ್ಟ ಜನಾಂಗದ ...ಸಂಖ್ಯೆ ಹರಡುವಿಕೆಗೆ ಕಾರಣವಾಗುತ್ತಾರೆ.

...ಹಾಗಾದರೆ ಕರ್ಮ ಸಿದ್ಧಾಂತದ ಪ್ರತಿಪಾದಕನಾದ ಕೃಷ್ಣನು ... ಪವಿತ್ರ ವೀರ್ಯದಿಂದ ಸಾವಿರಾರು ಸಂಖ್ಯೆಯಲ್ಲಿ ... ಮಕ್ಕಳನ್ನು ಹುಟ್ಟಿಸಿದ್ದು ಯಾವ ಕರ್ಮ ತೊಳೆಯಲು? ... ಗೋವರ್ಧನಗಿರಿ ಎತ್ತಿ ಗೋವುಗಳನ್ನು ರಕ್ಷಿಸಿದನಂತೆ, ... ತನ್ನ ಸ್ವಂತ ರಕ್ತದಿಂದ ಹುಟ್ಟಿದ ಸಾವಿರಾರು ಹೆಣ್ಣು ... ಅತ್ಯಾಚಾರಿಗಳಿಂದ ರಕ್ಷಿಸಲು ಸಾಧ್ಯವಾಗದಿರುವುದು ...ರ್ಗಾಸವಲ್ಲವೇ? ಅದಕ್ಕೇ ಹೇಳುವುದು ವೈದಿಕ ...ಗಳೆಲ್ಲಾ ತರ್ಕವಿಹೀನ ಅಡಗೋಲಜ್ಜಿ ಕತೆಗಳೆಂದು!

- ಈ.ರವಿಕಿರಣ, ಮೈಸೂರು

...ಪರಮೇಶ್ವರ್ ಚಂಭಟ್ಟನ ಸಂಗ ಬಿಡಲಿ

ಗೃಹಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸದೇ ದೇವರ ಹೆಸರಲ್ಲಿ ಅವರು ಪ್ರಮಾಣವಚನ ಸ್ವೀಕರಿಸಿದ್ದು ಸರಿಯೇ ಎಂದು ಪತ್ರಿಕೆಯಲ್ಲಿ ಟಿ.ಶಶಿಧರ್ ಎಂಬ ಓದುಗರು ಪ್ರಶ್ನಿಸಿದ್ದು ಸರಿಯಾಗಿದೆ. ಮೇಲಾಗಿ ಗೃಹ ಮಂತ್ರಿಯಾದ ಮಾರನೆಯ ದಿನವೇ ಈ ಪರಮೇಶ್ವರರು ಢೋಂಗಿ ಜ್ಯೋತಿಷಿ ಚಂಭಟ್ಟನಲ್ಲಿ ಹೋಗಿ ಅವನ ಕಾಲು ಮುಟ್ಟಿ ನಮಸ್ಕರಿಸಿದ್ದು ಅಕ್ಷಮ್ಯ ಅಪರಾಧ. ತಕ್ಷಣ ಈ ಫೋಟೋವನ್ನು ಚಂಭಟ್ಟ ತನ್ನ ಕೆಲವು ಮಿತ್ರರ ಮೂಲಕ ವಿಜಯ ಕರ್ನಾಟಕ ದೈನಿಕದಲ್ಲಿ ಪ್ರಕಟಿಸಿಯೇ ಬಿಟ್ಟ. ಒಂದೆಡೆ ಸಿದ್ದರಾಮಯ್ಯ ಸರಕಾರ ಡಾ.ಕಲಬುರ್ಗಿಯವರ ಕೊನೆಯ ಆಸೆಯಂತೆ ಮೌಢ್ಯ ನಿಷೇಧ ಕಾನೂನು ತರಲು ಯೋಚಿಸುತ್ತಿರುವಾಗ ಇಲ್ಲಿ ಸ್ವತಃ ಅವರ ಗೃಹಮಂತ್ರಿ ಮೌಢ್ಯದ ಕೆಸರಲ್ಲಿ ಉರುಳಾಡುತ್ತಾ ಒಬ್ಬ ಢೋಂಗಿ ಜ್ಯೋತಿಷಿಯ ಕಾಲಿಗೆರಗುವುದು ವಿರೋಧಾಭಾಸವಾಗಿ ತೋರುತ್ತದೆ.

ಈ ಚಂಭಟ್ಟ ಎಂತಹ ಢೋಂಗಿಯೆಂದರೆ ಎಲ್ಲಿಯೇ ದೊಡ್ಡ ದುರ್ಘಟನೆ ಅಥವಾ ಪ್ರಕೃತಿ ವಿಕೋಪ ನಡೆಯಲಿ ಅಲ್ಲಿಗೆ ತನ್ನನ್ನು ಅಲ್ಲಿಯ ಸರಕಾರ ವಾಸ್ತು ಸರಿಪಡಿಸಲು ಕರೆದಿದೆ ಎಂದು ಹೇಳಿ ಅದಕ್ಕೆ ತಕ್ಕಂತೆ ಯಾವುದಾದರೂ ವಿದೇಶಿಯನೊಟ್ಟಿಗೆ ಫೋಟೋ ತೆಗೆಸಿಕೊಂಡು, ಅವನು ಅಲ್ಲಿಯ ಸರಕಾರದ ಪ್ರತಿನಿಧಿಯೆಂದು ಬೊಗಳೆ ಬಿಟ್ಟು ಪತ್ರಿಕೆಗಳಲ್ಲಿ ಸುದ್ದಿ ಮತ್ತು ಫೋಟೋ ಹಾಕಿಸಿಕೊಳ್ಳುತ್ತಾನೆ. ಜಪಾನಿನ ಸುನಾಮಿ, ಅಮೆರಿಕದ ಡಬ್ಲ್ಯೂಟಿಸಿ ಮೇಲೆ ಉಗ್ರರ ದಾಳಿ, ನೇಪಾಳದ ಭೂಕಂಪ ಈ ಎಲ್ಲಾ ಘಟನೆ ನಡೆದಾಗಲೂ ಅಲ್ಲಿಯ ಸರಕಾರ ತನ್ನನ್ನು ವಾಸ್ತು ಸರಿಪಡಿಸಲು ಕರೆದಿದೆ ಎಂದು ಬೊಗಳೆ ಬಿಟ್ಟು ಪತ್ರಿಕೆಗಳಲ್ಲಿ ಸುದ್ದಿ ಹಾಕಿಸಿಕೊಂಡಿದ್ದ ಈ ಢೋಂಗಿ ಚಂಭಟ್ಟ.

ಕೆಲದಿನಗಳ ಹಿಂದೆ ಪಾಕಿಸ್ತಾನದಲ್ಲಿ ಉಗ್ರರು ಕೆಡವಿದ ಹಿಂದೂ ದೇವಸ್ಥಾನಗಳ ಮರು ನಿರ್ಮಾಣದ ವಾಸ್ತು ಸಲಹೆಗಾಗಿ ಅಲ್ಲಿಯ ಹಿಂದೂ ಸಂಘಟನೆಗಳು ತನ್ನನ್ನು ಕರೆಸಿದ್ದಾರೆ ಮತ್ತು ಅಲ್ಲಿಯ ಮುಸ್ಲಿಂ ಉಗ್ರರಿಗೆ ಈ ವಿಷಯ ಗೊತ್ತಾಗಿದ್ದು ಅವರಿಂದ ತನ್ನ ಜೀವಕ್ಕೆ ಅಪಾಯವಿರುವುದರಿಂದ ಮೋದಿ ಸರಕಾರ ತನಗೆ ಚೆಡ್-ಪ್ಲಸ್ ಸೆಕ್ಯುರಿಟಿ ಕೊಟ್ಟಿದೆ ಎಂದು ಸುಳ್ಳು ಹೇಳಿ, ಕಮಾಂಡೋಗಳ ವೇಷದಲ್ಲಿ ನಾಲ್ಕು ನೇಪಾಳಿಗಳನ್ನು ಸುತ್ತ ಇಟ್ಟುಕೊಂಡು ಫೋಟೋ ತೆಗೆಸಿ ಆ ಫೋಟೋ ಸಹಿತ ಮುಖಪುಟ ಸುದ್ದಿಯನ್ನು ಮಂಗಳೂರಿನ ಜಯಕಿರಣ ಎಂಬ ಸಂಜೆ ಪತ್ರಿಕೆಯಲ್ಲಿ ಹಾಕಿಸಿಕೊಂಡಿದ್ದ. ಅದನ್ನು ನೋಡಿ ಕರಾವಳಿಯ ಜನರು ಬಿದ್ದು ಬಿದ್ದು ನಕ್ಕಿದ್ದರು. ಪುಣ್ಯಕ್ಕೆ ಆ ಸಂಜೆ ಪತ್ರಿಕೆಯ ಇ-ಪೇಪರ್ ಆವೃತ್ತಿ ನಾಲ್ಕು ತಿಂಗಳ ಹಿಂದೆ ಬಂದ್ ಆಗಿದೆ. ಇಲ್ಲದಿದ್ದರೆ ಭಾರತೀಯ ಜ್ಯೋತಿಷಿಗಳ ಶತಮೂರ್ಖ ಕಟ್ಟು ಕಥೆಗಳ ಸುದ್ದಿಯನ್ನು ಇಂಟರ್ನೆಟ್-ಆವೃತ್ತಿಯಲ್ಲಿ ಓದಿದ ವಿದೇಶದಲ್ಲಿರುವ ಕನ್ನಡಿಗರೆಲ್ಲಾ ಅವಮಾನದಿಂದ ತಲೆತಗ್ಗಿಸುತ್ತಿದ್ದರು.

ಇಂತಹ ಮೂರ್ಖ ಜ್ಯೋತಿಷಿಯ ಕಾಲಿಗೆ ನಮ್ಮ ಸನ್ಮಾನ್ಯ ಗೃಹ ಮಂತ್ರಿ ಪರಮೇಶ್ವರರು ಉರುಳುವುದು ಸಮಸ್ತ ಕನ್ನಡಿಗರಿಗೇ ಅವಮಾನ, ಜತೆಗೆ ವಿಚಾರವಾದಿಯಾಗಿದ್ದ ಡಾ.ಅಂಬೇಡ್ಕರ್ ಅವರಿಗೂ ಘೋರ ಅವಮಾನ.

- ಹರೀಶ್ ಎಂ.ಆರ್, ಉಡುಪಿ

ಪೇಜಾವರರಿಗೆ ಯಾಕೆ ಇದರ ಉಸಾಬರಿ?

ಬೇಜವಾಬ್ದಾರಿ ಬಿಜೆಪಿ ರಾಜಕಾರಣಿಗಳು ಪೆದ್ದುಪೆದ್ದಾಗಿ ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದರೆ ಅದು ಅವರ ಸುದ್ದಿಯಲ್ಲಿರುವ ತಂತ್ರ ಎಂದು ಹೇಳಿ ಅಥವಾ ತುಂಬಾ ವಯಸ್ಸಾಗಿದ್ದರೆ ಅವರಿಗೆ ಅರಳು ಮರಳು ಎಂದು ಹೇಳಿ ಅವರನ್ನು ನಾವು ನಿರ್ಲಕ್ಷಿಸಿ ಬಿಡಬಹುದು. ಆದರೆ ಉಡುಪಿ ಮಠದ 83 ವರ್ಷದ ಹಿರಿ ವಯಸ್ಸಿನ ಮಠಾಧೀಶರೇ ತನಗೆ ಸಂಬಂಧವಿಲ್ಲದ ವಿಷಯದಲ್ಲಿ ಬಾಯಿ ಹಾಕಿ ಪ್ರಚೋದನಾಕಾರಿ ಹೇಳಿಕೆ ನೀಡುವುದು ನಿಜಕ್ಕೂ ಆತಂಕಕಾರಿ ವಿಷಯ. ಈಗೀಗ ಸಮಾಜದಲ್ಲಿ ಅಸಹಿಷ್ಣುತೆ ಎಷ್ಟೊಂದು ಆಳವಾಗಿ ಹರಡಿದೆ ಎಂಬುದಕ್ಕೆ ಈ ಸ್ವಾಮೀಜಿಯೇ ಸಾಕ್ಷಿ.

ಮೊನ್ನೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬಿಜೆಪಿಯ ಸವಾಲು ಸ್ವೀಕರಿಸುತ್ತಾ ಬೇಕೆನಿಸಿದರೆ ತಾನು ಗೋಮಾಂಸ ಸೇವಿಸಲು ಸಿದ್ಧವಿರುವುದಾಗಿ ಹೇಳಿಕೆ ಕೊಟ್ಟರು ಅಷ್ಟೇ. ಆದರೆ ಅವರು ಹಿಂದೂ ದೇವಸ್ಥಾನ ಅಥವಾ ವೈದಿಕ ಮಠದ ಮುಂದೆ ಗೋಮಾಂಸ ಸೇವಿಸುವುದಾಗಿ ಹೇಳಿರಲಿಲ್ಲ. ಆದರೂ ಪೇಜಾವರ ಸ್ವಾಮೀಜಿಗಳು ಪಕ್ಕಾ ವಿರೋಧ ಪಕ್ಷದ ರಾಜಕಾರಣಿಯಂತೆ ಸವಾಲು ಹಾಕುತ್ತಾ "ಸಿದ್ದುಗೆ ಧೈರ್ಯವಿದ್ದರೆ ಮಸೀದಿಯ ಮುಂದೆ ಹಂದಿ ಮಾಂಸ ಸೇವಿಸಿ ತೋರಿಸಲಿ" ಎಂದು ಪ್ರಚೋದನಾಕಾರಿ ಚಾಲೆಂಜ್ ಹಾಕಿರುವುದು ಅವರು ಕಾವಿ ಉಟ್ಟು 75 ವರ್ಷವಾಗಿದ್ದರೂ ಇನ್ನೂ ಕಾವಿಯ ಪಾವಿತ್ರ್ಯತೆ ಅರಿತೇ ಇಲ್ಲ ಎಂಬುದಕ್ಕೆ ಸಾಕ್ಷಿ. ಅನಗತ್ಯವಾಗಿ ಎಲ್ಲಾ ವಿಷಯಗಳಲ್ಲಿ ಈ ಸ್ವಾಮೀಜಿ ಮುಸ್ಲಿಮರನ್ನು, ಮಸೀದಿಯನ್ನು, ಕ್ರೈಸ್ತ ಮಿಷನರಿಗಳನ್ನು ಅಥವಾ ನೆರೆಯ ಪಾಕಿಸ್ತಾನವನ್ನು ಎಳೆದು ತರುವುದಾದರೂ ಯಾವ ಉದ್ದೇಶಕ್ಕೆ?

ತಮ್ಮ ಧರ್ಮದೊಳಗಿನ ನ್ಯೂನತೆ - ದೌರ್ಬಲ್ಯಗಳನ್ನು ಮೊದಲು ಸರಿಪಡಿಸಲು ಒಂದಿಷ್ಟೂ ಪ್ರಯತ್ನಿಸದೇ ಇತರ ಧರ್ಮ ಅಥವಾ ಪರದೇಶ ಪಾಕಿಸ್ತಾನವನ್ನು ನಡುವೆ ಎಳೆದು ತಂದು ಹೊಸದಾಗಿ ದೀಕ್ಷೆ ಪಡೆದ ಆರ್‌ಎಸ್‌ಎಸ್‌ನ ಚೆಡ್ಡಿ ಪೋರನಂತೆ ಪ್ರಚೋದನಾಕಾರಿ ಹೇಳಿಕೆ ಕೊಡುವುದು ಸರಿಯೇ? ಇಂತಹ ಹಿರಿಯ ಮಠಾಧೀಶರೊಬ್ಬರು ಯಕಶ್ಚಿತ್ ರಾಜಕೀಯ ಪಕ್ಷದ ಅರೆ-ಸಾಕ್ಷರ ಕಾರ್ಯಕರ್ತನಂತೆ ದ್ವೇಷದ ಭಾಷೆ ಮಾತನಾಡುತ್ತಿರುವುದು ನೋಡಿದರೆ ಪೇಜಾವರರೂ ಬಾಬಾ ರಾಮದೇವ್‌ನಂತೆ ಒಬ್ಬ ಕಾವಿ ವೇಷಧಾರಿ ಸಮಯಸಾಧಕ ವ್ಯಾಪಾರಿ ಎಂದೇ ಪರಿಗಣಿಸಬೇಕಾಗುತ್ತದೆ. ಭಾರತದೆಲ್ಲೆಡೆ 30 ರಿಂದ 40% ರಷ್ಟು ಹಿಂದೂಗಳು (ಕೇರಳದಲ್ಲಿ 70% ಹಿಂದೂಗಳು) ಗೋಮಾಂಸ ಸೇವಿಸುತ್ತಾರೆ ಎಂದು ಗೊತ್ತಿದ್ದೂ ಗೊತ್ತಿಲ್ಲದಂತೆ ವರ್ತಿಸುವ ಈ ಸ್ವಾಮೀಜಿ ಬಹುಸಂಖ್ಯಾತರ ಪರವಾಗಿ ಮಾತನಾಡುವ ಅಧಿಕಾರ ತನಗೆ ತಾನೇ ಆರೋಪಿಸಿಕೊಳ್ಳುವ ಮೊದಲು ಇವರ ಬೆನ್ನಿಗೆ ಸಮಸ್ತ ಹಿಂದೂ ಸಮಾಜವಿಲ್ಲ; ಕೇವಲ 10% ವೈದಿಕ ಹಿಂದೂಗಳು ಮಾತ್ರ ಇರುವುದು ಎಂಬ ಸತ್ಯ ಅರಿತರೆ ಒಳಿತು.

ಪೇಜಾವರರ ಗೋಮಾಂಸ-ಹಂದಿಮಾಂಸ ರಾಜಕೀಯದ ಹಿಂದೆ ಮುಸ್ಲಿಂ ಮತ್ತು ಕ್ರೈಸ್ತ ಧನಿಕರಿಂದ ಸ್ವಾಮಿಯ ಜನವರಿ ಪರ್ಯಾಯ ಮಹೋತ್ಸವಕ್ಕೆ ಭಾರಿ ವಂತಿಗೆ ಪೀಕುವ ತಂತ್ರ ಇದೆ ಎಂಬುದು ಪೇಜಾವರರನ್ನು ಹತ್ತಿರದಿಂದ ಬಲ್ಲವರ ಅಂಬೋಣ. ಅಷ್ಟೇ ಅಲ್ಲ, ಸಿದ್ದರಾಮಯ್ಯನವರಿಗೆ ಸವಾಲು ಹಾಕುವ ಹಿಂದೆಯೂ ಸಿದ್ದು ಸರಕಾರದಿಂದ ತಮ್ಮ ಪರ್ಯಾಯಕ್ಕೆ ದೊಡ್ಡ ಮೊತ್ತದ ಅನುದಾನ ಕೀಳುವ ತಂತ್ರವೂ ಇದೆ ಎಂಬುದು ಕೆಲವರ ಅಭಿಪ್ರಾಯ. ಇತ್ತೀಚೆಗೆ ಈ ಸ್ವಾಮಿ ಬೆಳಗಾವಿಗೆ ಹೋಗಿದ್ದಾಗ ನಾನೂ ಅಲ್ಲಿದ್ದೆ. ಬೆಳಗಾವಿಯ ಗೋಮಾಂಸ ಸೇವಿಸುವ ಜಾತಿಯ ಮರಾಠಿ ವ್ಯಾಪಾರಿಗಳಿಂದ ಹಾಗೂ ತುಳುನಾಡು ಮೂಲದ ಮಾಂಸಾಹಾರಿ ಬಾರ್ ಮಾಲಕರಿಂದ ತನ್ನ ಪರ್ಯಾಯಕ್ಕಾಗಿ ಕಾಡಿ-ಬೇಡಿ ಒತ್ತಾಯಿಸಿ ವಂತಿಗೆ ವಸೂಲು ಮಾಡುವಾಗ ಪೇಜಾವರರಿಗೆ ತಾವು ಸಸ್ಯಾಹಾರಿ ವೈದಿಕ ಸ್ವಾಮೀಜಿ ಎಂಬ ವಿಷಯ ಮರೆತು ಹೋಗಿದ್ದು ವಿಪರ್ಯಾಸ!

ಕೃಷ್ಣ-ವಿಷ್ಣು ಈ ಎರಡು ವೈಷ್ಣವ ದೇವರ ಹೊರತಾಗಿ ಶಿವ ಸುಬ್ರಹ್ಮಣ್ಯ ದುರ್ಗೆ ಮಾರಿ ಗಣಪತಿ ಇಂತಹ ಬೇರೆ ಯಾವುದೇ ವೈದಿಕ ದೇವರಿಗೆ ಎಂದೂ ಕೈ ಮುಗಿಯದ ಮತ್ತು ತೀರ್ಥ ಪ್ರಸಾದ ಸ್ವೀಕರಿಸದ ಪೇಜಾವರರಿಗೆ ಸಮಸ್ತ ಹಿಂದೂ ಸಮಾಜದ ಪರವಾಗಿ ಮಾತನಾಡುವ ಅಧಿಕಾರ ಇಲ್ಲವೇ ಇಲ್ಲ. ಬೇಕಾದರೆ ಮಾಧ್ವ ಬ್ರಾಹ್ಮಣರ ಪರವಾಗಿ ಅವರು ಏನು ಬೇಕಾದರೂ ಮಾತನಾಡಲಿ. ಬಹುಸಂಖ್ಯಾತ ಹಿಂದೂಗಳ ಅಭ್ಯಂತರವಿಲ್ಲ.

- [illegible]

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 25-11-2015 RNI No. KARKA

ಅಪ್ಪನಾಗಿ ಸುದೀಪ್



ರಾಮ್‌ಗೋಪಾಲ್ ವರ್ಮಾ ಕನ್ನಡದಲ್ಲಿ ಮತ್ತೊಂದು ಸಿನಿಮಾ ಮಾಡುತ್ತಿದ್ದಾರೆ ಎಂಬ ಸುದ್ದಿ ಹರಡುತ್ತಲೇ ಇತ್ತು. ಈ ಚಿತ್ರಕ್ಕೆ ಸುದೀಪ್ ನಾಯಕ ಎನ್ನಲಾಗುತ್ತಿತ್ತು. ಆದರೆ ಈವರೆಗೂ ಸುದೀಪ್ ಇದನ್ನು ಖಚಿತಪಡಿಸಿರಲಿಲ್ಲ. ಇದೇ ಮೊದಲ ಬಾರಿಗೆ ಅವರು ಚಿತ್ರದ ಕುರಿತಾಗಿ ಮಾತನಾಡಿದ್ದಾರೆ. ತಾವು ಈ ಸಿನಿಮಾದಲ್ಲಿ ನಟಿಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಚಿತ್ರಕ್ಕೆ 'ಅಪ್ಪ' ಎಂದು ಹೆಸರಿಟ್ಟಿದ್ದರೂ ಅದು ಬದಲಾಗುವ ಸಾಧ್ಯತೆ ಇದೆಯಂತೆ.

ರಾಮ್ ಗೋಪಾಲ್ ವರ್ಮಾ ಜತೆ ಸುದೀಪ್ ಈಗಾಗಲೇ ಕೆಲಸ ಮಾಡಿದ್ದಾರೆ. ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ಹೀಗಾಗಿ ಸಿನಿಮಾದ ಬಗ್ಗೆ ಕುತೂಹಲ ಹೆಚ್ಚಾಗಿದೆ. ಅಲ್ಲದೇ ಈ ಸಿನಿಮಾದ ಕತೆಯು ಮುತ್ತಪ್ಪ ರೈ ಅವರ ಜೀವನಾಧರಿಸಿದ್ದು ಎಂಬ ಕಾರಣಕ್ಕೂ ಸಖತ್ ಸುದ್ದಿ ಮಾಡಿದೆ.

ಮುತ್ತಪ್ಪ ರೈಯಾಗಿ ಈ ಚಿತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ. ಆಗಲೇ ಎರಡು ಬಾರಿ ಮುತ್ತಪ್ಪ ರೈಯನ್ನು ಸುದೀಪ್ ಭೇಟಿ ಮಾಡಿಬಂದಿದ್ದಾರೆ. ಈ ವಿಷಯವನ್ನೂ ಸ್ವತಃ ಸುದೀಪ್ ಬಹಿರಂಗಗೊಳಿಸಿದ್ದಾರೆ.

ಅಣ್ಣ-ತಮ್ಮ ಪ್ರಾಜೆಕ್ಟ್ ಸದ್ಯಕ್ಕಿಲ್ಲ

ಶಿವರಾಜ್‌ಕುಮಾರ್ ಮತ್ತು ಪುನೀತ್ ಒಂದೇ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಸುದ್ದಿ ಐದು ವರ್ಷದಿಂದ ಕೇಳುತ್ತಲೇ ಇದೆ. ಅದರಲ್ಲೂ ಮೂರ್‍ನಾಲ್ಕು ತಿಂಗಳ ಹಿಂದೆ ಈ ಸುದ್ದಿಗೆ ಮತ್ತಷ್ಟು ರೆಕ್ಕೆಪುಕ್ಕ ಬಂದಿತ್ತು. ಮಾಧ್ಯಮಗಳ ಜತೆ ಮಾತನಾಡಿದ ಸಾಹಸ ನಿರ್ದೇಶಕ ರವಿವರ್ಮಾ, ತಾವೇ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿರುವುದಾಗಿ ಮಾತನಾಡಿದ್ದರು. ಜಯಣ್ಣ ಮತ್ತು ಭೋಗೇಂದ್ರ ಅಥವಾ ಕನಕಪುರ ಶ್ರೀಕಾಂತ್ ಚಿತ್ರಕ್ಕೆ ಬಂಡವಾಳ ಹೂಡಲಿದ್ದಾರೆ ಎಂದೂ ಹೇಳಿದ್ದರು. ಈಗ ಇದೆಲ್ಲ ಠುಸ್ ಆಗಿದೆ. ಪ್ರಾಜೆಕ್ಟ್ ಡ್ರಾಪ್ ಆಗಿದೆ.

ಸಿನಿಮಾ ಡ್ರಾಪ್ ಆಗಲು ಕಾರಣ ಬಜೆಟ್ ಮತ್ತು ಕತೆ ಎಂದು ಹೇಳಲಾಗುತ್ತಿದೆ. ಎರಡೂ ಹೀರೋಗಳನ್ನು ಮೆಚ್ಚಿಸುವ ಕತೆ ಇಲ್ಲಿಲ್ಲ. ಹೀಗಾಗಿ ಅಭಿಮಾನಿಗಳು ಕೈಕೊಟ್ಟರೆ ಹಾಕಿದ ಬಂಡವಾಳವೂ ವಾಪಸ್ಸು ಬರುವುದಿಲ್ಲ. ಹಾಗಾಗಿ ನಿರ್ಮಾಪಕರು ಸಿನಿಮಾದಿಂದ ಹಿಂದೆ ಸರಿದಿದ್ದಾರೆ. ಆದರೂ ನಿರ್ದೇಶಕ ರವಿವರ್ಮ ತಮ್ಮ ಸಿನಿಮಾ ಸಾಹಸವನ್ನು ನಿಲ್ಲಿಸಿಲ್ಲ. ಬೇರೆ ನಿರ್ಮಾಪಕರ ಹುಡುಕಾಟದಲ್ಲಿದ್ದಾರೆ. ಹಣ ಹೂಡುವವರು ಸಿಕ್ಕರೆ ಮಾತ್ರ ಸಿನಿಮಾ ಮುಂದುವರೆಯಲಿದೆ.

ಮನೋಹರ್ ಬಿಜಿ

ಹೊಸ ಸಂಗೀತ ನಿರ್ದೇಶಕರ ಅಬ್ಬರದಲ್ಲಿ ಕಳೆದೇಹೋಗಿದ್ದ ವಿ.ಮನೋಹರ್ ಮತ್ತೆ ಸಿನಿಮಾ ರಂಗದಲ್ಲಿ ಬಿಜಿ ಆಗಿದ್ದಾರೆ. ಇವರ ಸಂಗೀತ ಮತ್ತು ಸಾಹಿತ್ಯವಿರುವ 'ಪ್ರೀತಿ ಕಿತಾಬು' ಚಿತ್ರದ ಹಾಡುಗಳು ಹಿಟ್ ಆಗಿರುವ ಹಿನ್ನೆಲೆಯಲ್ಲಿ ಇನ್ನಷ್ಟು ಪ್ರಾಜೆಕ್ಟ್ ಇವರನ್ನು ಹುಡುಕಿಕೊಂಡು ಬಂದಿವೆ.

ಸದಾ ಹೊಸ ಗಾಯಕರಿಗೆ ಮಣೆ ಹಾಕುತ್ತಿದ್ದ ಮನೋಹರ್ ಈ ಬಾರಿ 'ಪ್ರೀತಿ ಕಿತಾಬ್' ಸಿನಿಮಾದಲ್ಲಿ ಜಾವಿದ್ ಅಲಿ, ಟಿಪ್ಪು, ರಾಜೇಶ್ ಕೃಷ್ಣನ್, ಅನುರಾಧ ಭಟ್ ಮತ್ತು ಪುನಿತ್ ರಾಜ್‌ಕುಮಾರ್ ಅವರಿಂದ ಹಾಡಿಸಿದ್ದಾರೆ.

ಅಲ್ಲದೇ ಸಿನಿಮಾದಲ್ಲೂ ಹಲವು ವಿಶೇಷತೆಗಳು ಇವೆ. ಸಾಗರದ ಹುಡುಗ ನೆಹಾಲ್ ನಾಯಕನಾಗಿ ಪರಿಚಯವಾಗುತ್ತಿದ್ದು ಇವರಿಗೆ ಜೋಡಿಯಾಗಿ ದುನಿಯಾ ಖ್ಯಾತಿಯ ರಶ್ಮಿ ಅಭಿನಯಿಸಿದ್ದಾರೆ. ಪತ್ರಕರ್ತ ವಿಠಲ್ ಭಟ್ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ. ಹೀಗಾಗಿ ಮನೋಹರ್ ಅವರಿಗೆ ಲಕ್ ತಿರುಗಿದೆ.

ಮನೆಯಲ್ಲಿ ಕೂತ ರಶ್ಮಿ


ಕಳೆದ ಆರು ತಿಂಗಳಲ್ಲಿ ಸಾಕಷ್ಟು ಪ್ರಚಾರಗಿಟ್ಟಿಸಿಕೊಂಡಿದ್ದ ರಶ್ಮಿ ಸದ್ಯ ಮನೆಯಲ್ಲೇ ಕೂತಿದ್ದಾರೆ. ಮೂರ್‍ನಾಲ್ಕು ಚಿತ್ರಗಳಲ್ಲಿ ಏಕಕಾಲಕ್ಕೆ ಕಾಣಿಸಿಕೊಂಡಿದ್ದ ಇವರು, ಆನಂತರ ಯಾವ ಚಿತ್ರಗಳೂ ಸೆಟ್ಟೇರದ ಕಾರಣ, ಖಾಲಿ ಕೂರುವಂತಾಗಿದೆ.

ಈ ಹಿಂದೆ ರಶ್ಮಿ ಮೂರ್‍ನಾಲ್ಕು ವರ್ಷ ವನವಾಸ ಅನುಭವಿಸಿದರು. ಆ ನಂತರ ಒಂದಿಷ್ಟು ತೂಕ ಇಳಿಸಿಕೊಂಡು ಗ್ಲಾಮರಸ್ ಆಗಿ ಫೋಟೋಶೂಟ್ ಮಾಡಿಸಿಕೊಂಡಿದ್ದರು. ಹೀಗಾಗಿ ಹಲವು ಚಿತ್ರಗಳು ಅವರ ಕೈ ಹಿಡಿದಿದ್ದವು. ಅವೆಲ್ಲವೂ ಕಡಿಮೆ ಬಜೆಟ್ ಚಿತ್ರಗಳು ಆಗಿದ್ದರಿಂದ ಬಹುತೇಕ ಚಿತ್ರಗಳು ಅರ್ಧಕ್ಕೆ ನಿಂತಿವೆ. ಹೀಗಾಗಿ ರಶ್ಮಿ ಅವರನ್ನು ಮತ್ತೆ ವನವಾಸದಲ್ಲೇ ಇರುವಂತೆ ಮಾಡಿವೆ.

ಸದ್ಯ 'ಪ್ರೀತಿ ಕಿತಾಬ್' ಅನ್ನುವ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಅದು ಗೆದ್ದರೆ ಮಾತ್ರ ರಶ್ಮಿಯನ್ನು ಅವಕಾಶಗಳು ಹುಡುಕಿಕೊಂಡು ಬರಬಹುದು.



ಸದ್ದಿಲ್ಲದೇ ಶೂಟಿಂಗ್




'ಮಾಸ್ಟರ್‌ಪೀಸ್' ಸಿನಿಮಾದ ಶೂಟಿಂಗ್ ಮುಗಿಸಿರುವ ಯಶ್ ಸದ್ದಿಲ್ಲದೇ ಮತ್ತೊಂದು ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿದ್ದಾರೆ. ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಆಗಲೇ ಹತ್ತು ದಿನಗಳ ಶೂಟಿಂಗ್ ಕೂಡ ಮುಗಿದಿದೆ.

ಪ್ರಚಾರದಿಂದ ಸದಾ ದೂರ ಇರುವ ಯಶ್, ಇತ್ತೀಚೆಗೆ ತಮ್ಮ ಸಿನಿಮಾಗಳಿಗೆ ಮುಹೂರ್ತವನ್ನೂ ಮಾಡುವುದಿಲ್ಲ. ಚಿತ್ರೀಕರಣ ಮುಗಿಸಿ, ಆಡಿಯೋ ಬಿಡುಗಡೆಯ ಹೊತ್ತಿನಲ್ಲೇ ಚಿತ್ರದ ಬಗ್ಗೆ ಮಾತಾಡುತ್ತಾರೆ. ಅಲ್ಲಿವರೆಗೂ ಮೌನ ವಹಿಸುತ್ತಾರೆ. ಈ ಸಲವೂ ಅದೇ ಆಗಿದೆ. 'ಮಾಸ್ಟರ್‌ಪೀಸ್' ಶೂಟಿಂಗ್ ಮುಗಿಸಿಕೊಂಡ ಮಹೇಶ್ ನಿರ್ದೇಶನದ ಹೊಸ ಚಿತ್ರದಲ್ಲಿ ಬಿಜಿ ಆಗಿದ್ದಾರೆ.

ಈ ಚಿತ್ರಕ್ಕೆ ರಾಧಿಕಾ ಪಂಡಿತ್ ನಾಯಕಿ. ಯಶ್ ಜತೆ [illegible] ರಾಧಿಕಾ ಎರಡು ಚಿತ್ರಗಳನ್ನು ಕೈಬಿಟ್ಟಿದ್ದಾರೆ. ಅಂದುಕೊಂಡ[illegible] ಇದೇ ಹೊತ್ತಿನಲ್ಲಿ ರಾಧಿಕಾ, ಉಪೇಂದ್ರ ನಟನೆಯ 'ಕಲ್ಪನಾ [illegible] ನಟಿಸಬೇಕಿತ್ತು. ಅಲ್ಲದೇ ಮತ್ತೊಂದು ಹೊಸ ಚಿತ್ರಕ್ಕೂ ಕಾಲ್‌ಶೀಟ್ [illegible] ಎರಡೂ ಪ್ರಾಜೆಕ್ಟ್‌ಗೆ ಕೈಕೊಟ್ಟು ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ರಾಜಮೌಳಿ ಕನ್ನಡಕ್ಕೆ ಬ



ರಾಜಮೌಳಿ ಕನ್ನಡ ಸಿನಿಮಾದ ಟೀಸರ್ ಬಿಡುಗಡೆಗೆ ಬರುತ್ತಾರೆ ಎಂಬ ಸುದ್ದಿ ಹರಡಿದೆ. ಸದ್ಯ 'ಬಾಹುಬಲಿ 2' ಸಿನಿಮಾದಲ್ಲಿ ಬಿಜಿ ಆಗಿರುವ ರಾಜಮೌಳಿ ಅವರಿಗೆ ಟೀಸರ್ ಕಾರ್ಯಕ್ರಮಕ್ಕೆ ಬರುವಷ್ಟು ಪುರುಸೊತ್ತು ಇದೆಯಾ ಎಂಬ ಮಾತೂ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಆದರೆ ನಿರ್ದೇಶಕ ಆರ್.ಚಂದ್ರು ಮಾತ್ರ ರಾಜಮೌಳಿ ಬರುವುದನ್ನು ಖಚಿತಪಡಿಸಿದ್ದಾರೆ.

ಈಗಾಗಲೇ ರಾಜಮೌಳಿಯನ್ನು ಸಂಪರ್ಕಿಸಿರುವ ಚಂದ್ರು, ತಮ್ಮ 'ಲಕ್ಷ್ಮಣ' ಸಿನಿಮಾದ ಬಗ್ಗೆ ವಿವರಿಸಿದ್ದಾರೆ. ಅಲ್ಲದೇ ಈ ಸಿನಿಮಾದ ಮೂಲಕ ಹೊಸ ನಾಯಕನು ಸಿನಿಮಾರಂಗಕ್ಕೆ ಪ್ರವೇಶ ಮಾಡುತ್ತಿದ್ದಾನೆ ಅನ್ನುವುದನ್ನೂ ತಿಳಿಸಿದ್ದಾರೆ.

ಇದೇ ತಿಂಗಳ ಕೊನೆಯಲ್ಲಿ ಟೀಸರ್ ಬಿಡುಗಡೆ ಆಗಲಿದೆ. ಅನೂಪ್ ಹೇಗೆಲ್ಲ ನಟಿಸಿದ್ದಾನೆ ಅನ್ನುವ ಝಲಕ್ ಅಲ್ಲಿದೆ. ಅಲ್ಲದೇ ಒಂದು ನಿಮಿಷದ ಟೀಸರ್‌ಗಾಗಿ ಅ[illegible] ಖರ್ಚು ಮಾಡಿದ್ದಾರೆ ಚಂದ್ರು.

ಹನ್ನೆರಡು ಗೆಟಪ್‌ನಲ್ಲಿ

'ರಾಮ್‌ಲೀಲಾ' ಸಿನಿಮಾದಲ್ಲಿ ಚಿರಂಜೀವಿ ಸರ್ಜಾ [illegible] ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅದೂ ಹಾಡೊಂದ[illegible] ಕನ್ನಡ ಚಿತ್ರರಂಗದಲ್ಲಿಯೇ ಮೊದಲ ಪ್ರಯತ್ನ ಅಂತಾರೆ [illegible] ಈ ಹಾಡಿಗೆ ಐದು ದಿನಗಳ ಕಾಲ ಚಿತ್ರೀಕರಣ ನ[illegible]

'ತೇರಿ ಬ್ಯೂಟಿಫುಲ್ ಆಂಕೆ' ಎಂಬ [illegible] ಶುರುವಾಗುವ ಈ ಹಾಡನ್ನು ಪುನೀತ್ ರಾ[illegible] ಹಾಡಿರುವುದು ವಿಶೇಷ. ಅಲ್ಲದೇ ಜಾರ್ಜಿಯಾ ದೇಶದ ರಾಜಧಾನಿ ಟಿಬಿಲಿಸಿ ಹಾಗೂ ಸುತ್ತಲ ಸುಂದರ ವಾತಾವರಣದಲ್ಲಿ ಚಿತ್ರೀಕರಣ ಮಾಡಲಾಗಿದೆ. ವಿಜಯ್ ಕಿರಣ್ ನಿರ್ದೇಶನದಲ್ಲಿ ಚಿತ್ರ ಮೂಡಿ ಬಂದಿದ್ದು, ಈ ಹಾಡಿಗೆ ಮುರಳಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com